ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

45

ಆಗಸ್ಟ್ 8 ಗುರುವಾರ 2024

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 114 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಕುಡಿಯಲು ಹಣ ನೀಡದ ಸಾಕು ತಾಯಿಯನ್ನು ಕೊಚ್ಚಿ ಕೊಲೆಗೈದ ಆರೋಪಿಗೆ ಜೀವಾವಧಿ ಶಿಕ್ಷೆ

ಮೈಸೂರು, ಆ.7(ಆರ್‌ಕೆ)– ಕುಡಿಯಲು ಹಣ ಕೊಡದ ಸಾಕು ತಾಯಿಯನ್ನು ಮಚ್ಚಿನಿಂದ ಕೊಚ್ಚಿ ಕೊಲೆಗೈದಿದ್ದ ಆರೋಪಿಗೆ ಮೈಸೂರು ನ್ಯಾಯಾಲಯವು ಸಹಜ ಸಾವಿನವರೆಗೆ ಜೀವಾವಧಿ ಶಿಕ್ಷೆ ವಿಧಿಸಿದೆ.

ಪಿರಿಯಾಪಟ್ಟಣ ತಾಲೂಕು, ಗುಡ್ಡೇನಹಳ್ಳಿ ಗ್ರಾಮದ ಮಾರ್ಟಿನ ದೇವನ ಶಿಕ್ಷೆಗೊಳಗಾದ ಹತ್ಯೆ ಆರೋಪಿ. ಗ್ರಾಮದ ಸುಸ್ಯೆ ಮೇರಿ ಎಂಬುವರೇ ತಾನು ಸಾಕಿ ಸಲುಹಿದ ಮಗನಿಂದ ಹತ್ಯೆಗೀಡಾದವರು.

ಸುಸ್ಯೆ ಮೇರಿ ಒಂದು ಗಂಡು ಮಗುವನ್ನು ತಂದು ಸಾಕಿಕೊಂಡಿದ್ದರು. ಆ ಮಗು ಬೆಳೆದು ದೊಡ್ಡವನಾಗಿ ಪೇಂಟಿಂಗ್ ಕೆಲಸ ಮಾಡುತ್ತಿದ್ದ ಮಾರ್ಟಿನ ದೇವನ ಕುಡಿಯುವ ಚಟಕ್ಕೆ ದಾಸನಾಗಿದ್ದ. ಕುಡಿಯಲು ಹಣಕ್ಕಾಗಿ ಪೀಡಿಸಿ ಸುಸ್ಯೆ ಮೇರಿ ಅವರಿಗೆ ನಿತ್ಯ ಕಿರುಕುಳ ನೀಡುತ್ತಿದ್ದ.

ಹಣ ಕೊಡಲು ನಿರಾಕರಿಸಿದಾಗ 2022ರ ಜೂನ್ 28ರಂದು ಸಂಜೆ 4 ಗಂಟೆ ವೇಳೆಯಲ್ಲಿ ಮಾರ್ಟಿನ ದೇವನ, ತನ್ನ ಸಾಕು ತಾಯಿಯ ತಲೆಗೆ ಮಚ್ಚಿನಿಂದ ಹೊಡೆದು, ಎದೆ ಭಾಗಕ್ಕೆ ಕಾಲಿನಿಂದ ತುಳಿದು ಕೊಲೆಗೈದಿದ್ದ. ಬೈಲುಕುಪ್ಪೆ ಠಾಣೆಯ ಅಂದಿನ ಇನ್ಸ್‌ಪೆಕ್ಟರ್ ಬಿ.ಜಿ. ಪ್ರಕಾಶ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ ಆರೋಪಿ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಮೈಸೂರಿನ 6ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಪಿ.ಜಿ.ಸೋಮಶೇಖರ ವಾದ–ಪ್ರತಿವಾದ ಆಲಿಸಿ ಕೊಲೆ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಆರೋಪಿ ಮಾರ್ಟಿನ ದೇವನಗೆ ಸಹಜ ಸಾವಿನವರೆಗೆ ಜೀವಾವಧಿ ಶಿಕ್ಷೆ ಮತ್ತು 5,000 ರೂ. ದಂಡ ವಿಧಿಸಿ ಇಂದು ತೀರ್ಪು ನೀಡಿ ಆದೇಶಿಸಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕಿ ಎಂ. ಕಾಮಾಕ್ಷಿ ವಾದ ಮಂಡಿಸಿದ್ದರು.

ಸಿಎಂ ಸಿಟಿ ರೌಂಡ್ಸ್



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ಬೆಂಗಳೂರಿಗೆ ತೆರಳುವ ಮುನ್ನ ಮೈಸೂರಿನ ಮಹಾರಾಜ ಕಾಲೇಜು ಮೈದಾನ ಸೇರಿದಂತೆ ವಿವಿಧೆಡೆ ಸಂಚರಿಸಿದ್ದರು. ಈ ವೇಳೆ ವಿಧಾನಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್ ಮುಖ್ಯಮಂತ್ರಿಗಳಿಗೆ ಸಾಥ್ ನೀಡಿದರು.

ನಾಳೆ ಮಾಸಿಕ ಸಭೆ

ಮೈಸೂರು, ಆ. 7– ರೈಲ್ವೆ ಪೆನ್ಷನರ್ಸ್ ವೆಲ್‌ಫೇರ್ ಅಸೋಸಿಯೇಷನ್‌ನ ಮಾಸಿಕ ಸಭೆ ಆ.10ರಂದು ಬೆಳಗ್ಗೆ 11.30 ಗಂಟೆಗೆ ಅಸೋಸಿಯೇಷನ್ ಕಚೇರಿಯಲ್ಲಿ ನಡೆಯಲಿದೆ. ಸಭೆಯಲ್ಲಿ ಪ್ರಧಾನ ಕಾರ್ಯದರ್ಶಿ ಆರ್. ಬಸವರಾಜು, ಸ್ವಾಮಿನಾಥನ್ ಉಪಸ್ಥಿತರಿದ್ದು, ಸಂಘದ ಅಧ್ಯಕ್ಷ ಪಾರ್ಥಸಾರಥಿ ಅಧ್ಯಕ್ಷತೆ ವಹಿಸಲಿದ್ದಾರೆ.

ಇಬ್ಬರು ಮಹಿಳೆಯರು ನಾಪತ್ತೆ





ಮೈಸೂರು, ಆ.7(ಎಸ್‌ಪಿಎನ್)– ಪ್ರತ್ಯೇಕ ಪ್ರಕರಣದಲ್ಲಿ ನಂಜನಗೂಡು ತಾಲೂಕಿನ ತಗಡೂರು ಗ್ರಾಮದ ನಿವಾಸಿ ಸ್ನೇಹ, ಮೈಸೂರು ತಾಲೂಕು ಇಲವಾಲ ಗ್ರಾಮದ ನಿವಾಸಿ ಪಿ.ಸಹನಾ ನಾಪತ್ತೆಯಾಗಿರುವ ಸಂಬಂಧ ಪ್ರಕರಣ ದಾಖಲಾಗಿವೆ.

ಕವಲಂದೆ ಪೊಲೀಸ್ ಠಾಣೆ: ತಿ.ನರಸೀಪುರ ತಾಲೂಕಿನ ಸೋಸೆಲೆ ಹೋಬಳಿ ದೊಡ್ಡಬಾಗಿಲು ಗ್ರಾಮದ ನಿವಾಸಿಗಳಾಗಿದ್ದು, ಹಾಲಿ ನಂಜನಗೂಡು ತಾಲೂಕು ತಗಡೂರು ಗ್ರಾಮದಲ್ಲಿ ಶಶಿಕುಮಾರ್ ಹಾಗೂ ಪತ್ನಿ ಸ್ನೇಹ ಅವರ ತಾಯಿ ಮನೆಯಲ್ಲಿ ವಾಸವಾಗಿದ್ದರು. ಈ ದಂಪತಿಗೆ 6 ವರ್ಷಗಳ ಹಿಂದೆ ಮದುವೆಯಾಗಿ, ಇಬ್ಬರು ಹೆಣ್ಣು ಮಕ್ಕಳಿದ್ದಾರೆ.

ಮನೆಯಲ್ಲಿ ಬಡತನವಿದ್ದ ಕಾರಣ ಜುಲೈ 29ರಂದು ಬೆಳಗ್ಗೆ 10.30ಕ್ಕೆ ನಂಜನಗೂಡು ಕೈಗಾರಿಕಾ ಪ್ರದೇಶದಲ್ಲಿ ಯಾವುದಾದರೊಂದು ಕಾರ್ಖಾನೆಯಲ್ಲಿ ಕೆಲಸಕ್ಕೆ ಅರ್ಜಿ ಸಲ್ಲಿಸಿ, ಬರುತ್ತೇನೆ ಎಂದು ಮನೆಯಲ್ಲಿ ಹೇಳಿ ಹೋಗಿರುವ ಸ್ನೇಹ, ಇಲ್ಲಿಯವರೆಗೂ ಮನೆಗೆ ವಾಪಸ್ಸು ಬಂದಿಲ್ಲ. ನನಗೆ ತಿಳಿದಿರುವ ಎಲ್ಲಾ ಪರಿಚಿತರ ಮನೆಗಳಲ್ಲಿ ಹುಡುಕಾಡಿದರು ಪತ್ತೆಯಾಗದ ಕಾರಣ, ಕವಲಂದೆ ಠಾಣೆಯಲ್ಲಿ ಆ.7ರಂದು ಪ್ರಕರಣ ದಾಖಲಿಸಿದ್ದಾರೆ.

ಈ ಬಗ್ಗೆ ಮಾಹಿತಿ ಇದ್ದಲ್ಲಿ ಮೈಸೂರು ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಮ್ 0821–2444800 ಸಂಪರ್ಕಿಸುವುದು.

ಇಲವಾಲ ಪೊಲೀಸ್ ಠಾಣೆ: ಮೈಸೂರು ತಾಲೂಕು ಇಲವಾಲ ಗ್ರಾಮದ ಗೃಹಿಣಿ ಸಹನಾ ಆ.2ರಿಂದ ನಾಪತ್ತೆಯಾಗಿದ್ದು, ಅಂದು ಬೆಳಗ್ಗೆ ಎಂದಿನಂತೆ ನಾನು ಆರ್‌ಎಂಪಿ ಫ್ಯಾಕ್ಟರಿಗೆ ಕೆಲಸಕ್ಕೆ ಹೋಗಿ, ಸಂಜೆ ವಾಪಸ್ ಮನೆಗೆ ಬಂದಾಗ ನನ್ನ ಹೆಂಡತಿ ಪಿಸಹನಾ ಮನೆಯಲ್ಲಿ ಇರಲಿಲ್ಲ. ನನಗೆ ಪರಿಚಿತರಿರುವ ಎಲ್ಲರ ಮನೆಯಲ್ಲೂ ಹುಡುಕಾಡಿದರೂ ಪತ್ತೆಯಾಗದ ಕಾರಣ ಆ.5ರಂದು ಸಹನಾ ಪತಿ ಇಲವಾಲ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಮಾಹಿತಿ ಇದ್ದರೆ ಪಿಎಸ್‌ಐ ಮೊ.ಸಂ: 94808–05031, ದೂ.ಸಂ:0821–2402222 ಸಂಪರ್ಕಿಸುವಂತೆ ಕೋರಲಾಗಿದೆ.

ಆಲಹಳ್ಳಿ ಶ್ರೀಗಳು ಲಿಂಗೈಕ್ಯ

ಮಠಾಧಿಪತಿಗಳ ಗೋಷ್ಠಿಯ ಸಂತಾಪ




ಮೈಸೂರು, ಆ. 7– ಕೊಳ್ಳೇಗಾಲ ತಾಲೂಕು ಆಲಹಳ್ಳಿ ಶ್ರೀ ಪಟ್ಟದ ಮಠದ ಶ್ರೀ ಶಿವಕುಮಾರ ಸ್ವಾಮಿಗಳು ಬುಧವಾರ ಬೆಳಗಿನ ಜಾವ ಲಿಂಗೈಕ್ಯರಾದರು. ಅವರಿಗೆ 78 ವರ್ಷ ವಯಸ್ಸಾಗಿತ್ತು.

ಶ್ರೀಗಳಿಗೆ 16.3.1994ರಲ್ಲಿ ಆಲಹಳ್ಳಿ ಮಠಕ್ಕೆ ಆಶ್ರಮಾಧಿಕಾರವಾಗಿತ್ತು. ಶ್ರೀಮಠವನ್ನು ಎಲ್ಲಾ ರೀತಿಯಿಂದಲೂ ಅಭಿವೃದ್ಧಿಗೊಳಿಸಿದ್ದರು. ಭಕ್ತಾದಿಗಳಿಗೆ ಹಾಗೂ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಸಭಾಭವನ ಇತ್ಯಾದಿ ವ್ಯವಸ್ಥೆಗಳನ್ನು ಕಲ್ಪಿಸಿದ್ದರು. ಜ್ಯೋತಿಷ್ಯ ಶಾಸ್ತ್ರದಲ್ಲಿ ಪರಿಣತಿ ಹೊಂದಿದ್ದರು. ಭಕ್ತಾದಿಗಳ ಧಾರ್ಮಿಕ ಆಚರಣೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ಸರಳ ಸಜ್ಜನಿಕೆಯ ಸ್ವಭಾವದವರು ಹಾಗೂ ವಿನಯಶೀಲರಾಗಿದ್ದರು. ಮಠಗಳು, ಭಕ್ತಾದಿಗಳು, ಸಾರ್ವಜನಿಕರೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದರು. ಭಕ್ತರ ಸುಖ–ದುಃಖ ಹಾಗೂ ಕಷ್ಟಕಾರ್ಪಣ್ಯಗಳಲ್ಲಿ ಭಾಗಿಯಾಗುತ್ತಿದ್ದರು. ಸಮಾಜದ ಕಾರ್ಯಗಳಿಗೆ ಉದಾರ ರೀತಿಯಲ್ಲಿ ಸಹಾಯ ಮಾಡುತ್ತಿದ್ದರು.

ಕೆಲವು ತಿಂಗಳ ಹಿಂದೆ ಆರೋಗ್ಯದಲ್ಲಿ ವ್ಯತ್ಯಯ ಉಂಟಾಗಿ ಚಿಕಿತ್ಸೆ ಪಡೆದು ಸಂಪೂರ್ಣ ಗುಣಮುಖರಾಗಿದ್ದರು. ಸಕ್ರಿಯವಾಗಿ ಚಟುವಟಿಕೆಗಳಲ್ಲಿ ತೊಡಗಿಸಿ ಕೊಂಡಿದ್ದರು. ಇಂದು ಮುಂಜಾನೆ ವಯೋಮಾನದಿಂದಾಗಿ ಲಿಂಗೈಕ್ಯರಾಗಿ ದ್ದಾರೆ. ಶ್ರೀಗಳ ಅಗಲಿಕೆಯಿಂದ ಧಾರ್ಮಿಕ ಕ್ಷೇತ್ರಕ್ಕೆ ಕೊರತೆಯಾದಂತಾಗಿದೆ. ಶ್ರೀಗಳ ಆತ್ಮಕ್ಕೆ ಶಾಂತಿಯನ್ನು, ಅವರ ಅಗಲುವಿಕೆಯಿಂದ ಅವರ ಉತ್ತರಾಧಿಕಾರಿ ಗಳು, ಭಕ್ತಾದಿಗಳು ಹಾಗೂ ಸಾರ್ವಜನಿಕರಿಗೆ ಉಂಟಾಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲೆಂದು, ಉತ್ತರಾಧಿಕಾರಿ ಶ್ರೀ ನಾಗೇಂದ್ರ ಸ್ವಾಮಿಗಳಿಗೆ ಆದಷ್ಟೂ ಬೇಗ ಆಶ್ರಮಾಧಿಕಾರ ನೆರವೇರಿ, ಅವರು ಶ್ರೀಮಠವನ್ನು ಗುರುಗಳ ಮಾರ್ಗದಲ್ಲಿಯೇ ಭಕ್ತಾದಿಗಳು ಹಾಗೂ ಸಾರ್ವಜನಿಕರ ಸಹಾಯ–ಸಹಕಾರ, ಬೆಂಬಲಗಳಿಂದ ಮುಂದುವರೆಸಿಕೊಂಡು ಹೋಗುವಂತಾಗಲೆಂದು ಮೈಸೂರು ಮತ್ತು ಚಾಮರಾಜನಗರದ ವೀರಶೈವ–ಲಿಂಗಾಯತ ಮಠಾಧಿಪತಿ ಗಳ ಗೋಷ್ಠಿಯಿಂದ ಪ್ರಾರ್ಥಿಸಲಾಗಿದೆ.

ಎಂ.ಜಿ.ಮಹಾಂತೇಶ್ ನಿಧನ



ಮೈಸೂರು, ಆ.7– ಮೈಸೂರು ಗಾಯಿತ್ರಿಪುರಂ ನಿವಾಸಿ, ನಿವೃತ್ತ ಎಸ್‌ಬಿಎಂ ನೌಕರರಾದ ಎಂ.ಜಿ.ಮಹಾಂತೇಶ್(74) ಬುಧವಾರ ನಿಧನರಾದರು.

ಮೃತರು ಪತ್ನಿ, ಓರ್ವ ಪುತ್ರ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ(ಆ.8) ಮಧ್ಯಾಹ್ನ ವಿದ್ಯಾರಣ್ಯಪುರಂ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ. ಮಹಾಂತೇಶ್ ಅವರು ಹಾಲಿ ಸಮನ್ವಯ ಸೌಹಾರ್ದ ಸೊಸೈಟಿ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು.

ಗಾಳಿಯ ಕೊರತೆಯಿಂದ ಸೈಲಿಂಗ್ ಜೂನಿಯರ್ ನ್ಯಾಷನಲ್ಸ್ 2024ರ ಸ್ಪರ್ಧೆ ಮುಂದೂಡಿಕೆ

150ಕ್ಕೂ ಹೆಚ್ಚು ನಾವಿಕರು ಭಾಗಿ, ರೇಸಿಂಗ್ ಸ್ಥಳಕ್ಕೆ ಸಾರ್ವಜನಿಕರ ಪ್ರವೇಶ ನಿಷಿದ್ಧ



ಕೆಆರ್‌ಎಸ್‌ನ ಹಿನ್ನೀರಿನಲ್ಲಿ ಆಯೋಜಿಸಿದ್ದ ರೇಸಿಂಗ್‌ಗೆ ಸಿದ್ಧಗೊಂಡಿರುವ ಬೋಟ್ಸ್‌ಗಳು

ಮೈಸೂರು, ಆ.7(ಜಿಎ)–ರಾಯಲ್ ಮೈಸೂರು ಸೇಲಿಂಗ್ ಕ್ಲಬ್(ಆರ್‌ಎಂಎಸ್‌ಸಿ), ರಾಯಲ್ ಮದ್ರಾಸ್ ಯಾಚ್ ಕ್ಲಬ್ ಮತ್ತು ಕರ್ನಾಟಕ ಸ್ಟೇಟ್ ಸೈಲಿಂಗ್ ಅಸೋಸಿಯೇಷನ್‌ನ ಸಹಯೋಗದೊಂದಿಗೆ ಕೆಆರ್‌ಎಸ್‌ನ ಹಿನ್ನೀರಿನಲ್ಲಿ ಆಯೋಜಿಸಿದ್ದ ಅಸೋಸಿಯೇಷನ್ ಆಫ್ ಇಂಡಿಯಾ ಜೂನಿಯರ್ ನ್ಯಾಷನಲ್ಸ್ 2024ರ ಸ್ಪರ್ಧೆಯನ್ನು ಅಗತ್ಯವಾದ ಗಾಳಿಯ ಕೊರತೆಯಿಂದ ಮುಂದೂಡಲಾಯಿತು.

ಇಂದು ಬೆಳಗ್ಗೆ 9.20ಕ್ಕೆ ಸ್ಪರ್ಧೆ ಆರಂಭಗೊಳ್ಳಬೇಕಾಗಿತ್ತು. ಆದರೆ, ಸ್ಪರ್ಧೆ ನಡೆಸಲು ಅವಶ್ಯಕವಾದ ಗಾಳಿ ಇಲ್ಲದೇ ಆರ್‌ಎಂಎಸ್‌ಸಿ ಸಂಸ್ಥಾಪಕ ಕ್ಯಾಪ್ಟನ್ ಅರವಿಂದ್ ಶರ್ಮಾ, ರೇಸ್‌ಗಳನ್ನು ಮುಂದೂಡಲಾಗಿದೆ ಮತ್ತು ಗಾಳಿಯ ಪರಿಸ್ಥಿತಿಗಳು ಸುಧಾರಿಸಿದರೆ ಮಧ್ಯಾಹ್ನದ ವೇಳೆಗೆ ಆರಂಭಿಸಲಾಗುವುದು ಎಂದು ಘೋಷಿಸಿದರು. ಸ್ಪರ್ಧೆಯಲ್ಲಿ ಭಾಗವಹಿಸಲು ರಾಯಲ್ ಮದ್ರಾಸ್ ಯಾಚ್ ನೌಕೆ ಕ್ಲಬ್, ರಾಯಲ್ ಬಾಂಬೆ ಯಾಚ್ ಕ್ಲಬ್, ಆರ್ಮಿ ಯಾಚಿಂಗ್ ಮುಂಬೈ, ಭಾರತೀಯ ನೌಕಾಪಡೆ, ಭೋಪಾಲ್‌ನ ನ್ಯಾಷನಲ್ ಸೇಲಿಂಗ್ ಕ್ಲಬ್, ನೇವಿ ಬಾಯ್ಸ್ ಸ್ಕೌಟ್ ಕಂಪನಿ, ತೃಷ್ಣಾ ಸೇಲಿಂಗ್ ಕ್ಲಬ್ ಆರ್ಮಿ ಮತ್ತು ಆರ್‌ಎಂಎಸ್‌ಸಿ ಸೇರಿದಂತೆ ವಿವಿಧ ಕ್ಲಬ್‌ಗಳ 150ಕ್ಕೂ ಹೆಚ್ಚು ನಾವಿಕರು ಬೋಟ್‌ಗಳನ್ನು ಸಿದ್ಧಪಡಿಸಿಕೊಂಡು ಗಮನ ಸೆಳೆದರು.

ಇಂದು ಐಎಲ್‌ಸಿಎ 6 (ಓಪನ್ ಗರ್ಲ್ಸ್), ಐಎಲ್‌ಸಿಎ 4 (ಬಾಲಕರು ಮತ್ತು ಹುಡುಗಿಯರು), 29ಜಡಿ (ಮುಕ್ತ), 470 (ಓಪನ್ ಮಿಶ್ರ) ಮತ್ತು 420 (ಓಪನ್ ಮಿಶ್ರ), ಆಪ್ಟಿಮಿಸ್ಟ್ (ಮೇಲ್ ಫ್ಲೀಟ್), ಆಪ್ಟಿಮಿಸ್ಟ್ (ಗ್ರೀನ್ ಫ್ಲೀಟ್), ಟೆಕ್ನೋ 293 (ಅಂಡರ್ 13 ಮತ್ತು ಅಂಡರ್15 ಹುಡುಗರು ಮತ್ತು ಹುಡುಗಿಯರು), ಟೆಕ್ನೋ 293 (ಅಂಡರ್17 ಹುಡುಗರು ಮತ್ತು ಹುಡುಗಿಯರು), ರೇಸ್ ಬೋರ್ಡ್ (ಅಂಡರ್ 19 ಹುಡುಗರು ಮತ್ತು ಹುಡುಗಿಯರು) ಮತ್ತು ಐಕ್ಯೂ ಫಾಯಿಲ್ (ಯೂತ್ ಮತ್ತು ಜೂನಿಯರ್) ಸ್ಪರ್ಧೆಗಳು ರೇಸ್ ಏರಿಯಾದಲ್ಲಿ ಬೆಳಿಗ್ಗೆ 9.20ಕ್ಕೆ ಪ್ರಾರಂಭವಾಗಬೇಕಿತ್ತು. ಮುಂದೂಡಲಾಗಿದೆ.

ಆಸ್ಟ್ರೇಲಿಯಾದ ಹನ್ಸಾ ಬೋಟ್ 303 ಅನ್ನು ರೇಸ್‌ಗಾಗಿ ಆರ್‌ಎಂಎಸ್‌ಸಿ ಆಮದು ಮಾಡಿಕೊಂಡಿರುವುದು ಈ ವರ್ಷ ಪ್ರಮುಖ ಆಕರ್ಷಣೆಯಾಗಿತ್ತು. ಸಾರ್ವಜನಿಕರನ್ನು ನಿರ್ವಹಣೆ ಮಾಡಲು ಸಮಸ್ಯೆಯಾಗುತ್ತದೆ ಎಂದು ಮುನ್ನೆಚ್ಚರಿಕೆ ಕ್ರಮವಾಗಿ ರೇಸಿಂಗ್ ಸ್ಥಳಕ್ಕೆ ಸಾರ್ವಜನಿಕ ಪ್ರವೇಶವನ್ನು ನಿರ್ಬಂಧಿಸಲಾಗಿತ್ತು.

ಅತ್ಯಂತ ಕಿರಿಯ ಸ್ಪರ್ಧಿ ಎ. ಸಾಯಿ ವನೀಶಾ



ಈ ಬಾರಿಯ ಜೂನಿಯರ್ ನ್ಯಾಷನಲ್ಸ್ 2024ರ ಸ್ಪರ್ಧೆಯು 19 ವರ್ಷದ ಒಳಗಿನ ಸ್ಪರ್ಧಿಗಳಿಗೆ ಅವಕಾಶ ಕಲ್ಪಿಸಿದ್ದು, ಈ ಸ್ಪರ್ಧೆಯಲ್ಲಿ ಸಿಕಂದ್ರಬಾದ್ ಸೈಲಿಂಗ್ ಕ್ಲಬ್‌ನಿಂದ ಪ್ರತಿನಿಧಿಸುತ್ತಿರುವ 9 ವರ್ಷದ ಎ.ಸಾಯಿ ವನೀಶಾ ಅತ್ಯಂತ ಕಿರಿಯ ಸ್ಪರ್ಧಿಯಾಗಿದ್ದು, ಎಲ್ಲರ ಗಮನ ಸೆಳೆದಿದ್ದಾರೆ. ಇವರ ತಂದೆ ಮುರಳಿಕೃಷ್ಣ ಅವರು ಸೈಲಿಂಗ್‌ನ ಮಾಜಿ ಸ್ಪರ್ಧಿಯಾಗಿದ್ದಾರೆ. ಜೊತೆಗೆ ಈಕೆಯ ಅಣ್ಣನು ಈ ಕ್ರೀಡೆಯಲ್ಲಿ ತೊಡಗಿರುವುದರ ಪ್ರೇರಣೆಯಿಂದ ವನೀಶಾ ಸೈಲಿಂಗ್ ಕ್ರೀಡೆಯಲ್ಲಿ ಮುಂದುವರೆಯುತ್ತಿದ್ದಾರೆ.

ಸಿಎಫ್‌ಟಿಆರ್‌ಐನಿಂದ ಕೇರಳದ ವಯನಾಡಿಗೆ ಪೌಷ್ಟಿಕ ಆಹಾರ ರವಾನೆ

ದೀರ್ಘಕಾಲ ಶೇಖರಿಸಬಹುದಾದ, ರೋಗನಿರೋಧಕ ಶಕ್ತಿ ಹೆಚ್ಚಿಸುವ ಆಹಾರ ಪದಾರ್ಥಗಳ ಪೂರೈಕೆ



ಮೈಸೂರಿನ ಸಿಎಫ್‌ಟಿಆರ್‌ಐ ಆವರಣದಲ್ಲಿ ಕೇರಳದ ವಯನಾಡಿಗೆ ಆಹಾರ ಪದಾರ್ಥ ಕಳುಹಿಸುತ್ತಿರುವ ಸಂದರ್ಭ. ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್ ಹಾಗೂ ಆಹಾರ ವಿಜ್ಞಾನಿಗಳು ಚಿತ್ರದಲ್ಲಿದ್ದಾರೆ.

ಮೈಸೂರು, ಆ.7(ಪಿಎಂ)– ದೀರ್ಘಕಾಲ ಶೇಖರಿಸಬಹುದಾದ ಹಾಗೂ ರೋಗನಿರೋಧಕ ಶಕ್ತಿ ಹೆಚ್ಚಿಸುವ ಜೊತೆಗೆ ಪೌಷ್ಟಿಕತೆ ಒದಗಿಸುವ ಆಹಾರ ಪದಾರ್ಥಗಳು ಹಾಗೂ ಅಗತ್ಯ ಸಾಮಗ್ರಿಗಳನ್ನು ಮೈಸೂರಿನ ಸಿಎಸ್‌ಐಆರ್–ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ (ಸಿಎಫ್‌ಟಿಆರ್‌ಐ) ವತಿಯಿಂದ ಕೇರಳದ ವಯನಾಡ್‌ನಲ್ಲಿ ಪ್ರವಾಹ ಮತ್ತು ಭೂಕುಸಿತದಿಂದ ಸಂಕಷ್ಟಕ್ಕೆ ಸಿಲುಕಿರುವ ಸಂತ್ರಸ್ತರಿಗೆ ಕಳುಹಿಸಿಕೊಡಲಾಗಿದೆ.


ವಯನಾಡಿನ ದುರಂತದ ಹಿನ್ನೆಲೆಯಲ್ಲಿ 91 ಪರಿಹಾರ ಕೇಂದ್ರಗಳಲ್ಲಿ 9,300ಕ್ಕೂ ಹೆಚ್ಚು ಮಂದಿ ನಿರಾಶ್ರಿತರು ಆಶ್ರಯ ಪಡೆದಿದ್ದು, ಇಲ್ಲಿಗೆ ಸಿಎಫ್‌ಟಿಆರ್‌ಐ ತನ್ನ ತಂತ್ರಜ್ಞಾನದಡಿ ಸಿದ್ಧಪಡಿಸಿರುವ ಆಹಾರ ಸಾಮಗ್ರಿ ಪೂರೈಸುವ ಮೂಲಕ ಸಹಾಯಹಸ್ತ ಚಾಚಿದೆ. ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್ ನೇತೃತ್ವದಲ್ಲಿ ಪೌಷ್ಟಿಕಾಂಶಯುಕ್ತ ಆಹಾರ ಪದಾರ್ಥ ಮತ್ತು ಅಗತ್ಯ ಸಾಮಗ್ರಿಗಳನ್ನು ಆ.2, 5 ಮತ್ತು ಆ.7ರಂದು ಮೂರು ಬ್ಯಾಚ್‌ಗಳಲ್ಲಿ ರವಾನಿಸಲಾಗಿದೆ.

ಆಹಾರ ಪದಾರ್ಥಗಳಾದ ನ್ಯೂಟ್ರಾ ಸ್ಪಿರುಲಿನಾ ಚಿಕ್ಕಿ, ಫೋರ್ಟಿಫೈಡ್ ಮ್ಯಾಂಗೋ ಬಾರ್, ರಾಗಿ ಪಾನೀಯ ಮಿಕ್ಸ್, ರಾಗಿ ಉಪ್ಪಾಮಿಕ್ಸ್, ಕೋಕಮ್ ಹಣ್ಣಿನ ಬಾರ್, ಆಮ್ಲಾ ಕ್ಯಾಂಡಿ, ಹುಣಸೆ ಮಿಠಾಯಿ, ಹೈ ಪ್ರೋಟೀನ್ ರಸ್ಕ್, ಸಾಂಬಾರ್ ಮಿಕ್ಸ್, ತ್ವರಿತವಾಗಿ ಬಳಸಬಹುದಾದ ಸಾಂಬಾರ್ ಪುಡಿ, ಮಕ್ಕಳಿಗಾಗಿ ಎನರ್ಜಿ ಮತ್ತು ಪ್ರೋಟೀನ್‌ಯುಕ್ತ ಬರ್ಫಿ, ರಾಗಿ ಬಿಸ್ಕತ್ ಅನ್ನು ಕಳುಹಿಸಿಕೊಡಲಾಗಿದೆ. ಅಲ್ಲದೆ, ಇದರಲ್ಲಿ 6ರಿಂದ 10 ತಿಂಗಳ ಶಿಶುಗಳಿಗೆ ಅಗತ್ಯವಾದ ಆಹಾರ ಪದಾರ್ಥಗಳು ಒಳಗೊಂಡಿವೆ.

ಸಿಎಫ್‌ಟಿಆರ್‌ಐ ತಂತ್ರಜ್ಞಾನ ಬಳಸಿಕೊಂಡು ಸ್ಥಳೀಯವಾಗಿ ಅಭಿವೃದ್ಧಿಪಡಿಸಿರುವ ಈ ಆಹಾರ ಪದಾರ್ಥಗಳು ಪ್ರೋಟೀನ್ ಅಂಶ ಒಳಗೊಂಡಿದೆ. ಇದು ಅಪೌಷ್ಟಿಕತೆ ತಪ್ಪಿಸಲು ಹಾಗೂ ಸಂತ್ರಸ್ತರಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಿಸಲು ಸಹಕಾರಿಯಾಗಿದೆ. ಕೆಲ ಆಹಾರ ಪದಾರ್ಥಗಳನ್ನು ಬೇಯಿಸದೆಯೂ ತಿನ್ನಬಹುದು. ನೈಸರ್ಗಿಕ ವಿಪತ್ತಿನ ಸಂದರ್ಭದಲ್ಲಿ ಶಿಶುಗಳಿಗೆ ಸರಿಯಾದ ಪೌಷ್ಟಿಕಾಂಶಯುಕ್ತ ಆಹಾರ ಲಭ್ಯತೆಗೆ ಆದ್ಯತೆ ಕೊಡುವುದು ಅಗತ್ಯವಾದ ಹಿನ್ನೆಲೆಯಲ್ಲಿ ಶಿಶು ಆಹಾರಕ್ಕೆ ವಿಶೇಷ ಗಮನ ನೀಡಲಾಗಿದೆ.

ಗಿಡಮೂಲಿಕೆ ಹ್ಯಾಂಡ್ ಸ್ಯಾನಿಟೈಜರ್, ಒಣ ಬಟ್ಟೆಗಳನ್ನು ಸಹ ಆಹಾರ ಪದಾರ್ಥಗಳ ಜೊತೆಗೆ ಕಳುಹಿಸಿಕೊಡಲಾಗಿದೆ. ಸಿಎಫ್‌ಟಿಆರ್‌ಐ ವಿಜ್ಞಾನಿಗಳು ಮತ್ತು ಸಿಬ್ಬಂದಿ ವಯನಾಡ್‌ನ ಸಂಗ್ರಹಣಾ ಕೇಂದ್ರಗಳಿಗೆ ಆಹಾರ ಪದಾರ್ಥ ಹಾಗೂ ಅಗತ್ಯ ಸಾಮಗ್ರಿಗಳನ್ನು ತಲುಪಿಸಿದ್ದಾರೆ. ಕೇರಳ ಸರ್ಕಾರದ ವಯನಾಡಿನ ಸಬ್ ಕಲೆಕ್ಟರ್ ಅನಿತಾಕುಮಾರಿ ಅವರಿಗೆ ಪದಾರ್ಥಗಳನ್ನು ಹಸ್ತಾಂತರಿಸಲಾಗಿದೆ ಎಂದು ಸಿಎಫ್‌ಟಿಆರ್‌ಐ ಪ್ರಕಟಣೆ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

8.08.2024 ಗುರುವಾರ, ಮಳೆ ನಕ್ಷತ್ರ: ಆಶ್ಲೇಷ 03.08.2024 ರಿಂದ 12.08.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಉತ್ತರಾ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮೂಲವ್ಯಾಧಿ, ಪೈಲ್ಸ್ ರೋಗದ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10ರಿಂದ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ :** ಶ್ರೀಮತಿ ಸರೋಜರಾವ್ ಅವರ ಅಂತರಂಗದ ಅಲೆಗಳು (ಕವನ ಸಂಗ್ರಹ) ಬಿಡುಗಡೆ ಸಮಾರಂಭ, ಕೃತಿ ಬಿಡುಗಡೆ : ಕನ್ನಡ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಡಾ. ಬಿ.ವಿ. ವಸಂತಕುಮಾರ್, ಅಧ್ಯಕ್ಷತೆ : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕೃತಿ ಕುರಿತು : ಸಹಾಯಕ ಪ್ರಾಧ್ಯಾಪಕ ಡಾ. ಜಿ. ಆನಂದ, ಮುಖ್ಯ ಅತಿಥಿಗಳು : ಶಾರದಾ ವಿಲಾಸ ಕಾಲೇಜು ಡೀನ್ ಪ್ರೊ. ಸತ್ಯನಾರಾಯಣ, ಕವಯತ್ರಿ ಶ್ರೀಮತಿ ಸರೋಜರಾವ್, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ :** ಜಗನ್ನಾಥ ವಿದ್ಯಾರ್ಥಿ ವಿಶ್ರಾಂತಿ ವಿಹಾರ ಉದ್ಘಾಟನಾ ಸಮಾರಂಭ, ಸ್ಥಳ: ಅನಾಟಮಿ ಡಿಸೆಕ್ಷನ್ ಹಾಲ್ ಪಕ್ಕ, ಸಂಜೆ 4ಕ್ಕೆ.

■ **ಆದಿಕರ್ನಾಟಕ ಹಿತರಕ್ಷಣಾ ಹೋರಾಟ ಸಮಿತಿ :** ದಿವಂಗತ ವಿ. ಶ್ರೀನಿವಾಸ ಪ್ರಸಾದ್ ಹುಟ್ಟುಹಬ್ಬ ಆಚರಣೆ, ಸಾನ್ನಿಧ್ಯ : ವಿಶ್ವಮೈತ್ರಿ ಬುದ್ಧವಿಹಾರದ ಡಾ. ಕಲ್ಯಾಣಸಿರಿ ಭಂತೇಜಿ, ಉದ್ಘಾಟನೆ : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಅಧ್ಯಕ್ಷತೆ : ವಿಶ್ರಾಂತ ಪ್ರಾಧ್ಯಾಪಕ ಡಾ. ನೀಲಗಿರಿ ತಳವಾರ, ಮುಖ್ಯ ಅತಿಥಿಗಳು : ಮಾಜಿ ಶಾಸಕ ಎಸ್. ಬಾಲರಾಜ್, ಎನ್. ಭಾಸ್ಕರ್, ವಿ. ರಾಮಸ್ವಾಮಿ, ಕೆ. ಮುರಳಿ, ಸ್ಥಳ: ಸಮಿತಿ ಆವರಣ, ಮಾನಂದವಾಡಿ ರಸ್ತೆ, ಸಂಜೆ 7ಕ್ಕೆ.

■ **ವಿನಾಯಕ ಗೋಕಾಕ್ ವಾಙ್ಮಯ ಟ್ರಸ್ಟ್, ಬೆಂಗಳೂರು, ಮಹಾಜನ ಪ್ರಥಮ ದರ್ಜೆ ಕಾಲೇಜು, ಕನ್ನಡ ವಿಭಾಗ :** ವಿ.ಕೃ. ಗೋಕಾಕರ 113ನೇ ಜನುಮ ದಿನದ ಸಂದರ್ಭದಲ್ಲಿ ವಿ.ಕೃ. ಗೋಕಾಕ್ ಮತ್ತು ಕನ್ನಡ ಜಗತ್ತು ಕುರಿತು ವಿಚಾರ ಸಂಕಿರಣ, ಉಪಸ್ಥಿತರು : ಹಿರಿಯ ವಿದ್ವಾಂಸ ಡಾ. ಸಿ. ನಾಗಣ್ಣ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ಚಿಂತಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ, ಕಾಲೇಜು ಪ್ರಿನ್ಸಿಪಾಲ್ ಡಾ.ಬಿ.ಆರ್. ಜಯಕುಮಾರಿ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಅಭಿನವ ಬೆಂಗಳೂರು, ಮಹಾಜನ ವಿದ್ಯಾಸಂಸ್ಥೆ :** ಅಧ್ಯಾಪಕರ ಕೌಶಲ ಬಲವರ್ಧನೆ ಕಾರ್ಯಕ್ರಮ ಕಲಿಸುತ್ತಾ ಕಲಿಯುವ ಪರಿ, ಉಪಸ್ಥಿತರು : ಚಿಂತಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ಲೇಖಕ ಅಭಿನವ ರವಿಕುಮಾರ್, ಕಾಲೇಜು ಪ್ರಿನ್ಸಿಪಾಲ್ ಡಾ.ಬಿ.ಆರ್.ಜಯಕುಮಾರಿ, ಗೌರವ ಕಾರ್ಯದರ್ಶಿ ಡಾ. ವಿಜಯಲಕ್ಷ್ಮೀ ಮುರಳೀಧರ, ಸ್ಥಳ: ಕಾಲೇಜು ಆವರಣ, ಮಧ್ಯಾಹ್ನ 2.30ಕ್ಕೆ.

■ **ಬಸವ ಭಾರತ ಪ್ರತಿಷ್ಠಾನ, ಸಮಸ್ತ ಬಸವ ಪರ ಸಂಘಟನೆಗಳು:** ಬಸವ ಧರ್ಮ ಜಾಗೃತಿ ಅಭಿಯಾನ, ಇಷ್ಟಲಿಂಗಧಾರಣೆ ಶಿವಯೋಗ, ವಚನ ಪಠಣ, ಶ್ರಾವಣ ಮಾಸದ ಪ್ರವಚನ ಕಾರ್ಯಕ್ರಮ, ಶ್ರೀ ಇಮ್ಮಡಿ ಉದ್ಧಾನಸ್ವಾಮಿಗಳವರಿಂದ ಶಿವಯೋಗದ ಮಹತ್ವ ಕುರಿತು ಉಪನ್ಯಾಸ, ಸ್ಥಳ: ಶ್ರೀ ಬಸವೇಶ್ವರ ದೇವಸ್ಥಾನ, ಚಿರಕನಹಳ್ಳಿ, ತೆರಕಣಾಂಬಿ ಹೋಬಳಿ, ಗುಂಡ್ಲುಪೇಟೆ, ಸಂಜೆ 5ಕ್ಕೆ.

■ **ಶರಣ ಸಾಹಿತ್ಯ ಪರಿಷತ್ತು (ಮೈಸೂರು ನಗರ ಘಟಕ), ಕದಳಿ ಮಹಿಳಾ ವೇದಿಕೆ (ಮೈಸೂರು):** ವಚನ ಶ್ರಾವಣ–ಮನೆ ಮನೆಗೆ ಶ್ರಾವಣ ಮಾಸದ ಶರಣ ಸಂದೇಶ, ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ವಿದ್ಯಾಲಯದ ಪ್ರಾಧ್ಯಾಪಕ ಬಿ.ಎನ್.ಮಾರುತಿ ಪ್ರಸನ್ನ ಅವರಿಂದ ಉಂಡಡೆ ಭೂತನೆಂಬರು, ಉಣದಿರ್ದಡೆ ಚಕೋರಿಯೆಂಬರು–ಮಡಿವಾಳ ಮಾಚಿದೇವ ಕುರಿತು ಉಪನ್ಯಾಸ, ಸ್ಥಳ: ಕೆ.ಜಿ. ಕೃಷ್ಣಪ್ಪ, 240, ಗೋವಿಂದ ಕೃಪ, ತ್ಯಾಗ ಮಾರ್ಗ, ಸಿದ್ಧಾರ್ಥ ಬಡಾವಣೆ, ಸಂಜೆ 5.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸಂವಹನ–ಸಮಾಚಾರ, ಬಾನುಲಿ ಸರಣಿ, ಪ್ರಸ್ತುತಿ: ಅಲಕಾ ಕಟ್ಟೆಮನೆ, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಹಸಿರುಹೊನ್ನು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ, 8.30 ರಾಷ್ಟ್ರೀಯ ಬಾಹ್ಯಾಕಾಶ ದಿನದ ಸಂದರ್ಭದಲ್ಲಿ ವಿಜ್ಞಾನ ಭಾರತಿ, ವಿಜ್ಞಾನ ಸಂಚಿಕೆಯಲ್ಲಿ ವಿಶ್ವಬಾಹ್ಯಾಕಾಶ ಸಪ್ತಾಹದ ಕುರಿತು ಚರ್ಚೆ. ಭಾಗವಹಿಸುತ್ತಾರೆ: ಡಾ.ಎಸ್.ಎನ್.ಪ್ರಸಾದ್–ನಿವೃತ್ತ ಭೌತಶಾಸ್ತ್ರ ಪ್ರಾಧ್ಯಾಪಕರು ಹಾಗೂ ನಿವೃತ್ತ ಪ್ರಾಂಶುಪಾಲರು, ಪ್ರಾದೇಶಿಕ ಶೈಕ್ಷಣಿಕ ಸಂಸ್ಥೆ, ಮೈಸೂರು ಹಾಗೂ ಅಭಿಷೇಕ್. ಎ. ಎಸ್, ಭೌತವಿಜ್ಞಾನ ಸಹಾಯಕ ಪ್ರಾಧ್ಯಾಪಕರು, ಚಾಮರಾಜನಗರ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಮಿಥುನ್ ರಾಧಾಕೃಷ್ಣನ್–ಮ್ಯಾಂಡೋಲಿನ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ–ಕಾಡಿನಲ್ಲಿನ ಕಥೆಗಳು. ಭಾಗವಹಿಸುವವರು: ರಮೇಶ್‌ಕುಮಾರ್, ಹುಲಿಯೋಜನೆ ಅರಣ್ಯ ಸಂರಕ್ಷಣಾಧಿಕಾರಿಗಳು, ಮೈಸೂರು, ಪ್ರಸ್ತುತಿ: ಜಿ.ಶಾಂತಕುಮಾರ್

ಮಧ್ಯಾಹ್ನ: 12.30 ದೇವರನಾಮ–ರಶ್ಮಿ ಬಿನು, 12.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ: ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ.ಮೀನಾ, 1.20 ಭಾವಗೀತೆಗಳು– ವೃಂದಗಾನ, 4.00 ಜನಪದ ಸಂಗೀತ, 4.30 ರಸಮಂಜರಿ: ಸಂಸ್ಕೃತ ಕಾಶ್ಮೀರ ಹಾಗೂ ಕವಿ ಬಿಲ್ಹಣ, ಮಾತನಾಡುವವರು–ಹಿರಿಯ ಸಂಸ್ಕೃತ ವಿದ್ವಾಂಸರಾದ ಡಾ.ಹೆಚ್.ವಿ.ನಾಗರಾಜರಾವ್, 6.10 'ಸಂವಹನ ಸಮಾಚಾರ' ಬಾನುಲಿ ಸರಣಿ. ಪ್ರಸ್ತುತಿ: ಅಲಕಾ ಕಟ್ಟೆಮನೆ, 6.50 ಕೃಷಿರಂಗ–ಕಿಸಾನ್‌ವಾಣಿ, ಪ್ರಾಯೋಜಕರು: ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ನಂ ಕಂಪನಿ–ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ. ಧಾನ್ಯ ಸಂಸ್ಕರಣಾ ತಾಂತ್ರಿಕತೆಗಳು. ಈ ಕುರಿತು ಮೈಸೂರಿನ ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾಲಯದ ಪ್ರಧಾನ ವಿಜ್ಞಾನಿ ಡಾ.ಉಷಾ ಧರ್ಮರಾಜ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ, 8.00 ಸಂಸತ್ತಿನ ಉಭಯ ಕಲಾಪಗಳ ಸಮೀಕ್ಷೆ 8.15 ಯುವವಾಣಿ–ಕಾರ್ಯಕ್ರಮದಲ್ಲಿ ಸ್ವಾತಂತ್ರ್ಯೋತ್ಸವದ ಸಂಬಂಧವಾಗಿ 'ನಮ್ಮ ಭಾರತ ಹೆಮ್ಮೆಯ ಭಾರತ' ಕುರಿತು ಮಾತುಕತೆ ಕೇಳೋಣ. ಭಾಗವಹಿಸುತ್ತಾರೆ: ಶ್ರೀರಾಮ್. ಎಸ್.ಗೌಡ, ಪ್ರಿಯಾಂಕ, ನವೀನ್‌ಕುಮಾರ್. ಕೆ.ವಿ.ಸಂತೋಷ್, ನಡೆಸಿಕೊಡುತ್ತಾರೆ: ಮಂಜುನಾಥ್. ಕೆ.ಎಸ್, 10.00 ನಾಟಕ 'ಆ–ಭಾನುವಾರ', ರಚನೆ–ಸುಬ್ರಾಯ್ ಜಿ.ಭಟ್, ನಿರ್ಮಾಣ–ಉಮೇಶ್ ಎಸ್.ಎಸ್, 10.30 ಸವಿನೆನಪು

■ **ಜಗದ್ಗುರು ಶ್ರೀಮನ್ಮಧ್ವಾಚಾರ್ಯರ ಮೂಲ ಮಹಾ ಸಂಸ್ಥಾನ, ಶ್ರೀ ರಾಜೇಂದ್ರ ತೀರ್ಥರ ಪೂರ್ವಾಧಿ ಮಠ, ಶ್ರೀ ಮುನಿತ್ರಯ ಪೀಠ, ಶ್ರೀ ವ್ಯಾಸರಾಜ ಮಠ (ಸೋಸಲೆ):** ಶ್ರೀ ವಿದ್ಯಾ ಕರ್ಣಾಟಕ ಸಿಂಹಾಸನಾಧೀಶ್ವರರಾದ ಶ್ರೀ ಶ್ರೀ 1008 ಶ್ರೀ ವಿದ್ಯಾಶ್ರೀಶ ತೀರ್ಥ ಶ್ರೀಪಾದಂಗಳವರ 8ನೇ ಚಾತುರ್ಮಾಸ್ಯ, ಸ್ಥಳ: ಶ್ರೀ ವ್ಯಾಸರಾಜ ಮಠ, ಸೋಸಲೆ ಕ್ಷೇತ್ರ, ಸಂಜೆ.

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ, ಶ್ರೀ ಸುತ್ತೂರು ಮಠ, ಮೈಸೂರು :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ ಕಾರ್ಯಕ್ರಮ, ಬೆಳಗ್ಗೆ ವಿಶೇಷ ಪೂಜೆ, ಸಂಜೆ 6 ರಿಂದ ಸಾಮೂಹಿಕ ಪ್ರಾರ್ಥನೆ, ಡಾ.ಕೆ.ಅನಂತರಾಮು ಅವರಿಂದ ಲಕ್ಕಣ್ಣ ದಂಡೇಶ ವಿರಚಿತ 'ಶಿವತತ್ತ್ವ ಚಿಂತಾಮಣಿ' ಕುರಿತು ಪ್ರವಚನ, ವಿದುಷಿ ಎಂ.ವಿ.ಶುಭಾ ರಾಘವೇಂದ್ರ ಅವರಿಂದ ವಾಚನ, ಸ್ಥಳ: ಮೈಸೂರು ಶ್ರೀ ಸುತ್ತೂರು ಶಾಖಾ ಮಠ.

■ **ಅವಧೂತ ದತ್ತಪೀಠ:** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಮತ್ತು ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರ 21ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ಸಂಪೂರ್ಣ ಶ್ರೀಮದ್ರಾಮಾಯಣ ಮಹಾಯಾಗ (ಶ್ರೀ ಕಾರ್ಯಸಿದ್ಧಿ ಆಂಜನೇಯಸ್ವಾಮಿ ಸನ್ನಿಧಿಯಲ್ಲಿ).

ಮಾರ್ಬಳ್ಳಿಹುಂಡಿಯಲ್ಲಿಂದು

■ **ಶಾರದಾ ವಿಲಾಸ ಕಾನೂನು ಕಾಲೇಜು :** ರೈತರಾಗಿ ಒಂದು ದಿನ ಕಾರ್ಯಕ್ರಮ, ಉದ್ಘಾಟನೆ: ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಚಂದ್ರಶೇಖರ್, ಮುಖ್ಯ ಅತಿಥಿಗಳು : ಆಡಳಿತ ಅಧಿಕಾರಿ ಶ್ರೀಕಾಂತ್ ವಿ. ಬೇಗೂರು, ಅಧ್ಯಕ್ಷತೆ : ಶಾರದಾ ವಿಲಾಸ ಕಾಲೇಜು ಡೀನ್ ಶ್ರೀಮತಿ ಎ.ಎಂ. ಬೊಳ್ಳಮ್ಮ, ಸ್ಥಳ:ಮಾರ್ಬಳ್ಳಿಹುಂಡಿ, ಜಯಪುರ ಹೋಬಳಿ, ಬೆಳಗ್ಗೆ 10ಕ್ಕೆ.

ಹೊಮ್ಮರಗಳ್ಳಿಯಲ್ಲಿಂದು

■ **ಸರ್ಕಾರಿ ಪ್ರೌಢಶಾಲೆ, ಹೊಮ್ಮರಗಳ್ಳಿ, ಹಿರಣ್ಮಯಿ ಪ್ರತಿಷ್ಠಾನ ಮತ್ತು ಕಾವೇರಿ ಬಳಗ:** ಡಾ.ವಿ.ಕೃ ಗೋಕಾಕ್ ಜನ್ಮ ದಿನಾಚರಣೆ, ಪ್ರತಿಭಾ ಪುರಸ್ಕಾರ, ಅಧ್ಯಕ್ಷತೆ: ಮುಖ್ಯ ಶಿಕ್ಷಕ ಡಿ.ಪಿ.ಧರ್ಮಪ್ಪ, ಪ್ರಧಾನ ಭಾಷಣ: ಸಾಹಿತಿ ಬನ್ನೂರು ಕೆ.ರಾಜು, ಉಪಸ್ಥಿತರು: ವಿಶ್ರಾಂತ ಶಿಕ್ಷಕ ಜಿ.ವಿ.ರಾಜುಶೆಟ್ಟಿ, ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಜಯರಾಮ್, ಹಿರಣ್ಮಯಿ ಪ್ರತಿಷ್ಠಾನ ಅಧ್ಯಕ್ಷ ಎ.ಸಂಗಪ್ಪ, ಕಾವೇರಿ ಬಳಗದ ಅಧ್ಯಕ್ಷೆ ಶ್ರೀಮತಿ ಎನ್.ಕೆ.ಕಾವೇರಿಯಮ್ಮ, ಸ್ಥಳ: ಸರ್ಕಾರಿ ಪ್ರೌಢಶಾಲೆ ಆವರಣ, ಹೊಮ್ಮರಗಳ್ಳಿ, ಮಧ್ಯಾಹ್ನ 2ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 8 ಗುರುವಾರ 2024

₹4

ಸಂಪುಟ: 45 | ಸಂಚಿಕೆ: 114 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ನಕ್ಕರೆ ಅದೇ ಸ್ವರ್ಗ

ಬ್ಯಾಂಕ್ ಮ್ಯಾನೇಜರ್ : ನಮ್ಮ ಬ್ಯಾಂಕಿನಲ್ಲಿ ಇಂಟ್ರೆಸ್ಟ್ ಇಲ್ಲದೆ ಲೋನ್ ಕೊಡ್ತಾ ಇದ್ದೀವಿ.

ಗುಂಡ ಕೋಪದಿಂದ : ಕೊಡೋಕೆ ಇಂಟ್ರೆಸ್ಟ್ ಇಲ್ಲಾಂದ್ರೆ ಯಾಕ್ ಕೊಡ್ತೀರಾ ಬೇಡ ಬಿಡಿ...!

ಮೈಸೂರು ಮಿತ್ರ

ಗುರುವಾರ, 8 ಆಗಸ್ಟ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಪ್ರಪಂಚ ನೀ ಹೇಗೆ ಇದ್ದರೂ ದೂಷಿಸುತ್ತದೆ. ಶ್ರೀರಾಮನಂತಿದ್ದರು, ಸತ್ಯಹರಿಶ್ಚಂದ್ರನಂತಾದರೂ.. ಆದ್ದರಿಂದ ಲೋಕ ಮೆಚ್ಚಿಸುವ ಹುಚ್ಚು ಬೇಡ! ಸದಾಕಾಲ ನೀನು ನೀನಾಗಿರು...

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಧೈರ್ಯವಿದ್ದವನಿಗೆ ದೈವವೂ ಅನುಕೂಲ.

ನಿಮ್ಮ ಪತ್ರಗಳು

ರಾಜ್ಯ ಸರ್ಕಾರದ ಎರಡು ಹಗರಣಗಳು

ಮಾನ್ಯರೆ,

ವಾಲ್ಮೀಕಿ ಅಭಿವೃದ್ಧಿ ನಿಗಮ ಮತ್ತು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ಗಳ ಎರಡು ಹಗರಣಗಳನ್ನು ಮುಂದಿಟ್ಟುಕೊಂಡು ವಿರೋಧ ಪಕ್ಷಗಳು ಪಾದಯಾತ್ರೆ ನಡೆಸಿವೆ.

ಈ ಎರಡೂ ಹಗರಣಗಳ ತನಿಖೆಗಾಗಿ ರಾಜ್ಯ ಸರ್ಕಾರ ಈಗಾಗಲೇ ಮುಂದಾಗಿದೆ. ತನಿಖೆಗಳೂ ನಡೆಯುತ್ತಿವೆ. ವಾಲ್ಮೀಕಿ ನಿಗಮ ಹಗರಣದ ತನಿಖೆ ಮೂರು ತನಿಖಾ ಸಂಸ್ಥೆಗಳಿಂದ ನಡೆಯುತ್ತಿದೆ. ರಾಜ್ಯ ಸರ್ಕಾರದ ತನಿಖೆಯ ಜೊತೆಗೆ ಕೇಂದ್ರದ ಸಿಬಿಐ ಮತ್ತು ಇಡಿ ತನಿಖೆಗಳೂ ನಡೆಯುತ್ತಿವೆ. ಮುಡಾ ಹಗರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಿ ಎನ್ನುವುದು ವಿರೋಧ ಪಕ್ಷಗಳ ಪಾದಯಾತ್ರೆಯ ಒತ್ತಾಯ. ನಮ್ಮ ಜನತಂತ್ರ ವ್ಯವಸ್ಥೆಯಲ್ಲಿ ವಿರೋಧ ಪಕ್ಷಗಳಿಗೆ ಮುಖ್ಯ ಜಾಗ ಇದೆ. ವಿರೋಧ ಪಕ್ಷಗಳು ಜನತೆಯ ಧ್ವನಿಯಾಗಿ, ಜನಪರವಾಗಿ ಕೆಲಸ ಮಾಡಬೇಕು ಎಂಬುದು ಇದರ ಆಶಯ.

ಈಗ ಪಾದಯಾತ್ರೆ ನಡೆಸುತ್ತಿರುವ, (ರಾಜ್ಯದಲ್ಲಿ) ವಿರೋಧ ಪಕ್ಷಗಳಾಗಿರುವ ಜೆಡಿಎಸ್ ಮತ್ತು ಬಿಜೆಪಿ ಜನಧ್ವನಿಯಾಗಿವೆಯೇ? ಮೊದಲಿಗೆ ಪಾದಯಾತ್ರೆಯ ಬಗ್ಗೆ ಈ ಪಕ್ಷಗಳ ನಡುವೆ ಒಮ್ಮತ ಇರಲಿಲ್ಲ. ಜೆಡಿಎಸ್ ಯಾಕೆ ಪಾದಯಾತ್ರೆಯಲ್ಲಿ ತಾನು ಭಾಗವಹಿಸುವುದಿಲ್ಲ ಎಂಬುದನ್ನು ತಿಳಿಯಲು ಜೆಡಿಎಸ್ ನಾಯಕರಾದ ಕುಮಾರಸ್ವಾಮಿ ಮತ್ತು ಜಿ.ಟಿ.ದೇವೇಗೌಡರ ಹೇಳಿಕೆಗಳನ್ನು ಗಮನಿಸಬಹುದು. ಇದಲ್ಲದೆ ಇನ್ನೊಂದು ಅವ್ಯಕ್ತ ಭಯವೂ ಎರಡೂ ಪಕ್ಷಗಳನ್ನು ಕಾಡುತ್ತಿರಬಹುದು. ಮುಡಾ ಪ್ರಕರಣದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಈ ಎರಡೂ ಪಕ್ಷಗಳ ಅನೇಕ ನಾಯಕರು ಪಾಲುದಾರರಾಗಿರುವುದು ಅವರ ಆಂತರಿಕ ಭಯವನ್ನು ಹೆಚ್ಚಿಸಿದೆ. ಈ ಪ್ರಕರಣದ ಸಮಗ್ರ ತನಿಖೆ ನಡೆದರೆ, ಯಾರ್ಯಾರು ಅಪರಾಧಿ ಸ್ಥಾನದಲ್ಲಿ ನಿಲ್ಲಬೇಕಾಗಬಹುದೊ!

ಕೇಂದ್ರ ಸಚಿವ, ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಪಾದಯಾತ್ರೆಯಲ್ಲಿ ತಾವು ಭಾಗವಹಿಸುವುದಿಲ್ಲ ಎಂಬುದಕ್ಕೆ ಇನ್ನೊಂದು ಕಾರಣವನ್ನೂ ನೀಡಿದ್ದರು. ನಮ್ಮ ಕುಟುಂಬಕ್ಕೆ ವಿಷ ಉಣ್ಣಿಸುವವರ ಜೊತೆಯಲ್ಲಿ ನಾನು ಸೇರಬೇಕೆ? ಎಂದು ಕೇಳಿದ್ದರು. ಪ್ರಜ್ವಲ್ ರೇವಣ್ಣ ಲೈಂಗಿಕ ಹಗರಣಕ್ಕೆ ಸಂಬಂಧಿಸಿದ ಪೆನ್‌ಡ್ರೈವನ್ನು ಹಂಚಿದವರು ಯಾರು ಎಂಬ ಪ್ರಶ್ನೆಯನ್ನೂ ಅವರು ಇಟ್ಟಿದ್ದರು.

ಅದು ಯಾರೇ ಮಾಡಿರಲಿ, ಅದು ವಿಷ ಉಣ್ಣಿಸುವ ಕೆಲಸವೇ? ಈ ಲೈಂಗಿಕ ಹಗರಣ ಹೊರಬಂದದ್ದೇ ರಾಜ್ಯದ ಜನತೆಗೆ ರೇವಣ್ಣ ಕುಟುಂಬದ ಎಲ್ಲರ ನಿಜವಾದ ಮುಖಗಳು ಬಯಲಾದವು. ಇದು ಸಮಾಜದ ಆರೋಗ್ಯ ದೃಷ್ಟಿಯಿಂದ ಅಮೃತ ಉಣ್ಣಿಸುವ ಕೆಲಸ. ನೂರಾರು ಕುಟುಂಬಗಳು ನೆಮ್ಮದಿಯ ನಿಟ್ಟುಸಿರು ಬಿಟ್ಟವು.

ಕುಮಾರಸ್ವಾಮಿ ಪೆನ್‌ಡ್ರೈವ್ ಪ್ರಕರಣ ಬಯಲಾದ ಹೊತ್ತಿನಲ್ಲಿ ರೇವಣ್ಣ ಕುಟುಂಬದ ಜೊತೆ ತಮ್ಮ ಸಂಬಂಧ ಕಡಿದು ಹೋಗಿದೆ ಎಂದೂ ಹೇಳಿದ್ದರು. ಈಗ ರೇವಣ್ಣನವರ ಕುಟುಂಬವನ್ನು ನಮ್ಮ ಕುಟುಂಬ ಎಂದು ಹೇಳುತ್ತಿದ್ದಾರೆ. ಜೊತೆಗೆ ರೇವಣ್ಣ ಕುಟುಂಬ ಇನ್ನೂ ಜನತಾದಳದಲ್ಲಿಯೇ ಇದೆ.

ಸಿಬಿಐ ಸಂಸ್ಥೆಯನ್ನೇ ನೋಡಿ: ಅದು ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರದ ಕೈಯಲ್ಲಿನ ದಾಳ. ಈ ದಾಳವನ್ನು ತಮಗೆ ಬೇಕಾದ ರೀತಿಯಲ್ಲಿ ಉರುಳಿಸುವ ಲೆಕ್ಕಾಚಾರದಲ್ಲಿ ರಾಜ್ಯದಲ್ಲಿ ವಿರೋಧ ಪಕ್ಷಗಳು ಸಿಬಿಐ ತನಿಖೆಗೆ ಒತ್ತಾಯಿಸುತ್ತಿವೆ. ಇದೇನೂ ಗುಟ್ಟಲ್ಲ. ಜನರಿಗೂ ಇದು ತಿಳಿದು ಹೋಗಿದೆ. ಸಿದ್ದರಾಮಯ್ಯನವರನ್ನು ಮತ್ತು ಕಾಂಗ್ರೆಸ್ ಸರ್ಕಾರವನ್ನು ರಾಜ್ಯದಲ್ಲಿ ಉರುಳಿಸುವುದೇ ಪಾದಯಾತ್ರೆಯ ಉದ್ದೇಶ ಎಂಬುದು ಸ್ಪಷ್ಟ, ಈಗ ಚೆಂಡು ರಾಜ್ಯಪಾಲರ ಅಂಗಳದಲ್ಲಿದೆ. ಬಿಜೆಪಿ ಪಕ್ಷದ ಕೇಂದ್ರ ಸರ್ಕಾರ ನೇಮಿಸಿರುವ ರಾಜ್ಯಪಾಲರು ಹೇಗೆ ಕಾರ್ಯ ನಿಭಾಯಿಸುತ್ತಿದ್ದಾರೆಂಬುದು ದೇಶದ ಜನತೆಗೆ ಗೊತ್ತಿದೆ. ನಮ್ಮ ರಾಜ್ಯಪಾಲರು ನ್ಯಾಯದ ತಕ್ಕಡಿಯನ್ನು ಹಿಡಿದಿದ್ದಾರೆ. ಅವರ ಮೇಲೆ ನಮ್ಮ ಸಂವಿಧಾನವಿದೆ; ಸಂವಿಧಾನದ ನೀತಿ ನಿಯಮಗಳಿವೆ. ಅದನ್ನು ರಾಜ್ಯಪಾಲರು ಹೇಗೆ ನಿಭಾಯಿಸುತ್ತಾರೆ, ನೋಡೋಣ. ರಾಜ್ಯಪಾಲರಾಗಲಿ, ವಿರೋಧ ಪಕ್ಷಗಳಾಗಲಿ, ಪ್ರಜಾಪ್ರಭುತ್ವ ವಿರೋಧಿಯಾಗಿ ಹೆಜ್ಜೆ ಇಟ್ಟರೆ, ಅದನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ.

–ಪ್ರೊ.ಹಿ.ಶಿ.ರಾಮಚಂದ್ರೇಗೌಡ, ಸಿ.ಬಸವಲಿಂಗಯ್ಯ (ಬಸು), ಜಿ.ಪಿ.ಬಸವರಾಜು, ಪ್ರೊ. ಪಂಡಿತಾರಾಧ್ಯ, ನಾ.ದಿವಾಕರ, ಡಾ.ರತಿ ರಾವ್, ಕೆ.ಸುಶೀಲಾ

ಸಂಗೀತ ವಾದ್ಯಗಾರರನ್ನು ಕಡೆಗಣಿಸದಿರಲಿ !!

ಮಾನ್ಯರೇ,

ಮೈಸೂರಿನ ಸುಗಮ ಸಂಗೀತ ಪರಿಷತ್ ಡಾ.ನಾಗರಾಜ ಬೈರಿ ಅವರ ಸಾರಥ್ಯದಲ್ಲಿ ಉತ್ತಮ ಸೇವೆಗಳನ್ನು ಸಲ್ಲಿಸುತ್ತಿರುವುದು ಸ್ವಾಗತಾರ್ಹ ಸಂಗತಿ. ಈ ಸಂಸ್ಥೆ ನಗರದಲ್ಲಿ ಹಲವಾರು ಸುದುದ್ದೇಶ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ. ಆದರೆ ಇಲ್ಲಿ ಒಂದು ಕಡೆ ವ್ಯಥೆಯೂ ಆಗುತ್ತದೆ. ಇಲ್ಲಿ ಸುಗಮ ಸಂಗೀತ ಗಾಯಕ, ಗಾಯಕಿಯರಿಗೆ ಪ್ರಾಧಾನ್ಯತೆ ಕೊಟ್ಟು, ಸಂಗೀತ ವಾದ್ಯಗಾರರನ್ನು ಕಡೆಗಣಿಸಿರುತ್ತಾರೆ. ಅವರು ಹಾಡಬೇಕಾದರೆ ಹಿನ್ನೆಲೆ ಸಂಗೀತ ವಾದ್ಯಗಾರರ ಅವಶ್ಯಕತೆ ಬೇಡವೇ? ವಾದ್ಯಗಾರರಿಗೂ ಒಂದು ಅವಕಾಶ ಕೊಡಲಿ. ಹಿನ್ನೆಲೆ ಇಲ್ಲದೇ ಹಾಡುಗಾರಿಕೆ ಇಲ್ಲ, ತಾಳವಿಲ್ಲದ ರಾಗವಿಲ್ಲ. 10ರಿಂದ 15 ಗಾಯಕರನ್ನು ಆಡಿಷನ್ ಮೂಲಕ ಆರಿಸಿ ಮುಖ್ಯ ಕಾರ್ಯಕ್ರಮದಲ್ಲಿ ಹಾಡಲು ಅವಕಾಶ ಮಾಡಿಕೊಡುವುದಾಗಿ ಹೇಳಿದ್ದಾರೆ. ಈ ಮೇಲೆ ಹೇಳಿರುವ ವಿಷಯಗಳಲ್ಲಿ ವಾದ್ಯ ನುಡಿಸುವ ಕಲಾವಿದರ ಹೆಸರು ಬಂದೇ ಇಲ್ಲ. ಅವರನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ವಾದ್ಯಗಾರರನ್ನು ತುಂಬಾ ಕಡೆಗಣಿಸಲಾಗಿದೆ. ಇದು ವಾದ್ಯಗಾರರಿಗೆ ಆದ ವಂಚನೆಯಲ್ಲವೇ? ಗಾಯಕರಿಗೆ ಎಷ್ಟು ಒತ್ತು ಕೊಟ್ಟಿದ್ದಾರೆ ಅಂದರೆ ವಾದ್ಯ ನುಡಿಸುವವರನ್ನು ಅಷ್ಟೇ ಕಡೆಗಣಿಸಿದ್ದಾರೆ. ಮೈಸೂರಿನಲ್ಲಿ ಎಷ್ಟು ಗಾಯಕರಿದ್ದಾರೆ. ಅಷ್ಟೇ ವಾದ್ಯ ನುಡಿಸುವ ಹಿರಿಯ, ಕಿರಿಯ ಕಲಾವಿದರಿದ್ದಾರೆ. ಅವರೂ ಕುಟುಂಬ ನಿರ್ವಹಣೆಗಾಗಿ ಕಡುಕಷ್ಟಪಡುತ್ತಿದ್ದಾರೆ. ಆದುದರಿಂದ ಎಲ್ಲಾ ಕಲಾವಿದರಿಗೂ ಅವಕಾಶ ಸಿಗಲಿ ಎಂಬುದೇ ನಗರದ ಎಲ್ಲ ವಾದ್ಯಗಾರರ ಆಶಯ.

–ಎಲ್.ಎನ್.ದಯಾನಂದ, ನೊಂದ ತಬಲಾ ವಾದಕ, ಮೈಸೂರು

ನೊಂದವರ ನೋವನ್ನು ನೋಯ್ಯದವರು ಎಂತ ಬಲ್ಲರು

ಮಾನ್ಯರೆ,

ಪುಲ್ವಾಮಾ ಹುತಾತ್ಮ ಹೆಚ್. ಗುರು ವೀರಯೋಧನ ವಿಧವಾ ಪತ್ನಿ ಎಸ್. ಕಲಾವತಿ ಅವರಿಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ನಿವೇಶನ ನೀಡಲು ನಿರಾಕರಿಸಿರುವುದು ತುಂಬಾ ನೋವಿನ ಸಂಗತಿ. ನೊಂದವರ ನೋವನ್ನು ನೋಯ್ಯದವರು ಎಂತ ಬಲ್ಲರು ಎಂಬ ಮಾತಿಗೆ ಕಲಾವತಿ ಅವರ ವಿಷಯದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರ ಜ್ವಲಂತ ಸಾಕ್ಷಿಯಾಗಿದೆ. ಮಕ್ಕಳಿಲ್ಲದ ನಾನು ಒಂದು ನಿವೇಶನಕ್ಕಾಗಿ ಮುಡಾ ಕಚೇರಿಗೆ ಅಲೆದಲೆದು ಆಯುಕ್ತರನ್ನು ಭೇಟಿ ಮಾಡಿದರೂ ಅವರು ನನ್ನ ಮನವಿಗೆ ಸ್ಪಂದಿಸಲಿಲ್ಲ. ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ಯೋಧನನ್ನು ಈ ರೀತಿ ನಡೆಸಿಕೊಂಡಿರುವುದು ಘೋರ ಅನ್ಯಾಯ. ಅವರ ತ್ಯಾಗಕ್ಕೆ ಇಲ್ಲಿ ಯಾವುದೇ ಬೆಲೆಯೂ ಇಲ್ಲವಾಗಿದೆ. ಮುಡಾದ ಅಧಿಕಾರಿಗಳ ವರ್ತನೆ ಅತ್ಯಂತ ನೋವಿನ ಸಂಗತಿ ಎಂದು ಕಲಾವತಿ ಅವರು ಹೇಳಿರುವುದು ಎಂತಹವರ ಮನವನ್ನು ಕಲಕದೇ ಇರುವುದಿಲ್ಲ. ಇನ್ನಾದರೂ ಮುಡಾ ಅಧಿಕಾರಿ ವರ್ಗ ಸರ್ಕಾರಕ್ಕೆ ಮನವಿ ಸಲ್ಲಿಸಿ, ಅನುಮತಿ ಪಡೆದು ಹುತಾತ್ಮ ವೀರ ಯೋಧನ ಪತ್ನಿ ಕಲಾವತಿ ಅವರಿಗೆ ಉಚಿತವಾಗಿ ನಿವೇಶನವನ್ನು ಮಂಜೂರು ಮಾಡಿಸಿಕೊಡುವುದು ಸೂಕ್ತ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.



ಬಿಚ್ಚು ನುಡಿ

ವಿಕ್ರಂ ಮುತ್ತಣ್ಣ

ತಮ್ಮ ಮಕ್ಕಳ ಭವಿಷ್ಯಕ್ಕೆ ಕಂಡವರ ಮಕ್ಕಳ ಬಲಿ ಕೊಡುವುದು ತರವೇ?



ಇತ್ತೀಚೆಗೆ ಬೆಂಗಳೂರಲ್ಲಿ ನಡೆದಂತಹ ಪುಸ್ತಕ ಬಿಡುಗಡೆ ಸಮಾರಂಭವೊಂದರಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಮಾಜಿ ಸಂಸದ ಪ್ರತಾಪ ಸಿಂಹ ತೀಕ್ಷ್ಣ ಹಾಗೂ ಕಠೋರ ಸತ್ಯವೂ ಆದ ಒಂದು ಪ್ರಶ್ನೆಯನ್ನು ಎತ್ತಿದರು; **"ನಮ್ಮ ರಾಜಕೀಯ ನಾಯಕರೆಲ್ಲಾ ತಮ್ಮ ತಮ್ಮ ಮಕ್ಕಳ ಬಗ್ಗೆಯೇ ಚಿಂತಿಸುವುದಾದರೆ, ಪಕ್ಷಕ್ಕೋಸ್ಕರ ದುಡಿಯುತ್ತಿರುವಂತಹ ಸಾಮಾನ್ಯ ಕಾರ್ಯಕರ್ತರ ಮಕ್ಕಳ ಪಾಡೇನು? ಅವರನ್ನು ಯಾರು ಬೆಳೆಸುತ್ತಾರೆ?"** ಇದಕ್ಕೆ ಸಹಜ ಉತ್ತರ, ಯಾರೂ ಇಲ್ಲ.

ಎಲ್ಲ ರಾಜಕೀಯ ವಲಯದಲ್ಲೂ ಸಾಮಾನ್ಯವಾಗಿ ಹಿರಿಯ ರಾಜಕಾರಣಿಗಳು ತಮ್ಮ ಮಕ್ಕಳ ರಾಜಕೀಯ ಭವಿಷ್ಯವನ್ನು ರೂಪಿಸುವುದರಲ್ಲೇ ಸದಾ ಮಗ್ನರಾಗಿರುತ್ತಾರೆ. ಬಹುತೇಕರು ರಾಜಕೀಯ ನಾಯಕತ್ವ ತಮ್ಮ ಕುಟುಂಬಕ್ಕೆ ಬಳುವಳಿಯಾಗಿ ಬಂದಿದೆ ಎಂದೇ ಭಾವಿಸಿದ್ದಾರೆ. ಸ್ವಜನಪಕ್ಷಪಾತ ಎಂಬುದು ಈಗ ಜಾಗತಿಕ ವಿದ್ಯಮಾನವಾಗಿದ್ದು, ನಮ್ಮ ದೇಶದಲ್ಲಂತೂ ಅದು ಆಳವಾಗಿ ಬೇರೂರಿದೆ.

ನಮ್ಮ ಮೈಸೂರು ಜಿಲ್ಲೆ ಮತ್ತು ಅದರ ಸುತ್ತಮುತ್ತಲ ಪ್ರದೇಶಗಳನ್ನೇ ತೆಗೆದುಕೊಂಡರೆ ಕುಟುಂಬ ರಾಜಕಾರಣ ತಾಂಡವವಾಡುತ್ತಿದೆ. ಚಾಮರಾಜನಗರದಿಂದ ಹಿಡಿದು ಮಂಡ್ಯದವರೆಗೆ ಹಾಗೂ ಮಂಡ್ಯದಿಂದ ಕೊಡಗು, ಹಾಸನದವರೆಗೂ ಭೂಮೇಲ್ಮೈ ಬರೀ ಸ್ವಜನಪಕ್ಷಪಾತ ಶಿಶುಗಳಿಂದಲೇ ತುಂಬಿದೆ.

ನೀವು ಗುಂಡ್ಲುಪೇಟೆಯನ್ನೇ ತೆಗೆದುಕೊಳ್ಳಿ, ಇಲ್ಲಿ ಮಾಜಿ ಸಚಿವ ದಿವಂಗತ ಹೆಚ್.ಎಸ್.ಮಹದೇವಪ್ರಸಾದ್ ಅವರ ಮಗ ಹೆಚ್.ಎಂ.ಗಣೇಶಪ್ರಸಾದ್ ಈಗ ಶಾಸಕರಾಗಿದ್ದಾರೆ.

ಕೊಳ್ಳೇಗಾಲದ ಹಾಲಿ ಶಾಸಕ ಎ.ಆರ್.ಕೃಷ್ಣಮೂರ್ತಿ. ಅವರ ತಂದೆ ಬಿ.ರಾಚಯ್ಯನವರು ಸಂತೇಮರಳ್ಳಿ ಕ್ಷೇತ್ರದ ಶಾಸಕರಾಗಿದ್ದು, ಸಚಿವರು, ರಾಜ್ಯಪಾಲರೂ ಆಗಿದ್ದರು.

ಹುಣಸೂರಲ್ಲಿ ಶಾಸಕ ಜಿ.ಟಿ.ದೇವೇಗೌಡರ ಮಗ ಜಿ.ಡಿ. ಹರೀಶ್‌ಗೌಡ ಶಾಸಕರು.

ನರಸಿಂಹರಾಜ ಕ್ಷೇತ್ರದಲ್ಲಿ ಮಾಜಿ ಸಚಿವ ಅಜೀಜ್ ಸೇಟ್ ಅವರ ಪುತ್ರ ತನ್ವೀರ್ ಸೇಠ್ ನಿರಂತರವಾಗಿ ಶಾಸಕರಾಗುತ್ತಾ ಬಂದಿದ್ದಾರೆ.

ಹಾಗೆಯೇ ನಂಜನಗೂಡಿನಲ್ಲಿ ಮಾಜಿ ಸಂಸದ ದಿವಂಗತ ಧ್ರುವನಾರಾಯಣ್ ಅವರ ಪುತ್ರ ದರ್ಶನ್ ಧ್ರುವನಾರಾಯಣ್ ಶಾಸಕರಾಗಿದ್ದಾರೆ.

ಇನ್ನು, ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪುತ್ರ ಹಾಗೂ ವರುಣ ಕ್ಷೇತ್ರದ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಈಗ ವಿಧಾನಪರಿಷತ್ ಸದಸ್ಯರಾಗಿದ್ದಾರೆ.

ಹೆಚ್.ಡಿ.ಕೋಟೆಯಲ್ಲಿ ಶಾಸಕರಾಗಿದ್ದ ದಿ. ಎಸ್.ಚಿಕ್ಕಮಾದು ಅವರ ಪುತ್ರ ಅನಿಲ್‌ಕುಮಾರ್ ಈಗ ಶಾಸಕರಾಗಿದ್ದಾರೆ.

ಹಾಲಿ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹದೇವಪ್ಪನವರ ಮಗ ಸುನೀಲ್ ಬೋಸ್, ಚಾಮರಾಜನಗರ ಲೋಕಸಭಾ ಕ್ಷೇತ್ರದ ಹಾಲಿ ಸದಸ್ಯರು.

ಕೊಡಗಿನ ವಿರಾಜಪೇಟೆ ಕ್ಷೇತ್ರವನ್ನು ಕಾಂಗ್ರೆಸ್ ನಾಯಕ ಹಾಗೂ ವಿಧಾನಪರಿಷತ್ ಮಾಜಿ ಸದಸ್ಯರಾಗಿದ್ದ ದಿವಂಗತ ಎ.ಕೆ.ಸುಬ್ಬಯ್ಯನವರ ಪುತ್ರ ಎ.ಎಸ್.ಪೊನ್ನಣ್ಣ ಪ್ರತಿನಿಧಿಸುತ್ತಿದ್ದಾರೆ.

ಮಡಿಕೇರಿಯ ಹಾಲಿ ಶಾಸಕ ಡಾ.ಮಂಥರ್‌ಗೌಡ, ಅರಕಲಗೂಡು ಕ್ಷೇತ್ರದ ಶಾಸಕ ಎ.ಮಂಜು ಅವರ ಪುತ್ರ.

ಶ್ರೀರಂಗಪಟ್ಟಣದಲ್ಲಿ ಮಾಜಿ ಶಾಸಕರಾದ ಬಂಡಿಸಿದ್ದೇಗೌಡ ಹಾಗೂ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ ದಂಪತಿ ಪುತ್ರ ರಮೇಶ್‌ಬಾಬು ಬಂಡಿಸಿದ್ದೇಗೌಡ ಈಗ ಶಾಸಕರು.

ರೈತ ನಾಯಕ ಕೆ.ಎಸ್.ಪುಟ್ಟಣ್ಣಯ್ಯ ಪಾಂಡವಪುರ ಶಾಸಕರಾಗಿದ್ದರು. ಇದೀಗ ಅವರ ಪುತ್ರ ದರ್ಶನ್ ಪುಟ್ಟಣ್ಣಯ್ಯ ಇಲ್ಲಿ ಹಾಲಿ ಶಾಸಕರು.

ಮಂಡ್ಯದ ಹಾಲಿ ಸಂಸದ ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಕುಟುಂಬದ ಮತ್ತೋರ್ವ ರಾಜಕೀಯ ವಾರಸುದಾರ.

ಹಾಸನದ ಹೊಳೆನರಸೀಪುರದಲ್ಲಿ ಹೆಚ್.ಡಿ.ರೇವಣ್ಣ ಹಾಲಿ ಶಾಸಕರಾಗಿದ್ದರೆ, ಅವರ ಪುತ್ರ ಸೂರಜ್ ರೇವಣ್ಣ ವಿಧಾನಪರಿಷತ್ ಸದಸ್ಯ.

ಹಾಸನದ ಹಾಲಿ ಸಂಸದ ಶ್ರೇಯಸ್ ಪಟೇಲ್. ಅವರ ತಾತ ಜಿ.ಪುಟ್ಟಸ್ವಾಮಿಗೌಡ ಇದೇ ಕ್ಷೇತ್ರದ ಸಂಸದರೂ ಹಾಗೂ ಹೊಳೆನರಸೀಪುರದ ಶಾಸಕರೂ, ಸಚಿವರೂ ಆಗಿದ್ದರು.

ಇದನ್ನು ನೋಡಿದಾಗ ಯಾರಿಗಾದರೂ ಇದೇನಪ್ಪ ಬೇರೆಯವರಿಗೆ ಅವಕಾಶವೇ ಇಲ್ಲವಾ ಎಂಬ ಪ್ರಶ್ನೆ ಉದ್ಭವಿಸದೇ ಇರದು.

ಮೈಸೂರು ಮಹಾನಗರಪಾಲಿಕೆಯಲ್ಲಿಯೂ ಪರಿಸ್ಥಿತಿ ಇದಕ್ಕಿಂತಲೂ ಕೆಟ್ಟದಿದೆ. ಇಲ್ಲಿನ ಕೆಲವು ವಾರ್ಡ್‌ಗಳು ವಂಶ ಪಾರಂಪರ್ಯ ಪ್ರಭುತ್ವಗಳಾಗಿವೆ. ದುರದೃಷ್ಟವಶಾತ್, ಈ ರೀತಿಯ ಬಹುತೇಕ ರಾಜಕೀಯ ವಾರಸುದಾರರು, ಜನಸೇವೆಗೆ ಬದಲು, ತಮ್ಮ ಸ್ವಯಂ ಹಿತಾಸಕ್ತಿಗಾಗಿ ರಾಜಕೀಯಕ್ಕೆ ಬಂದಿದ್ದಾರೆ; ಅದಕ್ಕಾಗಿಯೇ ಮುಂದುವರೆದಿದ್ದಾರೆ.

ಸ್ವಜನಪಕ್ಷಪಾತಿಗಳು ಸದಾ ಪುನರಾಯ್ಕೆಯಾಗಲು ಹಣ ಮತ್ತು ಜಾತಿಯನ್ನು ಬಳಸಿಕೊಳ್ಳುವುದರ ಜೊತೆಗೆ **'ಹೊಂದಾಣಿಕೆ'** ರಾಜಕಾರಣದಲ್ಲಿ ತೊಡಗಿ, ಪರಸ್ಪರ ಸುರಕ್ಷತೆ (mutual safety) ಖಾತರಿಯೊಂದಿಗೆ ಪ್ರಾಬಲ್ಯ ಮುಂದುವರೆಸುತ್ತಾರೆ. ಇವೆಲ್ಲದರ ಪರಿಣಾಮ, ರಾಜಕೀಯವೆಂಬುದು ಒಂದು ರೀತಿಯಲ್ಲಿ ಕೆಲ ಕುಟುಂಬಗಳಿಗೆ ಇದು 'ಸುರಕ್ಷತಾ' ಉದ್ಯಮವಾಗಿ ಬಿಟ್ಟಿದೆ.

ಇಂತಹ ಕುಟುಂಬ ರಾಜಕಾರಣದ ಗೀಳು ಕೆಲವೊಮ್ಮೆ ರಾಜಕೀಯ ನಾಯಕರ ಭವಿಷ್ಯಕ್ಕೆ ಕುಂದುಂಟು ಮಾಡುತ್ತದೆ. ಮಕ್ಕಳನ್ನು ರಾಜಕೀಯವಾಗಿ ಮುಂದೆ ತರಲು ಅವರ ಅಪ್ಪಂದಿರು ಕುಟುಂಬ ಪರಂಪರೆಯ ಗೀಳಿನಿಂದ ತಮ್ಮ ವರ್ಚಸ್ಸಿಗೆ ಧಕ್ಕೆ ತಂದುಕೊಳ್ಳುತ್ತಾರೆ. ಇದಕ್ಕೆ ಇತ್ತೀಚಿಗಿನ ಸಿದ್ದರಾಮಯ್ಯ, ಹೆಚ್.ಡಿ.ದೇವೇಗೌಡ ಮತ್ತು ಬಿ.ಎಸ್. ಯಡಿಯೂರಪ್ಪ ಪ್ರಕರಣಗಳೇ ಸಾಕ್ಷಿ.

ಒಂದು ಕಾಲದಲ್ಲಿ ಸಿದ್ದರಾಮಯ್ಯನವರು ತಮ್ಮ ಕುಟುಂಬದ ಯಾವ ಸದಸ್ಯರು ರಾಜಕೀಯ ಪ್ರವೇಶ ಮಾಡುವುದಕ್ಕೆ

> **ಒಂದು ಎಚ್ಚರಿಕೆ; ಇಂತಹ ಪರಿಸ್ಥಿತಿಯಲ್ಲಿ ನಮ್ಮದು ಪ್ರಜಾಪ್ರಭುತ್ವ ಎಂದು ಹೇಳಲಾಗದು; ಬದಲಾಗಿ ಇದೊಂದು 'ಪ್ರಭು–ಪ್ರಭುತ್ವ' ಎನಿಸಿಕೊಳ್ಳುತ್ತದೆ. ಇದಕ್ಕಾ ನಮ್ಮ ಹಿರಿಯರು ತ್ಯಾಗ–ಬಲಿದಾನದ ಮೂಲಕ ಸ್ವಾತಂತ್ರ್ಯ ತಂದುಕೊಟ್ಟದ್ದು!?**

ಅವಕಾಶ ಮಾಡಿಕೊಡಲಾರರು ಎಂದು ಭಾವಿಸಲಾಗಿತ್ತು. ಆದರೆ... ಅವರು ಈಗ ತಮ್ಮ ಮೊಮ್ಮಗ ಧವನ್ (ದಿವಂಗತ ರಾಕೇಶ್ ಸಿದ್ದರಾಮಯ್ಯನವರ ಪುತ್ರ)ನನ್ನು ರಾಜಕೀಯಕ್ಕೆ ಎಳೆತರಲು ಸಜ್ಜಾಗಿದ್ದಾರೆ. ರಾಕೇಶ್ ಸಿದ್ದರಾಮಯ್ಯ ಅಕಾಲ ಮರಣಕ್ಕೆ ತುತ್ತಾಗುವವರೆಗೂ ಅವರೇ ಸಿದ್ದರಾಮಯ್ಯನವರ ರಾಜಕೀಯ ಉತ್ತರಾಧಿಕಾರಿಯಾಗುತ್ತಾರೆ ಎಂದು ಭಾವಿಸಲಾಗಿತ್ತು.

ಡಾ.ಯತೀಂದ್ರ ಸಿದ್ದರಾಮಯ್ಯ, ತಮ್ಮ ಸೌಮ್ಯ ಮುಖಭಾವ ಮತ್ತು ನಡವಳಿಕೆಯಿಂದ ಆಸ್ಪತ್ರೆಯ ವಾತಾವರಣಕ್ಕೆ ಸರಿ ಹೊಂದುತ್ತಿದ್ದರು. ಆದರೆ, ಅವರೂ ರಾಜಕೀಯ ಪ್ರವೇಶಿಸಿದರು. ಅಂದಿನಿಂದ, ಸಿದ್ದರಾಮಯ್ಯನವರು ಯಾವಾಗಲೂ ಒಂದು ರೀತಿ ಮಾನಸಿಕವಾಗಿ ನೆಮ್ಮದಿ ಇಲ್ಲದವರಂತೆ ಕಂಡು ಬರುತ್ತಾರೆ.

2018ರಲ್ಲಿ ಸಿದ್ದರಾಮಯ್ಯನವರು ತಮ್ಮ ಪುತ್ರ ಡಾ.ಯತೀಂದ್ರರಿಗಾಗಿ, ತಮ್ಮ ಸ್ವಕ್ಷೇತ್ರ ವರುಣವನ್ನು ಬಿಟ್ಟು ಕೊಟ್ಟು ತಾವು ಅದಾಗಲೇ ಎರಡು ಬಾರಿ ಸೋತಿದ್ದ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದರು. ಇದು ಯತೀಂದ್ರ ಅವರ ಮೇಲೆ ಸಿದ್ದರಾಮಯ್ಯನವರಿಗಿದ್ದ ಪ್ರೀತಿಯ ದ್ಯೋತಕದಂತಿತ್ತು. ಆದರೆ, ಆದದ್ದು!? ಓರ್ವ ಹಾಲಿ ಮುಖ್ಯಮಂತ್ರಿಯ ಹೀನಾಯ ಸೋಲು.

ಡಾ.ಯತೀಂದ್ರ, ಶಾಸಕರು ಹಾಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಡಳಿತ ಮಂಡಳಿಯ ಸದಸ್ಯರಾಗಿದ್ದರೂ, ತಮ್ಮ ತಾಯಿ ಪಾರ್ವತಿಯವರಿಗೆ ಸಂಬಂಧಿಸಿದ ವಿವಾದಾತ್ಮಕ ಭೂ ವ್ಯವಹಾರವನ್ನು ಸಮರ್ಥ ರೀತಿ ನಿಭಾಯಿಸುವಲ್ಲಿ ವಿಫಲರಾದರು.

ಇದು ವಿರೋಧ ಪಕ್ಷಗಳು ಸಿದ್ದರಾಮಯ್ಯನವರನ್ನು ಭ್ರಷ್ಟಾಚಾರಿ ಎಂದು ಆರೋಪಿಸಲು ಅವಕಾಶ ಮಾಡಿಕೊಟ್ಟಿತು. ಮಾತ್ರವಲ್ಲ, ಬಿಜೆಪಿ–ಜೆಡಿಎಸ್ ಮೈತ್ರಿಯ ಪಾದಯಾತ್ರೆ ಹಾಗೂ ರಾಜ್ಯಪಾಲರಿಂದ ಕಾರಣ ಕೇಳಿ ಶೋಕಾಸ್ ನೋಟಿಸ್ ಸ್ವೀಕರಿಸಬೇಕಾದ ಅನಿವಾರ್ಯತೆಗೆ ಅವರನ್ನು ಗುರಿ ಮಾಡಿತು.

ಅಂತಿಮವಾಗಿ, ಮಗನ ಮೇಲಿನ ಪ್ರೀತಿಗೋಸ್ಕರ ಸಿದ್ದರಾಮಯ್ಯ ತಮ್ಮ 'ಭ್ರಷ್ಟಾಚಾರ' ರಹಿತ ರಾಜಕಾರಣದ ನಡುವೆಯೂ ಕಳಂಕಿತರು ಎಂಬ ಆರೋಪಕ್ಕೆ ಗುರಿಯಾಗಬೇಕಾದ ಅನಿವಾರ್ಯತೆ ತಂದಿತ್ತಿತು.

ಅದೇ ರೀತಿ, ಹೆಚ್.ಡಿ.ದೇವೇಗೌಡರು ಜೆಡಿಎಸ್ ಪಕ್ಷವನ್ನು ತಳಮಟ್ಟದಿಂದ ಕಟ್ಟಿ ಬೆಳೆಸಿ, ಅದರ ಮೂಲಕವೇ ತಾವು ದೇಶದ ಪ್ರಧಾನಿಯೂ ಆದವರು. ಆದರೆ, ಅವರ ಕುಟುಂಬದ ಕೆಲ ಸದಸ್ಯರು ಪಕ್ಷದಲ್ಲಿ ತೊಡಗಿಸಿಕೊಂಡು ಗೊಂದಲಕಾರಿ ಮಾತ್ರವಲ್ಲ ಹೇಸಿಗೆ ಪರಿಸ್ಥಿತಿ ತಂದಿಟ್ಟರು–ಒಂದು ದಿನ ಬಿಜೆಪಿ ಜೊತೆ–ಮತ್ತೊಂದು ದಿನ ಕಾಂಗ್ರೆಸ್–ಹೀಗೆ ಪಕ್ಷದ ತತ್ವ ಸಿದ್ಧಾಂತಗಳ ವಿಚಾರದಲ್ಲಿ ಜನರನ್ನೇ ಗೊಂದಲಕ್ಕೆ ಗುರಿ ಮಾಡಿದರು.

ನಂತರ, ದೇವೇಗೌಡರ ಮೊಮ್ಮಕ್ಕಳು ಸಹ ರಾಜಕೀಯಕ್ಕೆ ಬಂದು, ಕೊನೆಗೆ ಅವರು 'ಹೊಸ ವ್ಯವಹಾರ'ಕ್ಕೆ ಕೈ ಹಾಕಿ ಊರೆಲ್ಲಾ ಸುದ್ದಿಯಾದರು. ಹೋಗಲಿ ಬಿಡಿ... ಮಾಡಿದವರ ಪಾಪ ಆಡಿದವರ ಬಾಯಲ್ಲಿ...!

ಅಂತಿಮವಾಗಿ, ತಮ್ಮ ಮಕ್ಕಳ ಹಾಗೂ ಮೊಮ್ಮಕ್ಕಳ ಮೇಲಿನ ಅತೀವ ಪ್ರೀತಿಯಿಂದಾಗಿ ದೇವೇಗೌಡರು ಬೇರೆಲ್ಲವನ್ನೂ ಹೊರತು ಪಡಿಸಿ ಒಂದು ಒಳ್ಳೆಯ ಕೌಟುಂಬಿಕ ಪರಂಪರೆಗೆ ಕಳಂಕ ತಂದುಕೊಂಡರು.

ನಂತರ, ಬಿ.ಎಸ್.ಯಡಿಯೂರಪ್ಪನವರನ್ನು ತೆಗೆದುಕೊಂಡರೆ ಭಾರತೀಯ ಜನತಾ ಪಕ್ಷವನ್ನು ಕರ್ನಾಟಕದಲ್ಲಿ ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ಸುತ್ತಿ ಬುಡಮಟ್ಟದಿಂದ ಕಟ್ಟಿದವರು. ಪಕ್ಷ ಬೆಳೆಯಿತು, ಅಧಿಕಾರಕ್ಕೂ ಬಂತು. ಅವರ ಮಕ್ಕಳೂ ಪಕ್ಷ ರಾಜಕೀಯದಲ್ಲಿ ತೊಡಗಿಸಿಕೊಂಡರು. ಆನಂತರ ಅವರ ಮೇಲೆ ಸರಣಿ ಭ್ರಷ್ಟಾಚಾರ ಆಪಾದನೆ ಹೊರಿಸಲಾಯಿತು. ಕೊನೆಗೊಮ್ಮೆ ಅವರು ಜೈಲಿಗೂ ಹೋಗಬೇಕಾದ ದುರ್ಗತಿ ಬಂತು. ಮತ್ತಿನ್ನೇನು...

ಅಂತಿಮವಾಗಿ, ಓರ್ವ ನಿರ್ಣಾಯಕ ಮತ್ತು ಬಲಿಷ್ಠ ನಾಯಕರಾಗಿದ್ದ ಯಡಿಯೂರಪ್ಪನವರು ಕೌಟುಂಬಿಕ ವ್ಯಾಮೋಹದಿಂದಾಗಿ ತಾವು ಹೋರಾಟದಿಂದ ಗಳಿಸಿದಂತಹ ಘನತೆ–ಗೌರವ ನಾಶ ಮಾಡಿಕೊಂಡರು.

ಕುಟುಂಬ ರಾಜಕಾರಣದ ಅತ್ಯಂತ ಕಳವಳಕಾರಿ ಸಂಗತಿಯೆಂದರೆ ಅದು ಸಮುದಾಯದ ಬೆಂಬಲದ ಮೇಲೆ ಅವಲಂಬಿತವಾಗಿರುವುದು.

ಸಿದ್ದರಾಮಯ್ಯನವರ ರಾಜಕೀಯ ಪ್ರಸ್ತುತತೆಯು ಕುರುಬ ಮತ್ತು ಇತರ ಹಿಂದುಳಿದ ವರ್ಗಗಳಿಂದ ನಿರ್ಧರಿತವಾಗಿದ್ದರೆ, ಯಡಿಯೂರಪ್ಪನವರದ್ದು ವೀರಶೈವ ಲಿಂಗಾಯಿತರು, ಮತ್ತೆ ಜೆಡಿಎಸ್ ಪಕ್ಷ ಒಕ್ಕಲಿಗರ ಪ್ರಾಬಲ್ಯ ಹೊಂದಿದೆ.

ಅದಾಗ್ಯೂ, ಈ ಮೂರು ಸಮುದಾಯಗಳಿಗೆ ಸೇರಿದ ಜನರು, ಅವರ ಸಮುದಾಯದಲ್ಲಿನ ಬಡಜನರಿಗೆ ಈ ಮೂರು ಕುಟುಂಬಗಳು ಏನು ಮಾಡಿವೆ ಎಂದು ಎಂದಾದರೂ ಕೇಳಿದ್ದಾರೆಯೇ?

ಅವರು ತಮ್ಮ ತಮ್ಮ ಸಮುದಾಯದ ಬಡ ಮಕ್ಕಳಿಗಾಗಿ ಎಷ್ಟು ವಿದ್ಯಾರ್ಥಿ ವೇತನವನ್ನು ಕಲ್ಪಿಸಿದ್ದಾರೆ? ಅವರದೇ ಸಮುದಾಯದ ಎಷ್ಟು ಬಡ ಜನರ ಮೇಲೆತ್ತಿದ್ದಾರೆ? ಇದರ ಬಗ್ಗೆ ಒಂದು ಸಮೀಕ್ಷೆಯನ್ನು ಮಾಡುವ ಬದಲು 'ಜಾತಿ ಗಣತಿ' ಮಾಡಿ ಎಂದೇಕೆ ದುಂಬಾಲು ಬೀಳುತ್ತಾರೆ?

ಏಕೆಂದರೆ... ರಾಜಕೀಯ ನಾಯಕರ ಮತ ಬ್ಯಾಂಕ್ ಅರಿಯಲು ಮತ್ತು ಅವರ ರಾಜಕೀಯ ಭವಿಷ್ಯಕ್ಕೆ ರಣತಂತ್ರವನ್ನು ಹೆಣೆಯಲು ಇದು ಸಹಾಯಕವೂ ಆಗುತ್ತದೆ. ಗೊತ್ತಾಯ್ತಾ...!

ಬಹುಮುಖ್ಯವಾಗಿ, ಯಾರೊಬ್ಬರೂ ಕೇಳಲೇಬೇಕಾದ್ದು; ಈ ಮೂರು ಕುಟುಂಬಗಳು ತಮ್ಮ ಸಮುದಾಯದ ಹೊಸ ಪೀಳಿಗೆಯ ನಾಯಕರನ್ನು ಬೆಳೆಸಿದ್ದಾರೆಯೇ? ಇದಕ್ಕೆ ಉತ್ತರ ಖಂಡಿತ 'ಇಲ್ಲ'.

ಬಹುತೇಕ, ಏಕೆ ಎಲ್ಲಾ ಹಿರಿಯ ರಾಜಕೀಯ ನಾಯಕರು ತಮ್ಮ ಮಕ್ಕಳ ಭವಿಷ್ಯಕ್ಕಾಗಿ ಸಮುದಾಯದ ಭರವಸೆಯ ಯುವ ನಾಯಕರ ರಾಜಕೀಯ ಭವಿಷ್ಯವನ್ನು ಸಾಕಷ್ಟು ಬಾರಿ ಬಲಿ ಪಡೆದಿದ್ದಾರೆ. ಆ ಮೂಲಕ ತಳಮಟ್ಟದ ಹೋರಾಟದ ಧ್ವನಿಯನ್ನು ಅಡಗಿಸಿದ್ದಾರೆ. ಅಂತಿಮವಾಗಿ ತಾವು ಪ್ರತಿನಿಧಿಸುವ ಸಮುದಾಯವನ್ನು ಬಲಿ ಪಡೆದಿದ್ದಾರೆ ಎಂಬ ಕೂಗು ಇತ್ತೀಚೆಗೆ ವ್ಯಾಪಕವಾಗಿ ಕೇಳಿಬರುತ್ತಿದೆ.

ಪ್ರಸ್ತುತ, ಬಿಜೆಪಿ–ಜೆಡಿಎಸ್ ಮೈತ್ರಿಯ ಮೈಸೂರು ಚಲೋ ಪಾದಯಾತ್ರೆಯನ್ನೇ ತೆಗೆದುಕೊಳ್ಳೋಣ; ಮುಂಚೂಣಿಯಲ್ಲಿ ಒಂದು ಕಡೆ ಯಡಿಯೂರಪ್ಪ ಅವರ ಪುತ್ರ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಮತ್ತೊಂದು ಬದಿ ಕುಮಾರಸ್ವಾಮಿ ಅವರ ಪುತ್ರ ನಿಖಿಲ್ ಕುಮಾರಸ್ವಾಮಿ ರಾರಾಜಿಸುತ್ತಿದ್ದಾರೆ. ಉಳಿದವರು ಇಲ್ಲಿ ಗೌಣ ಎಂಬಂತೆ ಬಿಂಬಿತವಾಗುತ್ತಿಲ್ಲವೆ!?

ಕೌಟುಂಬಿಕ ಪ್ರಭುತ್ವದ ನಾಯಕರು ತಮ್ಮ ಮಕ್ಕಳ ಮೇಲಿನ ಮಮತೆಗಾಗಿ, ತಮ್ಮ ಸಮುದಾಯದ ಭವಿಷ್ಯದ ನಾಯಕತ್ವವನ್ನೇ ಕೊಂದಿದ್ದಾರೆ– ಅದರರ್ಥ ಹೊಸ ಆಲೋಚನೆಗಳಿಗೆ ಇಲ್ಲಿ ಅವಕಾಶವಿಲ್ಲ. ಇಂತಹ ಸಮುದಾಯಗಳಿಗೆ ಸೇರಿದ ಜನ ತಮ್ಮ ಪ್ರಗತಿ ಹಾಗೂ ಸಮೃದ್ಧಿಗೆ ಕೆಲವೇ ಕೆಲವು ಕುಟುಂಬದ ದಯೆ–ದಾಕ್ಷಿಣ್ಯಕ್ಕೆ ಅನಿವಾರ್ಯವಾಗಿ ಒಳಗಾಗಿದ್ದಾರೆ.

ಒಂದು ಎಚ್ಚರಿಕೆ; ಇಂತಹ ಪರಿಸ್ಥಿತಿಯಲ್ಲಿ ನಮ್ಮದು ಪ್ರಜಾಪ್ರಭುತ್ವ ಎಂದು ಹೇಳಲಾಗದು; ಬದಲಾಗಿ ಇದೊಂದು 'ಪ್ರಭು–ಪ್ರಭುತ್ವ' ಎನಿಸಿಕೊಳ್ಳುತ್ತದೆ. ಇದಕ್ಕಾ ನಮ್ಮ ಹಿರಿಯರು ತ್ಯಾಗ–ಬಲಿದಾನದ ಮೂಲಕ ಸ್ವಾತಂತ್ರ್ಯ ತಂದುಕೊಟ್ಟದ್ದು!?

Email: vikram@starofmysore.com

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ಮೈಸೂರು ಮಿತ್ರ


ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ


ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಆಗಸ್ಟ್ 8 ಗುರುವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 114 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4





ಭಾರತದ ಚಿನ್ನದ ಕನಸು ನುಚ್ಚುನೂರು; ದೇಹದ ತೂಕ ಬರೀ 100 ಗ್ರಾಂ ಹೆಚ್ಚಳದಿಂದ

ಒಲಿಂಪಿಕ್ಸ್ ಸ್ಪರ್ಧೆಯಿಂದಲೇ ವಿನೇಶ್ ಫೋಗಟ್ ಔಟ್

ಪ್ಯಾರಿಸ್: ಪ್ಯಾರಿಸ್ ಒಲಿಂಪಿಕ್ಸ್ ಕ್ರೀಡಾಕೂಟದ ಕುಸ್ತಿಯಲ್ಲಿ ಫೈನಲ್ ಪ್ರವೇಶಿಸುವ ಮೂಲಕ ಐತಿಹಾಸಿಕ ಚಿನ್ನದ ಪದಕ ಕನಸು ಕಂಡಿದ್ದ ಭಾರತದ ಮಹಿಳಾ ಕುಸ್ತಿಪಟು ವಿನೇಶ್ ಫೋಗಟ್ ದೇಹದ ತೂಕ ಬರೀ 100 ಗ್ರಾಂ ಹೆಚ್ಚಳದಿಂದಾಗಿ ಅನರ್ಹಗೊಂಡಿದ್ದಾರೆ.


50 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಅವರು ಇದೀಗ ನಿಗದಿತ ತೂಕಕ್ಕಿಂತ ಕೇವಲ 100 ಗ್ರಾಂ ಹೆಚ್ಚಳವಿದ್ದ ಕಾರಣಕ್ಕೆ ಅವರನ್ನು ಫೈನಲ್‌ನಿಂದ ಅನರ್ಹಗೊಳಿಸಲಾಗಿದೆ. ಇದು ಭಾರತೀಯ ಕ್ರೀಡಾ ವಲಯದಲ್ಲಿ ಆಘಾತಕ್ಕೆ ಕಾರಣವಾಗಿದೆ. ವಿನೇಶ್ 50 ಕೆಜಿ ವಿಭಾಗದಲ್ಲಿ ಒಲಿಂಪಿಕ್ಸ್ ಆಡುತ್ತಿರುವುದು ಇದೇ ಮೊದಲ ಬಾರಿ. ಇದಕ್ಕೂ ಮುನ್ನ ರಿಯೋ ಒಲಿಂಪಿಕ್ಸ್‌ನಲ್ಲಿ 48 ಕೆಜಿ, ಟೋಕಿಯೊದಲ್ಲಿ 53 ಕೆಜಿ ವಿಭಾಗದಲ್ಲಿ ಸ್ಪರ್ಧಿಸುತ್ತಿದ್ದರು. ಒಲಿಂಪಿಕ್ಸ್ ಆರಂಭಕ್ಕೂ ಮುನ್ನ ನಡೆದಿದ್ದ ಸೀನಿಯರ್ ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿಯೂ

■ 7ನೇ ಪುಟಕ್ಕೆ

ನೀವು ಚಾಂಪಿಯನ್‌ಗಳಲ್ಲಿ ಚಾಂಪಿಯನ್

ನವದೆಹಲಿ: ಕೇವಲ 100 ಗ್ರಾಂ ತೂಕದ ಕಾರಣಕ್ಕಾಗಿ ಕುಸ್ತಿಪಟು ವಿನೇಶ್ ಫೋಗಟ್ ಪ್ಯಾರಿಸ್ ಒಲಿಂಪಿಕ್ಸ್‌ನಿಂದ ಹೊರಬಿದ್ದ ಕೆಲವೇ ನಿಮಿಷಗಳಲ್ಲಿ, ಪ್ರಧಾನಿ ನರೇಂದ್ರ ಮೋದಿ ಸೋಷಿಯಲ್ ಮೀಡಿಯಾದಲ್ಲಿ ಪೋಸ್ಟ್ ಮಾಡಿದ್ದಾರೆ. ಭರವಸೆ ಕಳೆದುಕೊಳ್ಳಬೇಡಿ, ಮತ್ತಷ್ಟು ಬಲಿಷ್ಠರಾಗಿ, ಗಟ್ಟಿ ಮನಸ್ಸಿನಿಂದ ದೇಶಕ್ಕೆ ಬನ್ನಿ ಎಂದು ಪ್ರೋತ್ಸಾಹದ ಮಾತುಗಳನ್ನಾಡಿದ್ದಾರೆ. ವಿನೇಶ್, ನೀವು ಚಾಂಪಿಯನ್‌ಗಳಲ್ಲಿ ಚಾಂಪಿಯನ್. ನೀವು ಭಾರತದ ಹೆಮ್ಮೆ ಮತ್ತು ಪ್ರತಿಯೊಬ್ಬ ಭಾರತೀಯರಿಗೆ ಸ್ಫೂರ್ತಿ. ಇಂದಿನ ಹಿನ್ನಡೆ ನೋವುಂಟು ಮಾಡುತ್ತದೆ. ನಾನು ಅನುಭವಿಸುತ್ತಿರುವ ಹತಾಶೆಯ ಭಾವ ಪದಗಳಲ್ಲಿ ಹೇಳುವುದು ಕಷ್ಟವಾಗುತ್ತಿದೆ. ನಿಮ್ಮಲ್ಲಿ ಸ್ಥಿತಿಸ್ಥಾಪಕತ್ವ ಶಕ್ತಿ ಪರಿಸ್ಥಿತಿಯನ್ನು ಎದುರಿಸುವ ಧೈರ್ಯವಿದೆ. ಇನ್ನಷ್ಟು ಬಲಿಷ್ಠರಾಗಿ ಬನ್ನಿ. ನಾವೆಲ್ಲರೂ ನಿಮಗಾಗಿ ಕಾಯುತ್ತಿದ್ದೇವೆ

■ 7ನೇ ಪುಟಕ್ಕೆ



ಸತ್ಯಮೇವ ಜಯತೆ...

ಮೈಸೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸಿದ್ಧಿ ಮಂತ್ರ

- ■ ಬಿಜೆಪಿ, ಜೆಡಿಎಸ್ ನನ್ನ ಟಾರ್ಗೆಟ್ ಮಾಡಿವೆ
- ■ ರಾಜ್ಯಪಾಲರು ನನ್ನ ಉತ್ತರ ಒಪ್ಪುತ್ತಾರೆಂಬ ವಿಶ್ವಾಸವಿದೆ
- ■ ಶಾಲಿನಿ ರಜನೀಶ್ ಅವರದು ಸೌಜನ್ಯಯುತ ಭೇಟಿ
- ■ ಅಕ್ರಮ ಎಸಗಿಲ್ಲ, ಸಹಿ ಹಾಕಿಲ್ಲ, ಪ್ರಭಾವ ಬೀರಿಲ್ಲ, ಹಣ ಪಡೆದಿಲ್ಲ



ಮೈಸೂರಿನ ಟಿಕೆ ಲೇಔಟ್‌ನ ತಮ್ಮ ನಿವಾಸದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಪತ್ರಕರ್ತರ ಜೊತೆ ಮಾತನಾಡಿದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ಮುಡಾ ಅಧ್ಯಕ್ಷ ಕೆ.ಮರಿಗೌಡ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಆ.7(ಬಿಎಲ್‌ಯು)– ಬಿಜೆಪಿ ಹಾಗೂ ಜೆಡಿಎಸ್‌ನವರ ಸುಳ್ಳು ಪ್ರಚಾರ ಎದುರಿಸುವ ತಾಕತ್ತು ನನಗಿದ್ದು, ಈ ಹೋರಾಟದಲ್ಲಿ ಸತ್ಯಕ್ಕೆ ಅಂತಿಮವಾಗಿ ಜಯ ಸಿಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರಿನ ಟಿ.ಕೆ.ಲೇ ಔಟ್‌ನ ತಮ್ಮ ನಿವಾಸದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ಅಕ್ರಮವಾಗಿ ಡಿ ನೋಟಿಫಿಕೇಷನ್ ಮಾಡಿ ಚೆಕ್ ಮೂಲಕ ಲಂಚ ಪಡೆದಿದ್ದರು. ಆದರೆ ನಾನು ಅಂತಹ ಯಾವುದೇ ಅಕ್ರಮದಲ್ಲಿ ಭಾಗಿಯಾಗಿಲ್ಲ. ಆದರೆ ಬಿಜೆಪಿಯವರು ಸುಳ್ಳನ್ನು ನಿಜ ಮಾಡಲು ಹೊರಟಿದ್ದು, ಅದನ್ನು ಸಮರ್ಥವಾಗಿ ಎದುರಿಸುವ ತಾಕತ್ತು ನನಗಿದೆ. ನನ್ನ ಈ ಹೋರಾಟದಲ್ಲಿ ಸತ್ಯಕ್ಕೆ ಅಂತಿಮವಾಗಿ ಜಯ ಸಿಗಲಿದೆ ಎಂದು ಆಶಯ ವ್ಯಕ್ತಪಡಿಸಿದರು. ಬಿಜೆಪಿ ಹಾಗೂ ಜೆಡಿಎಸ್ ಅಧಿ ಕಾರದಲ್ಲಿದ್ದಾಗ ಹಲವು ಹಗರಣದಲ್ಲಿ ಭಾಗಿಯಾಗಿದ್ದು, ಅವರದೇ ಭ್ರಷ್ಟ ಸರ್ಕಾರವಾಗಿದೆ. ಈಗ ಆ ಎಲ್ಲಾ ಹಗರಣಗಳ ಬಗ್ಗೆ ತನಿಖೆ ನಡೆಯುತ್ತಿದೆ. ಹೀಗಿರುವಾಗ ನಮ್ಮ

■ 7ನೇ ಪುಟಕ್ಕೆ

ನನ್ನ ಪತ್ನಿಗೆ ಬದಲಿ ನಿವೇಶನ ನೀಡದಂತೆ ಆದೇಶಿಸಿದ್ದೆ

ನಮ್ಮ ಜಮೀನನ್ನು ಮುಡಾ ಸ್ವಾಧೀನ ಮಾಡಿಕೊಂಡ ಹಿನ್ನೆಲೆಯಲ್ಲಿ ಬದಲಿ ನಿವೇಶನ ನೀಡುವಂತೆ ನನ್ನ ಪತ್ನಿ ಪಾರ್ವತಿ ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ಮುಖ್ಯಮಂತ್ರಿ ಆಗಿದ್ದ ನಾನು ಬದಲಿ ನಿವೇಶನ ನೀಡದಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಬದಲಿ ನಿವೇಶನ ನೀಡುವಂತೆ ನನ್ನ ಪತ್ನಿ ಪಾರ್ವತಿ ಅರ್ಜಿ ಸಲ್ಲಿಸಿದಾಗ 2014ರಲ್ಲಿ ನಾನು ಮುಖ್ಯಮಂತ್ರಿ ಆಗಿದ್ದೆ. ಈ ವಿಚಾರ ನನ್ನ ಗಮನಕ್ಕೆ ಬಂದಾಗ ನಾನು ಮುಖ್ಯಮಂತ್ರಿ ಆಗಿರುವ ತನಕ ಬದಲಿ ನಿವೇಶನ ನೀಡದಂತೆ ಅಧಿಕಾರಿಗಳಿಗೆ ಆದೇಶ ಮಾಡಿದೆ ಎಂದು ತಿಳಿಸಿದರು. ಪ್ರಭಾವ ಬಳಸುವುದಿದ್ದರೆ ಅಂದೇ ನಾನು ನಿವೇಶನ ಕೊಡಿಸಬಹುದಿತ್ತಲ್ಲವೆ ಎಂದು ಪ್ರಶ್ನಿಸಿದ ಸಿದ್ದರಾಮಯ್ಯ, ಮುಖ್ಯಮಂತ್ರಿ ಸ್ಥಾನದಲ್ಲಿದ್ದ ನನಗೆ ನಿವೇಶನ ಕೊಡಿಸುವ ಅಧಿಕಾರ ಇತ್ತಲ್ಲವೆ ಎಂದು ಮರು ಪ್ರಶ್ನಿಸಿದರು. ನಾನು ಮುಖ್ಯಮಂತ್ರಿ ಸ್ಥಾನದಲ್ಲಿ ಇಲ್ಲದಾಗ 2021ರಲ್ಲಿ ನನ್ನ ಪತ್ನಿ ಬದಲಿ ನಿವೇಶನಕ್ಕೆ ಅರ್ಜಿ ಸಲ್ಲಿಸಿದ್ದರು. ಈ ಹಿನ್ನೆಲೆ ಅಂದು ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರ ಕಾನೂನಾತ್ಮಕವಾಗಿ ಭೂಮಿ ನೀಡಿದೆ. ಈ ಮೂಲಕ ಮುಡಾ ವಿಚಾರದಲ್ಲಿ ನಾನು ಯಾವುದೇ ತಪ್ಪು ಮಾಡಿಲ್ಲ, ಪ್ರಭಾವ ಬೀರಿಲ್ಲ, ಯಾವು ದಕ್ಕೂ ಸಹಿ ಹಾಕಿಲ್ಲ ಎಂದು ಸಿದ್ದ ರಾಮಯ್ಯ ಸ್ಪಷ್ಟನೆ ನೀಡಿದರು. ಅಂದು ಮುಖ್ಯಮಂತ್ರಿ ಆಗಿದ್ದ ಯಡಿಯೂರಪ್ಪ ಸಹಿ

■ 7ನೇ ಪುಟಕ್ಕೆ

ಯಡಿಯೂರಪ್ಪಗೆ 82 ನೇ ವಯಸ್ಸಿನಲ್ಲಿ ಇದು ಬೇಕಿತ್ತಾ

82 ವರ್ಷ ವಯಸ್ಸಿನಲ್ಲಿ ಇದು ಬೇಕಿತ್ತಾ, ಚಿಕ್ಕ ಮಗುವಿನ ಮೇಲೆ ಈ ರೀತಿ ಮಾಡಬೇಕಿತ್ತಾ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಪ್ರಶ್ನಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಯಡಿಯೂರಪ್ಪಗೆ ನೈತಿಕತೆ ಇದ್ದರೆ ಸಾರ್ವಜನಿಕ ಜೀವನದಿಂದ ಇಷ್ಟೊತ್ತಿಗೆ ನಿವೃತ್ತಿಯಾಗಬೇಕಿತ್ತು ಎಂದು ತಿರುಗೇಟು ನೀಡಿದರು. ಪಾದಯಾತ್ರೆ ಮುಗಿಯುವಷ್ಟರಲ್ಲಿ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು ಎಂಬ ಯಡಿಯೂರಪ್ಪ ಹೇಳಿಕೆಗೆ ಕೋಪೋದ್ರಿಕ್ತರಾಗಿ ಅವರು ಈ ಪ್ರತಿಕ್ರಿಯೆ ನೀಡಿದರು. ಯಡಿಯೂರಪ್ಪ ವಿರುದ್ಧ ಪೋಕ್ಸೋ ಪ್ರಕರಣ ದಾಖಲಾಗಿದೆ. ಆದರೆ ನ್ಯಾಯಾಲಯದ ದಯೆಯಿಂದ ಪಾರಾಗಿದ್ದಾರೆ. ಇಲ್ಲದಿದ್ದರೆ ಇಷ್ಟೊತ್ತಿಗೆ ಜೈಲಿನಲ್ಲಿ ಇರಬೇಕಿತ್ತು ಎಂದು ಹೇಳಿದರು.

ಇಂತಹ ಆರೋಪ ಹೊತ್ತಿರುವ ಯಡಿಯೂರಪ್ಪಗೆ ನನ್ನ ಬಗ್ಗೆ ಮಾತನಾಡಲು ಯಾವ ನೈತಿಕತೆ ಇದೆ ಎಂದು ಪ್ರಶ್ನಿಸಿದ ಸಿದ್ದರಾಮಯ್ಯ, ನಿಜವಾಗಿಯೂ ನೈತಿಕತೆ ಇದ್ದರೆ ಇಷ್ಟೊತ್ತಿಗೆ ಸಾರ್ವಜನಿಕ ಜೀವನದಿಂದ ನಿವೃತ್ತಿಯಾಗಬೇಕಿತ್ತು ಎಂದು ಅಭಿಪ್ರಾಯಪಟ್ಟರು. ಯಡಿಯೂರಪ್ಪ ವಿರುದ್ಧ 20 ಕ್ಕೂ ಹೆಚ್ಚು ಪ್ರಕರಣಗಳಿವೆ. ಆ ಬಗ್ಗೆ ವಿವರವಾದ ಮಾಹಿತಿಯನ್ನು ನೀಡುತ್ತೇನೆ ಎಂದು ಹೇಳಿದರು.

ಗೌಡರ ಗೌಡ ಪ್ರೀತಂ ಗೌಡ ಘೋಷಣೆ; ಘರ್ಷಣೆ

ಮಂಡ್ಯದಲ್ಲಿ ಬಿಜೆಪಿ–ಜೆಡಿಎಸ್ ಕಾರ್ಯಕರ್ತರ ನಡುವೆ ಮಾರಾಮಾರಿ



ಮಂಡ್ಯ, ಆ. 7– ಮುಡಾ ಹಾಗೂ ವಾಲ್ಮೀಕಿ ಹಗರಣವನ್ನು ಮುಂದಿಟ್ಟು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ಮತ್ತು ಜೆಡಿಎಸ್ ಬೆಂಗಳೂರಿನಿಂದ ಮೈಸೂರಿಗೆ ನಡೆಸುತ್ತಿರುವ 'ಮೈಸೂರು ಚಲೋ' ಪಾದಯಾತ್ರೆಯ 5ನೇ ದಿನವಾದ ಇಂದು ಜೆಡಿಎಸ್ ಭದ್ರಕೋಟೆ ಮಂಡ್ಯದಲ್ಲಿ ಉಭಯ ಪಕ್ಷಗಳ ಕಾರ್ಯಕರ್ತರ ನಡುವೆ ಮಾರಾಮಾರಿಯೇ ನಡೆಯಿತು.

ಕಳೆದ 4 ದಿನ ನಡೆದ ಪಾದಯಾತ್ರೆಯಲ್ಲಿ ಯಾವುದೇ ಗೊಂದಲವಿಲ್ಲದೆ ಉಭಯ ಪಕ್ಷದ ಕಾರ್ಯಕರ್ತರು ಯಶಸ್ವಿಯಾಗಿ ಹೆಜ್ಜೆ ಹಾಕಿದ್ದರು. 5ನೇ ದಿನವಾದ ಇಂದು ಮಂಡ್ಯದಲ್ಲಿ ಉಭಯ ಪಕ್ಷದ ಸಾವಿರಾರು ಕಾರ್ಯಕರ್ತರು ಹುಮ್ಮಸ್ಸಿನಿಂದ ಹೆಜ್ಜೆ ಹಾಕುತ್ತಿದ್ದರೆ, ಮಂಡ್ಯ ಸರ್ಕಾರಿ ಮಹಿಳಾ ಕಾಲೇಜು ಬಳಿ ಕುಮಾರಸ್ವಾಮಿ ಆಕ್ರೋಶಕ್ಕೆ ಗುರಿಯಾಗಿದ್ದ ಹಾಸನ ಮಾಜಿ ಶಾಸಕರೂ ಆದ ಬಿಜೆಪಿ ಮುಖಂಡ ಪ್ರೀತಂ ಗೌಡ ಎಂಟ್ರಿ ಆದರು. ಅವರ ಬೆಂಬಲಿಗರ ಗುಂಪು ಅವರನ್ನು ಹೆಗಲ ಮೇಲೆ ಹೊತ್ತು 'ಗೌಡರ ಗೌಡ ಪ್ರೀತಂ ಗೌಡ... ಹೂ ಇಸ್ ಗೌಡ ಪ್ರೀತಂ ಗೌಡ...' ಎಂದು ಕುಮಾರಸ್ವಾಮಿ ಮತ್ತು ವಿಜಯೇಂದ್ರ ಸಮ್ಮುಖದಲ್ಲೇ ಘೋಷಣೆ ಮೊಳಗಲಾರಂಭಿಸಿದರು. ಇದರಿಂದ ಕೆರಳಿದ ಜೆಡಿಎಸ್ ಕಾರ್ಯಕರ್ತರು, ಪ್ರೀತಂಗೌಡ ಬೆಂಬಲಿಗರೊಂದಿಗೆ ವಾಗ್ವಾದಕ್ಕಿಳಿದರು. ಉಭಯ ಪಕ್ಷದ ಕಾರ್ಯಕರ್ತರು ಪರಸ್ಪರ ಅವಾಚ್ಯ ಶಬ್ಧಗಳಿಂದ ನಿಂದಿಸಿಕೊಂಡಿದ್ದಲ್ಲದೆ ಮಾರಾಮಾರಿಗಿಳಿದರು. ಪ್ರೀತಂ ಗೌಡರಂತೂ ಯಾರನ್ನೂ ಸಮಾಧಾನಪಡಿಸದೇ ಹಸನ್ಮುಖರಾಗಿ ನೋಡುತ್ತಾ ನಿಂತಿದ್ದರು. ಮತ್ತೊಂದೆಡೆ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲು

■ 7ನೇ ಪುಟಕ್ಕೆ

> **ಬಿಜೆಪಿ, ಜೆಡಿಎಸ್ ಕಾರ್ಯಕರ್ತರು ಶಾಂತಿಯಿಂದ ಪಾದಯಾತ್ರೆಯಲ್ಲಿ ಸಾಗಬೇಕು. ಜೆಡಿಎಸ್‌ನವರು ದೇವೇಗೌಡರಿಗೆ, ಬಿಜೆಪಿಯವರು ನರೇಂದ್ರ ಮೋದಿಯವರಿಗೆ ಅವಮಾನ ಮಾಡಬೇಡಿ, ಇಲ್ಲಿಗೆ ಬಂದ ಕೆಲ ಕಿಡಿಗೇಡಿಗಳಿಂದ ಯಶಸ್ವಿಯಾಗಿ ಸಾಗುತ್ತಿರುವ ಪಾದಯಾತ್ರೆ ನಿಲ್ಲುವುದು ಬೇಡ.**
> – ಹೆಚ್.ಡಿ.ಕುಮಾರಸ್ವಾಮಿ

> “ಬಿಜೆಪಿ ಮತ್ತು ಜೆಡಿಎಸ್ ಕಾರ್ಯಕರ್ತರು ಮಾರಾಮಾರಿ ನಡೆಸುತ್ತಿದ್ದಾಗ ಅಲಂಕೃತ ವಾಹನದಲ್ಲಿದ್ದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ಮುತ್ತಿಗೆ ಹಾಕಿದ ಕೆಲ ಜೆಡಿಎಸ್ ಕಾರ್ಯಕರ್ತರು, ಕುಮಾರಣ್ಣ ವಿರೋಧಿಸುತ್ತಿರುವ ಪ್ರೀತಂಗೌಡ ಮಂಡ್ಯಕ್ಕೆ ಬಂದು ಹೀಗೆ ಗಲಾಟೆ ಮಾಡುವುದು ಸರಿಯೇ? ನೀವು ಪ್ರೀತಂಗೌಡ ಮತ್ತು ಅವರ ಬೆಂಬಲಿಗರನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು ಎಂದು ಆಗ್ರಹಿಸಿದರು. ಆ ಸಂದರ್ಭದಲ್ಲಿ ಸ್ವಲ್ಪ ವಿಚಲಿತರಾದ ವಿಜಯೇಂದ್ರ, ಈಗ ಎಲ್ಲರೂ ಶಾಂತಿಯಿಂದಿರಿ, ನಾನು ಪಾದಯಾತ್ರೆ ಮುಗಿದ ಮೇಲೆ ಅವರನ್ನು ಕರೆದು ಮಾತನಾಡುತ್ತೇನೆ ಎಂದು ಹೇಳುವ ಮೂಲಕ ಸಮಾಧಾನಪಡಿಸಲು ಯತ್ನಿಸಿದರು.



ಬಿಚ್ಚು ನುಡಿ

ವಿಕ್ರಂ ಮುತ್ತಣ್ಣ

ತಮ್ಮ ಮಕ್ಕಳ ಭವಿಷ್ಯಕ್ಕೆ **ಕಂಡವರ ಮಕ್ಕಳ ಬಲಿ ಕೊಡುವುದು ತರವೇ?**

■ ಪುಟ–4



ಮುಂದಿನ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ

ಪುಲ್ವಾಮಾ ಹುತಾತ್ಮ ಯೋಧನ ಪತ್ನಿ ಕಲಾವತಿಗೆ ಶೀಘ್ರ ಮುಡಾ ನಿವೇಶನ

ಮುಡಾ ಆಯುಕ್ತ ಎ.ಎನ್.ರಘುನಂದನ್ ಭರವಸೆ



ರಘುನಂದನ್



ಹೆಚ್.ಗುರು



ಎಸ್.ಕಲಾವತಿ



'ಮೈಸೂರು ಮಿತ್ರ' ವರದಿ ಫಲಶ್ರುತಿ

ಮೈಸೂರು, ಆ. 7(ಆರ್‌ಕೆ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ಪುಲ್ವಾಮಾ ಹುತಾತ್ಮ ವೀರಯೋಧ ಹೆಚ್. ಗುರು ಅವರ ಪತ್ನಿ ಎಸ್. ಕಲಾವತಿ ಅವರಿಗೆ ಶೀಘ್ರ ನಿವೇಶನ ಕಲ್ಪಿಸುವ ಬಗ್ಗೆ ತೀರ್ಮಾನಿಸುವುದಾಗಿ ಮುಡಾ ಆಯುಕ್ತ ಎ.ಎನ್. ರಘುನಂದನ್ ಭರವಸೆ ನೀಡಿದ್ದಾರೆ.

ಈ ಕುರಿತಂತೆ ದೂರವಾಣಿ ಮೂಲಕ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಹುತಾತ್ಮ ಯೋಧ ಗುರು ಅವರ ಪತ್ನಿ ಕಲಾವತಿ ನಿವೇಶನ ಕೋರಿ ಪ್ರಾಧಿಕಾರಕ್ಕೆ ಸಲ್ಲಿಸಿರುವ ಅರ್ಜಿಯನ್ನು ಪರಿಶೀಲಿಸಲಾಗಿದ್ದು, ಯುದ್ಧ, ಯುದ್ಧದಂತಹ ಕಾರ್ಯಾಚರಣೆಯಲ್ಲಿ ವೀರಮರಣ ಹೊಂದಿದ ಯೋಧರ ಪತ್ನಿ ಅಥವಾ ಕುಟುಂಬದ ಅವಲಂಬಿತರಿಗೆ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ನಿವೇಶನ ನೀಡಬೇಕೆಂಬ ಸರ್ಕಾರದ ಆದೇಶ ಪ್ರತಿ ಹಾಗೂ ಕಲಾವತಿ ಅವರಿಗೆ ನಿವೇಶನ ನೀಡುವಂತೆ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ನಿರ್ದೇಶಕರು ಶಿಫಾರಸು ಮಾಡಿ ಮುಡಾ ಆಯುಕ್ತರಿಗೆ ಬರೆದಿರುವ ಪತ್ರಗಳೊಂದಿಗೆ ವಿಷಯವನ್ನು ಮುಂದಿನ

■ 6ನೇ ಪುಟಕ್ಕೆ

ಮುಡಾದಲ್ಲಿ ಮತ್ತೊಂದು ಪವಾಡ!: ಪಟಾಪಟ್ ನಿವೇಶನ ಹಂಚಿಕೆ

ಕೇವಲ 3.03 ಲಕ್ಷಕ್ಕೆ ಹಂಚ್ಯಾ–ಸಾತಗಳ್ಳಿ ಬಡಾವಣೆಯಲ್ಲಿ ರಿಂಗ್‌ರಸ್ತೆಗಭಿಮುಖವಾಗಿ 50x80 ನಿವೇಶನ ಮಂಜೂರು

- ■ 2024ರ ಮೇ 16ರಂದು ಎಂ.ಎನ್.ನಂದೀಶ ಎಂಬುವರಿಗೆ ನಿವೇಶನ ಹಂಚಿಕೆ
- ■ ಮೇ 22ರಂದು ಕ್ರಯಪತ್ರ ನೀಡಿದ ಮುಡಾ



ಎಸ್.ಟಿ.ರವಿಕುಮಾರ್

ಮೈಸೂರು, ಆ. 7–ಕಾನೂನುಬಾಹಿರವಾಗಿ ಶೇ.50:50ರ ಅನುಪಾತದಡಿ ಸಾವಿರಾರು ನಿವೇಶನಗಳನ್ನು ಹಂಚಿಕೆ ಮಾಡಿ ಬ್ರಹ್ಮಾಂಡ ಭ್ರಷ್ಟಾಚಾರವೆಸಗಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಅಧಿಕಾರಿಗಳು, ಮೈಸೂರಿನ ಪ್ರತಿಷ್ಠಿತ ಹಂಚ್ಯಾ–ಸಾತಗಳ್ಳಿ ಬಡಾವಣೆ 'ಬಿ' ವಲಯದಲ್ಲಿ ರಿಂಗ್‌ರಸ್ತೆಗಭಿಮುಖವಾಗಿರುವ ಮೂಲೆ ನಿವೇಶನ (ಕಾರ್ನರ್ ಸೈಟ್) ಪಕ್ಕದ 50x80 ಅಡಿ ನಿವೇಶನವನ್ನು ವ್ಯಕ್ತಿಯೊಬ್ಬರಿಗೆ ಕೇವಲ 3,03,000 ರೂ.ಗಳಿಗೆ ಹಂಚಿಕೆ ಮಾಡಿರುವುದು ಬೆಳಕಿಗೆ ಬಂದಿದೆ.

2024ರ ಮೇ 22ರಂದು ಮೈಸೂರಿನ ಸಿದ್ಧಾರ್ಥನಗರದ ಮೋಕ್ಷ ಮಾರ್ಗ, 10ನೇ ಕ್ರಾಸ್ ನಿವಾಸಿ ನಾಗರಾಜು ಅವರ ಪುತ್ರ ಎಂ.ಎನ್. ನಂದೀಶ ಹೆಸರಿಗೆ ಹಂಚ್ಯಾ–ಸಾತಗಳ್ಳಿ 'ಬಿ' ವಲಯ ಬಡಾವಣೆಯಲ್ಲಿರುವ 36ನೇ ಸಂಖ್ಯೆಯ ಪೂರ್ವ–ಪಶ್ಚಿಮ 24 ಮೀ. ಮತ್ತು ಉತ್ತರ–ದಕ್ಷಿಣಕ್ಕೆ 15 ಮೀ. (50x80 ಅಡಿ) ಒಟ್ಟು 360 ಚದರ ಮೀಟರ್ ವಿಸ್ತೀರ್ಣದ ರಿಂಗ್‌ರಸ್ತೆಗೆ ಅಭಿಮುಖವಾಗಿರುವ ಮೂಲೆ ನಿವೇಶನದ ಪಕ್ಕದ ನಿವೇಶನಕ್ಕೆ ಕ್ರಯಪತ್ರ ನೀಡಲಾಗಿದೆ.

ಮುಡಾ ಕಚೇರಿಯಲ್ಲಿರುವ ಹೆಚ್ಚುವರಿ ಜಿಲ್ಲಾ ನೋಂದಣಾಧಿಕಾರಿ ಕಚೇರಿಯಲ್ಲಿ ಪ್ರಾಧಿಕಾರದ ವಿಶೇಷ ತಹಸೀಲ್ದಾರ್, ಎಂ.ಎನ್.ನಂದೀಶರಿಗೆ ಸದರಿ ನಿವೇಶನದ ಕ್ರಯಪತ್ರವನ್ನು ಮೇ 22ರಂದೇ ನೋಂದಣಿ ಮಾಡಿಕೊಟ್ಟಿದ್ದಾರೆ.

ಮೇ 16ರಂದು ಹಂಚಿಕೆ: 2024ರ ಮೇ16 ರಂದು ನಿವೇಶನವನ್ನು ಹಂಚಿಕೆ ಮಾಡಲಾಗಿದ್ದು, ಕೇವಲ 6 ದಿನಗಳಲ್ಲಿ

■ 6ನೇ ಪುಟಕ್ಕೆ



ಮೈಸೂರು ಮಿತ್ರ

ಶಾಸಕ ಕೆ.ಹರೀಶ್‌ಗೌಡರ ಹುಟ್ಟುಹಬ್ಬ ಆಚರಣೆ



ಮೈಸೂರಿನ ನಜರ್‌ಬಾದ್ 40ನೇ ವಾರ್ಡ್‌ನಲ್ಲಿ ಕೇಕ್ ಕತ್ತರಿಸುವ ಮೂಲಕ ಶಾಸಕ ಕೆ.ಹರೀಶ್‌ಗೌಡರ ಹುಟ್ಟುಹಬ್ಬ ಆಚರಿಸಿ, ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಬ್ಯಾಂಕ್ ನಿರ್ದೇಶಕರಾದ ವರದರಾಜು, ಎಸ್.ಆರ್.ರವಿಕುಮಾರ್, ವಕೀಲರಾದ ಯಶೋಧ, ಸತೀಶ್, ಶ್ರೇಯಸ್‌ಗೌಡ, ವಾರ್ಡ್ ಯುವ ಅಧ್ಯಕ್ಷ ಸುಹಾಸ್‌ಗೌಡ, ಮಂಜಪ್ಪ, ದರ್ಶನ್ ಗೌಡ, ತಿಲಕ್, ಮನು, ಅರಣ್‌ಗೇರಿ, ಜಾವೀದ್ ಇತರರಿದ್ದರು.

ಸಿಎಂರಿಂದ ಪೂರ್ವಭಾವಿ ಸಿದ್ಧತೆ ಪರಿಶೀಲನೆ



ಆ.9 ರಂದು ಕರ್ನಾಟಕ ಜನಾದೇಶ ಸಮಾವೇಶ ನಡೆಯಲಿರುವ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಪೂರ್ವ ಸಿದ್ಧತೆಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಪರಿಶೀಲಿಸಿದರು. ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹಾದೇವಪ್ಪ, ಪಶುಸಂಗೋಪನಾ ಇಲಾಖೆ ಸಚಿವ ಕೆ. ವೆಂಕಟೇಶ್, ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ, ಮುಡಾ ಅಧ್ಯಕ್ಷ ಕೆ. ಮರೀಗೌಡ, ಶಿವರಾಂ, ವಿಶ್ವ, ಹೆಚ್.ವೆಂಕಟೇಶ್, ನಜರ್‌ಬಾದ್ ನಟರಾಜ್, ಷರೀಫ್ ಇನ್ನಿತರರಿದ್ದರು.

ಸಬರ್ಬನ್ ಬಸ್ ಸ್ಟ್ಯಾಂಡ್ ಎದುರಿನ ಬಿ.ಎನ್.ರಸ್ತೆ ಗುಂಡಿ ಮುಚ್ಚಿದ ಪಾಲಿಕೆ

ಮೈಸೂರು,ಆ.7(ಆರ್‌ಕೆ)– ಮೈಸೂರಿನ ಕೆಎಸ್‌ಆರ್‌ಟಿಸಿ ಸಬರ್ಬನ್ ಬಸ್ ನಿಲ್ದಾಣದ ಎದುರಿನ ಬಿ.ಎನ್. ರಸ್ತೆಯಲ್ಲಿ ಉಂಟಾಗಿದ್ದ ಗುಂಡಿಯನ್ನು ಬುಧವಾರ ಪಾಲಿಕೆ ಅಧಿಕಾರಿಗಳು ಮುಚ್ಚಿ ಸಂಚಾರ ಸುಗಮಗೊಳಿಸಿದ್ದಾರೆ.

ರಸ್ತೆ ಸಂಪೂರ್ಣ ಗುಂಡಿಮಯವಾಗಿದ್ದು, ದಟ್ಟವಾಗಿರುವ ವಾಹನ ಸಂಚಾರಕ್ಕೆ ತೀವ್ರ ತೊಂದರೆಯಾಗಿದ್ದ ಬಗ್ಗೆ ಕೆಲ ದಿನಗಳ ಹಿಂದೆ 'ಮೈಸೂರು ಮಿತ್ರ' ವರದಿ ಪ್ರಕಟಿಸಿ ಅಧಿಕಾರಿಗಳ ಗಮನ ಸೆಳೆದಿತ್ತು.

ಬೆಂಗಳೂರು, ಕೊಡಗು, ಹಾಸನ, ಚಾಮರಾಜನಗರ ಜಿಲ್ಲೆಗಳಲ್ಲದೆ ಕೇರಳ, ತಮಿಳುನಾಡು ರಾಜ್ಯಗಳಿಗೆ ಸಂಪರ್ಕ ಕಲ್ಪಿಸುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್‌ಗಳು, ನಗರ ವ್ಯಾಪ್ತಿಯ ಕಾರು, ಆಟೋ, ದ್ವಿಚಕ್ರ ವಾಹನಗಳು ಹೆಚ್ಚಿನ ಸಂಖ್ಯೆಯ ವಾಹನಗಳು ನಿತ್ಯ ಓಡಾಡುವ ಮೈಸೂರು ಹೃದಯ ಭಾಗದ ಕೆಎಸ್‌ಆರ್‌ಟಿಸಿ ಗ್ರಾಮಾಂತರ ಬಸ್ ನಿಲ್ದಾಣದ ಎದುರಿನ ಬಿ.ಎನ್. ರಸ್ತೆಯಲ್ಲಿ ಗುಂಡಿ ಬಿದ್ದಿದ್ದರಿಂದ ಮಳೆಗಾಲದಲ್ಲಿ ನೀರು ತುಂಬಿ ಅಪಘಾತಗಳು ಸಂಭವಿಸುತ್ತಿದ್ದವು. ಈ ಕುರಿತು ಚಿತ್ರ ಸಮೇತ ವರದಿ ಪ್ರಕಟವಾದ ಕಾರಣ ಎಚ್ಚೆತ್ತ ಮೈಸೂರು ಮಹಾನಗರಪಾಲಿಕೆ ಕಮಿಷನರ್ ಆಶಾದ್ ಉರ್‌ರೆಹಮಾನ್ ಷರೀಫ್ ನಿರ್ದೇಶನದಂತೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಪಿ.ಸಿ. ಸಿಂಧೂ, ಎಕ್ಸಿಕ್ಯೂಟಿವ್ ಇಂಜಿನಿಯರ್ ನಾಗರಾಜ್ ಅವರು, ಮಳೆ ನಿಂತಿದ್ದ ವೇಳೆ ಇಂದು ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ಕಾಮಗಾರಿ ನಡೆಸಿ ಗುಂಡಿ ಮುಚ್ಚಿ ಡಾಂಬರೀಕರಣ ಮಾಡಿದ್ದಾರೆ.



ಮೈಸೂರಿನ ಸಬರ್ಬನ್ ಬಸ್ ನಿಲ್ದಾಣದ ಎದುರಿನ ಬಿ.ಎನ್.ರಸ್ತೆ ಗುಂಡಿ ಮುಚ್ಚುವ ಕಾಮಗಾರಿಯನ್ನು ನಗರಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಸಿಂಧೂ ಬುಧವಾರ ಪರಿಶೀಲಿಸಿದರು.

ತುಂಡರಿಸಿದ ರಸ್ತೆ ಮುಚ್ಚದೇ ನಿರ್ಲಕ್ಷ್ಯ

ಮೈಸೂರು ಹೆಬ್ಬಾಳು ಮಾದೇಗೌಡ ಸರ್ಕಲ್ ಬಳಿ ಎರಡು ಕಡೆ ಅಂಬರೀಶ್ ರಸ್ತೆಯನ್ನು ತುಂಡರಿಸಲಾಗಿದ್ದು, ಈಗ ಇಲ್ಲಿ ಕೊರಕಲು ಬಿದ್ದರೂ ಯಾರು ಇದನ್ನು ಸರಿಪಡಿಸುವ ಕಾರ್ಯಕ್ಕೆ ಮುಂದಾಗಿಲ್ಲ. ನಗರ ಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಸಿಂಧೂ ಅವರ ಗಮನಕ್ಕೆ ತಂದರೂ ತಿಂಗಳುಗಳಾದರೂ ಕ್ರಮ ಕೈಗೊಂಡಿಲ್ಲ.

ವಿವಿಧ ಸೌಲಭ್ಯಗಳಿಗೆ ಅರ್ಜಿ ಆಹ್ವಾನ

ಮೈಸೂರು,ಆ.7–ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮದ ವತಿಯಿಂದ 2024–25 ನೇ ಸಾಲಿಗೆ ವಿವಿಧ ಯೋಜನೆಗಳಲ್ಲಿ ಸೌಲಭ್ಯ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಯೋಜನೆಯಡಿ ಸ್ವಯಂ ಉದ್ಯೋಗ ಸಾಲ ಯೋಜನೆ, ಗಂಗಾ ಕಲ್ಯಾಣ ನೀರಾವರಿ ಯೋಜನೆ, ಅರಿವು ಶೈಕ್ಷಣಿಕ ಸಾಲ ಯೋಜನೆ, ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಸಾಲ ಯೋಜನೆ, ಸ್ವಾವಲಂಬಿ ಸಾರಥಿ ಯೋಜನೆ, ಸ್ವಯಂ ಉದ್ಯೋಗ ಸಾಲ (ವಾಣಿಜ್ಯ ಬ್ಯಾಂಕುಗಳ ಸಹಯೋಗದೊಂದಿಗೆ) ಯೋಜನೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಸೌಲಭ್ಯಗಳನ್ನು ಪಡೆಯಲು ಇಚ್ಛಿಸುವ ಹಿಂದುಳಿದ ವರ್ಗಗಳ ಅರ್ಜಿದಾರರು https://sevasindhu.Karnataka.gov.in ಮೂಲಕ ಆ.31ರೊಳಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ನಿಗಮದ www.kmmd.Karnataka.gov.in ಅಥವಾ ನಿಗಮದ ಸಹಾಯವಾಣಿ ಸಂಖ್ಯೆ: 080–22374832, 8050770004, 8050770005 ಹಾಗೂ ಜಿಲ್ಲಾ ಕಚೇರಿಯ ದೂರವಾಣಿ ಸಂಖ್ಯೆ 0821–2341194 ಅನ್ನು ಸಂಪರ್ಕಿಸಬಹುದು

ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಟ್ಟರೆ ಜನರು ದಂಗೆ ಏಳುತ್ತಾರೆ

ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ ಎಚ್ಚರಿಕೆ

ಮೈಸೂರು, ಆ.7(ಬಿಎಲ್‌ಯು)– ಮುಡಾ ಪ್ರಕರಣ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದರೆ ಜನರು ದಂಗೆ ಏಳುತ್ತಾರೆ ಎಂದು ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ ಎಚ್ಚರಿಸಿದರು.

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲು ಯಾವುದೇ ಸಾಕ್ಷ್ಯಾಧಾರವಿಲ್ಲ ಎಂದರು.

ಬಿಜೆಪಿ ಸರ್ಕಾರ ಪಾರ್ವತಿ ಅವರಿಗೆ ಬದಲಿ ನಿವೇಶನವನ್ನು ನೀಡಿದೆ. ಇದರಲ್ಲಿ ಸಿದ್ದರಾಮಯ್ಯ ಪ್ರಭಾವ ಬೀರಿಲ್ಲ. ಇಷ್ಟಾದರೂ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದರೆ ಜನರು ದಂಗೆ ಏಳುತ್ತಾರೆ ಎಂದು ಡಾ.ತಿಮ್ಮಯ್ಯ ಹೇಳಿದರು.

ಆಗಸ್ಟ್ 9ರಂದು ಮೈಸೂರಿನಲ್ಲಿ ನಡೆಯುವ ಕಾಂಗ್ರೆಸ್ ಜನಾಂದೋಲನ ಸಮಾವೇಶದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಆದಿ ಜಾಂಬವ ಸಮುದಾಯದ ಸಾವಿರಾರು ಜನರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಸುಪ್ರೀಂಕೋರ್ಟ್ ನೀಡಿರುವ ಒಳಮೀಸಲಾತಿಯನ್ನು ಶೀಘ್ರವೇ ಜಾರಿಗೊಳಿಸುವಂತೆ ಆಗ್ರಹಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಬಳಿ ನಿಯೋಗ ಹೋಗುವುದಾಗಿ ಇದೇ ವೇಳೆ ಡಾ.ತಿಮ್ಮಯ್ಯ ಹೇಳಿದರು. ಮಾಜಿ ಸಚಿವ ಕೋಟೆ ಶಿವಣ್ಣ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಬುಧವಾರ ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಹಿಂದುಳಿದ ಜಾಗೃತ ವೇದಿಕೆ, ಅಹಿಂದ ಸಂಘಟನೆಗಳ ವತಿಯಿಂದ

ಇಂದು ಮೈಸೂರಲ್ಲಿ 'ರಾಜ್ಯಪಾಲರ ನಡೆ ಮತ್ತು ದ್ವೇಷ ರಾಜಕಾರಣ' ಕುರಿತು ಗಂಭೀರ ಚಿಂತನೆ

ಮೈಸೂರು, ಆ.7(ಜಿಎ)–ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಹಾಗೂ ಅಹಿಂದ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ನಾಳೆ(ಆ.8) ಬೆಳಗ್ಗೆ 11.30ಕ್ಕೆ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ 'ರಾಜ್ಯಪಾಲರ ನಡೆ ಮತ್ತು ದ್ವೇಷ ರಾಜಕಾರಣ' ವಿಷಯ ಕುರಿತ ಗಂಭೀರ ಚಿಂತನೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ಹಿರಿಯ ಚಿಂತಕ ಜಾಣಗೆರೆ ವೆಂಕಟರಾಮಯ್ಯ ಉದ್ಘಾಟಿಸುವರು, ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು ಡಾ.ಕೆ ಷರೀಫಾ, ಬಂಜಗೆರೆ ಜಯಪ್ರಕಾಶ್ ವಿಚಾರ ಮಂಡನೆ ಮಾಡುವರು. ಪ್ರೊ.ಎಸ್.ಜಿ.ಸಿದ್ದರಾಮಯ್ಯ ಅಧ್ಯಕ್ಷತೆ ವಹಿಸಲಿದ್ದು, ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಬಿಜೆಪಿ ಹಾಗೂ ಜೆಡಿಎಸ್ ರಾಜಕೀಯ ಪಿತೂರಿ ನಡೆಸಿವೆ. ಸಂವಿಧಾನದ ಮುಖ್ಯಸ್ಥರಾದ ರಾಜ್ಯಪಾಲರೇ ದೂರೊಂದನ್ನು ಆಧರಿಸಿ ಸಂವಿಧಾನಬಾಹಿರವಾಗಿ ಸಿಎಂ ಸಿದ್ದರಾಮಯ್ಯ ಅವರಿಗೆ ನೋಟಿಸ್ ನೀಡಿದ್ದಾರೆ. ಇವರು ಕೇಂದ್ರದಲ್ಲಿನ ಬಿಜೆಪಿ ಕೈಗೊಂಬೆಯಾಗಿ ವರ್ತಿಸುತ್ತಿದ್ದಾರೆ ಎಂಬ ಶಂಕೆ ವ್ಯಕ್ತವಾಗಿದೆ. ಸಿಎಂ ಅವರ ಪತ್ನಿಗೆ ಮುಡಾ ಕಾನೂನು ಬಾಹಿರವಾಗಿ ನಿವೇಶ ನೀಡಿಲ್ಲ. ಇದಲ್ಲದೆ, ಬಿ.ಎಸ್.ಯಡಿಯೂರಪ್ಪ ಅವರ ಆಡಳಿತದ ವೇಳೆ ಬಿ.ವೈ.ವಿಜಯೇಂದ್ರ ಅವರು ಮುಡಾದಲ್ಲಿ ಏನೇನು ಅಕ್ರಮ ನಡೆಸಿದರೆಂಬ ಬಗ್ಗೆ ಯಾರೂ ಮಾತನಾಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಲೋಕೇಶ್ ಮಾದಾಪುರ, ಕೇಶವ್, ರವಿನಂದನ್ ಮತ್ತಿತರರು ಉಪಸ್ಥಿತರಿದ್ದರು.

ಐದನೇ ಪುಟದಿಂದ

50x80 ನಿವೇಶನ ಮಂಜೂರು

ಅಂದರೆ ಮೇ 22ರಂದೇ ಕ್ರಯಪತ್ರ ನೋಂದಣಿ ಮಾಡಿ ಕೊಡಲಾಗಿದೆ. **ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಿವೇಶನ ಹಂಚಿಕೆ) ನಿಯಮಗಳು 1991ರ** ಮೇರೆಗೆ ನಂದೀಶ ಅವರಿಗೆ ಸುಮಾರು ನಾಲ್ಕು ಕೋಟಿ ರೂ. ಬೆಲೆ ಬಾಳುವ ನಿವೇಶನವನ್ನು ಕೇವಲ ಮೂರು ಲಕ್ಷದ ಮೂರು ಸಾವಿರರೂಪಾಯಿಗಳನ್ನು ನಗದಾಗಿ ಪಾವತಿಸಿಕೊಂಡು ಹಂಚಿಕೆ ಮಾಡಿರುವುದು ಭಾರಿ ಅನುಮಾನಕ್ಕೆ ಆಸ್ಪದ ಮಾಡಿಕೊಟ್ಟಿದೆ.

ಪೂರ್ಣ ಮಾಲೀಕತ್ವ: ರಿಂಗ್ ರಸ್ತೆಗೆ ಹೊಂದಿಕೊಂಡಂತಿರುವ ವಾಣಿಜ್ಯ ಬಳಕೆಗೆ ಅನುಕೂಲವಾದ 50x80 ಅಡಿ ಅಳತೆಯ ನಿವೇಶನವನ್ನು ಹಂಚಿಕೆ ಮಾಡಿರುವುದರ ಜೊತೆಗೆ ಖರೀದಿದಾರರಿಗೆ ಎಲ್ಲಾ ಸ್ವತಂತ್ರ ವಿಶೇಷಾಧಿಕಾರ, ಅನುಭೋಗ, ಸ್ವಾಧೀನ ನೀಡಲಾಗಿದೆ. ಹಾಗೂ ಸ್ವತ್ತಿಗೆ ಸೇರಿದ ಪೂರ್ವಾಧಿಗಳು, ಕಾನೂನುಬದ್ಧ ಹೊರ ದೂಡುವಿಕೆ, ತೆರಿಗೆ ಬಾಕಿ ಮತ್ತು ಯಾವುದೇ ರೀತಿಯ ಕ್ಲೇಮುಗಳಿಂದ ಮುಕ್ತವಾಗಿಸಿ ಸಂಪೂರ್ಣ ಹಕ್ಕು ಮಾಲೀಕತ್ವ ನೀಡಲಾಗಿದೆ ಎಂದು ನೋಂದಾಯಿತ ಕ್ರಯಪತ್ರದಲ್ಲಿ ನಮೂದಿಸಲಾಗಿದೆ.

ನಿವೇಶನದ ಚೆಕ್ಕುಬಂದಿ: ಹಂಚ್ಯಾ–ಸಾತ ಗಳ್ಳಿ 'ಬಿ' ವಲಯ ಬಡಾವಣೆ (ವಿಟಿಯು ಬಳಿ) ರಿಂಗ್‌ರಸ್ತೆಯಲ್ಲಿರುವ ನಿವೇಶನ ಸಂಖ್ಯೆ 35ರ ಚೆಕ್ಕುಬಂದಿ ಪೂರ್ವಕ್ಕೆ ನಿ. ಸಂ. 40 ಮತ್ತು 39, ಪಶ್ಚಿಮಕ್ಕೆ ರಿಂಗ್ ರಸ್ತೆ, ಉತ್ತರಕ್ಕೆ ನಿ. ಸಂಖ್ಯೆ 37 ಆಗಿದ್ದು, ಈ ಕ್ರಯಪತ್ರ ನೋಂದಣಿಯಾಗುವಾಗ ಕುವೆಂಪು ನಗರ, ಪಂಚಮಂತ್ರ ರಸ್ತೆ, ಎಲ್‌ಐಜಿ 112ರ ವಾಸಿ ಎಸ್.ಲಕ್ಷ್ಮೀದೇವಿ ಹಾಗೂ ಹಂಚ್ಯಾ ಗ್ರಾಮದ ಹೆಚ್.ಕೆ. ಮಹೇಶ್ ಎಂಬುವರು ಸಾಕ್ಷಿದಾರರಾಗಿ ಕ್ರಯಪತ್ರಕ್ಕೆ ಸಹಿ ಮಾಡಿದ್ದಾರೆ.

ಅಧಿಸೂಚನೆ ಇಲ್ಲದೆ ಹಂಚಿಕೆ: ಹೊಸ ಬಡಾ ವಣೆ ರಚನೆಯಾದಾಗ ನಿವೇಶನ ಹಂಚಿಕೆಗಾಗಿ ಸುದ್ದಿ ಮಾಧ್ಯಮದಲ್ಲಿ, ವೆಬ್‌ಸೈಟ್ ಮೂಲಕ ಅಧಿಸೂಚನೆ ಪ್ರಕಟಿಸಿ, ಅರ್ಜಿಗಳನ್ನು ಆಹ್ವಾನಿಸಿ ನಿಯಮಾನುಸಾರ ಅರ್ಹ ಆಕಾಂಕ್ಷಿಗಳಿಗೆ ನಿವೇಶನ ಹಂಚಿಕೆ ಮಾಡಬೇಕೆಂದು **ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಿವೇಶನ ಹಂಚಿಕೆ) ನಿಯಮ 1991** ಹೇಳುತ್ತದೆ.

ಆದರೆ, ಆರ್‌ಟಿ ನಗರ ಮತ್ತು ಲಲಿತಾದ್ರಿ ಪುರ ವಸತಿ ಬಡಾವಣೆ ನಿರ್ಮಿಸಿ ನಿವೇಶನ ಹಂಚಿಕೆ ಮಾಡಿದ ಬಳಿಕ ಈವರೆಗೆ ಮುಡಾ ಯಾವ ಹೊಸ ಬಡಾವಣೆಯನ್ನೂ ರಚಿಸಿಲ್ಲ. ಅಂದ ಮೇಲೆ 2024ರ ಮೇ 16ರಂದು ನಂದೀಶ ಎಂಬುವರಿಗೆ ನಿವೇಶನ ಹಂಚಿಕೆ ಪತ್ರವನ್ನು ಯಾವ ನಿಯಮದಡಿ ನೀಡಲಾಗಿದೆ ಎಂಬುದು ಯಕ್ಷ ಪ್ರಶ್ನೆಯಾಗಿದೆ.

ಸಭೆ ಗಮನಕ್ಕೂ ತಂದಿಲ್ಲ: ಪ್ರತಿಷ್ಠಿತ ಬಡಾವಣೆಯ ಕೋಟ್ಯಾಂತರ ರೂ. ಬೆಲೆ ಬಾಳುವ ನಿವೇಶನವನ್ನು ಹಂಚಿಕೆ ಮಾಡುವ ಮೊದಲು ಮುಡಾ ಸಾಮಾನ್ಯ ಸಭೆ ಮುಂದಿಟ್ಟು ಚರ್ಚಿಸಿಲ್ಲ ಅಥವಾ ನಿವೇಶನ ಹಂಚಿಕೆಗೆ ಕಾರಣ ನೀಡಿಲ್ಲ. ಪುಲ್ವಾಮಾ ಸ್ಫೋಟದಲ್ಲಿ ಹುತಾತ್ಮರಾದ ಯೋಧನ ವಿಧವಾ ಪತ್ನಿ ಮುಡಾಗೆ ಸಾಕಷ್ಟು ಬಾರಿ ಅಲೆದು, ಮನವಿ ಮೇಲೆ ಮನವಿ ಸಲ್ಲಿಸಿದರೂ ನಾಲ್ಕು ವರ್ಷದ ನಂತರ ಮುಂದೆ ಅಧಿಸೂಚನೆ ಹೊರಡಿಸಿದಾಗ ಆದ್ಯತೆ ಮೇಲೆ ಪರಿಗಣಿಸಲಾಗುವುದೆಂದು ಹಿಂಬರಹ ನೀಡಿ ಬೇಜವಾಬ್ದಾರಿ ಮೆರೆದ ಮುಡಾ ಅಧಿಕಾರಿಗಳು, ನಂದೀಶ ಎಂಬುವರಿಗೆ 50x80 ಅಡಿ ಅಳತೆಯ ನಿವೇ ಶನವನ್ನು ಮಂಜೂರು ಮಾಡಿರುವ ವಿಧಾನ ವನ್ನು ಗಮನಿಸಿದರೆ ಮುಡಾದಲ್ಲಿ ಹಣ, ಅಧಿಕಾರ, ಪ್ರಭಾವಕ್ಕೆ ಮಾತ್ರ ಮನ್ನಣೆ ಎಂಬುದು ಮನವರಿಕೆ ಆಗುತ್ತದೆ. ನೀಡಿದ್ದಾದರೂ ಹೇಗೆ ಎಂಬ ಪ್ರಶ್ನೆ ಮೂಡದೇ ಇರಲಾರದು.

ವಿವಿಧ ಜಯಂತಿಗಳ ಅರ್ಥಪೂರ್ಣ ಆಚರಣೆ

ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು



ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಅಧ್ಯಕ್ಷತೆಯಲ್ಲಿ ವಿವಿಧ ಜಯಂತಿಗಳ ಸಂಬಂಧ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಭೆ ನಡೆಯಿತು.

ಮೈಸೂರು, ಆ.7–ಆಗಸ್ಟ್ 26ರಂದು ಬೆಳಗ್ಗೆ 11 ಗಂಟೆಗೆ ಕಲಾಮಂದಿರದ ಕಿರುರಂಗಮಂದಿರದಲ್ಲಿ ಶ್ರೀ ಕೃಷ್ಣ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆದ 'ನುಲಿಯ ಚಂದಯ್ಯ ಜಯಂತಿ', ಬ್ರಹ್ಮಶ್ರೀ ನಾರಾಯಣಗುರು ಜಯಂತಿ ಹಾಗೂ ಶ್ರೀ ಕೃಷ್ಣ ಜಯಂತಿ ಆಚರಣೆಯ ಸಂಬಂಧ ಹಮ್ಮಿಕೊಂಡಿದ್ದ, ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನುಲಿಯ ಚಂದಯ್ಯ ಹಾಗೂ ಬ್ರಹ್ಮಶ್ರೀ ನಾರಾಯಣ ಜಯಂತಿಯ ಆಚರಣೆಯ ದಿನಾಂಕವನ್ನು ಮುಂದಿನ ದಿನಗಳಲ್ಲಿ ನಿಗದಿಪಡಿಸಲಾಗುವುದು ಎಂದು ಮಾಹಿತಿ ನೀಡಿದರು.

ಸರ್ಕಾರದ ಶಿಷ್ಟಾಚಾರದಂತೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಈ ಸಂಬಂಧ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಮಾಡಲು ಅಗತ್ಯ ಕ್ರಮ ವಹಿಸಲಾಗುವುದು. ದಿನಾಚರಣೆ ನಡೆಯುವ ಸ್ಥಳದ ಸ್ವಚ್ಛತೆ, ಕುಡಿಯುವ ನೀರಿನ ವ್ಯವಸ್ಥೆ, ಶಾಮಿಯಾನ ವ್ಯವಸ್ಥೆ ಮಾಡಲು ಮಹಾ ನಗರಪಾಲಿಕೆಯ ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಸೂಚಿಸಿದರು.

ಕಾರ್ಯಕ್ರಮದಲ್ಲಿ ಕಲಾತಂಡಗಳಿಂದ ಗೀತ ಗಾಯನವನ್ನು ಏರ್ಪಡಿಸಲಾಗುವುದು. ಆಹ್ವಾನ ಪತ್ರಿಕೆಯ ಮುದ್ರಣ ಮಾಡಿ ಸರ್ಕಾರದ ಶಿಷ್ಟಾಚಾರದಂತೆ ಜನಪ್ರತಿನಿಧಿಗಳನ್ನು ಆಹ್ವಾನಿಸಲಾಗುವುದು. ಈ ಸಂಬಂಧ ಸಮಿತಿಯವರು ಸಹಕರಿಸಬೇಕು ಎಂದು ತಿಳಿಸಿದರು. ಸಭೆಯಲ್ಲಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಸೇರಿದಂತೆ ನುಲಿಯ ಚಂದಯ್ಯ, ಬ್ರಹ್ಮಶ್ರೀ ನಾರಾಯಣ ಹಾಗೂ ಶ್ರೀ ಕೃಷ್ಣ ಸಮುದಾಯದ ಅಧ್ಯಕ್ಷರು ಹಾಗೂ ಮುಖಂಡರು ಉಪಸ್ಥಿತರಿದ್ದರು.

ಲೋಕೊ ಪೈಲಟ್ ಮುಂಬಡ್ತಿ ಪರೀಕ್ಷೆ ಕನ್ನಡದಲ್ಲಿ ನಡೆಸಲು ನೈರುತ್ಯ ರೈಲ್ವೆ ಅಧಿಸೂಚನೆ



ಬೆಂಗಳೂರು: ಸಹಾಯಕ ಲೋಕೊ ಪೈಲಟ್ ಮುಂಬಡ್ತಿ ಪರೀಕ್ಷೆಯನ್ನು ಕನ್ನಡದಲ್ಲಿ ನಡೆಸಲು ನೈರುತ್ಯ ರೈಲ್ವೆ ಅಧಿಸೂಚನೆ ಹೊರಡಿಸಿದೆ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, 'ನನ್ನ ಸೂಚನೆಯ ಮೇರೆಗೆ ಸಹಾಯಕ ಲೋಕೊ ಪೈಲಟ್ ಮುಂಬಡ್ತಿ ಪರೀಕ್ಷೆಯನ್ನು ಕನ್ನಡದಲ್ಲಿ ನಡೆಸಲು ನೈಋತ್ಯ ರೈಲ್ವೆ ಅಧಿಸೂಚನೆ ಹೊರಡಿಸಿದೆ. ಈ ನಿರ್ಧಾರದಿಂದ ರೈಲ್ವೆ ಇಲಾಖೆಯಲ್ಲಿ ಕನ್ನಡಿಗರಿಗೆ ಮತ್ತಷ್ಟು ಅವಕಾಶಗಳು ದೊರೆಯಲಿವೆ' ಎಂದು ಪೋಸ್ಟ್ ಮಾಡಿದ್ದಾರೆ

ಈ ಮಹತ್ವದ ನಿರ್ಧಾರ ಕೈಗೊಂಡ ಪ್ರಧಾನಿ ನರೇಂದ್ರ ಮೋದಿ ಅವರಿಗೆ, ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹಾಗೂ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರಿಗೆ ಧನ್ಯವಾದಗಳು ಎಂದು ಬಿಜೆಪಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ. ರೈಲ್ವೆ ಸುರಕ್ಷತೆ ಹೆಚ್ಚಿಸಲು ಮುಂದಿನ ಆರರಿಂದ ಎಂಟು ತಿಂಗಳಲ್ಲಿ 18,799 ಸಹಾಯಕ ಲೋಕೊ ಪೈಲಟ್‌ಗಳನ್ನು ನೇಮಕ ಮಾಡಿಕೊಳ್ಳಲು ಭಾರತೀಯ ರೈಲ್ವೆ ನಿರ್ಧರಿಸಿದೆ. ಈ ಹಿಂದೆ 5,696



ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಲಾಗಿತ್ತು. ಜೂನ್ 19ರಂದು ಇದನ್ನು ಪರಿಷ್ಕರಿಸಿ, 18,799 ಸಹಾಯಕ ಲೋಕೊ ಪೈಲಟ್‌ಗಳ ನೇಮಕಕ್ಕೆ ನಿರ್ಧರಿಸಲಾಗಿದೆ.

ನೇಮಕ ಪ್ರಕ್ರಿಯೆಗೆ ತಕ್ಷಣವೇ ಚಾಲನೆ ನೀಡುವಂತೆ ರೈಲ್ವೆ ಮಂಡಳಿಯು ವಲಯ ರೈಲ್ವೆಗಳಿಗೆ ಸೂಚನೆ ನೀಡಿದೆ. ಈ ಹುದ್ದೆಗಳ ಭರ್ತಿಗೆ ಕನಿಷ್ಠ ಆರು ತಿಂಗಳ ಕಾಲಾವಕಾಶ ಬೇಕಾಗುತ್ತದೆ ಎಂದು ನಿರೀಕ್ಷಿಸಲಾಗಿದೆ. ಈಚೆಗೆ ಪಶ್ಚಿಮ ಬಂಗಾಳದಲ್ಲಿ ಸರಕು ಸಾಗಣೆ ರೈಲು ಡಿಕ್ಕಿ ಹೊಡೆದ ಪರಿಣಾಮ ಪ್ರಯಾಣಿಕ ರೈಲಿನ ನಾಲ್ಕು ಬೋಗಿಗಳು ಹಾನಿಯಾಗಿದ್ದವು. ಈ ಅಪಘಾತದಲ್ಲಿ ಒಟ್ಟು 10 ಮಂದಿ ಮೃತಪಟ್ಟಿದ್ದರು. ಈ ಘಟನೆಯ ಬೆನ್ನಲ್ಲೇ ರೈಲ್ವೆ ಇಲಾಖೆಯು ಹೆಚ್ಚಿನ ಸಂಖ್ಯೆಯಲ್ಲಿ ಲೋಕೊ ಪೈಲಟ್‌ಗಳ ನೇಮಕಕ್ಕೆ ಮುಂದಾಗಿದೆ. ನನ್ನ ಸೂಚನೆಯ ಮೇರೆಗೆ ಸಹಾಯಕ ಲೋಕೋ ಪೈಲಟ್ ಮುಂಬಡ್ತಿ ಪರೀಕ್ಷೆಯನ್ನು ಕನ್ನಡದಲ್ಲಿ ನಡೆಸಲು ನೈಋತ್ಯ ರೈಲ್ವೆ ಅಧಿಸೂಚನೆ ಹೊರಡಿಸಿದೆ. ಈ ನಿರ್ಧಾರದಿಂದ ಪ್ರತಿಭಾವಂತ ಕನ್ನಡಿಗ ಉದ್ಯೋಗಿಗಳಿಗೆ ರೈಲ್ವೆಯಲ್ಲಿ ಮತ್ತಷ್ಟು ಹೆಚ್ಚಿನ ಅವಕಾಶಗಳು ದೊರಕಲಿವೆ ಎಂಬ ಭರವಸೆಯಿದೆ.

ಡಿಪ್ಲೊಮಾ ಕೋರ್ಸ್‌ಗಳ ಪ್ರವೇಶಕ್ಕೆ ಅವಧಿ ವಿಸ್ತರಣೆ

ಮೈಸೂರು, ಆ.7–ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆ(ಸಿಪೆಟ್) 2024–25ನೇ ಸಾಲಿನ ಉದ್ಯೋಗಾಧಾರಿತ ಮತ್ತು ಉದ್ಯೋಗ ಖಚಿತ ಡಿಪ್ಲೊಮಾ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಸಲ್ಲಿಸುವ ಅವಧಿ ವಿಸ್ತರಿಸಲಾಗಿದೆ. ಎಸ್‌ಎಸ್‌ಎಲ್‌ಸಿ, ಪಿ.ಯು.ಸಿ.(ವಿಜ್ಞಾನ), ITI ಪರೀಕ್ಷೆಯಲ್ಲಿ 35% ಅಂಕ ಪಡೆದು ತೇರ್ಗಡೆಯಾದ ಅಭ್ಯರ್ಥಿಗಳು ಮೂರು ವರ್ಷದ ಡಿಪ್ಲೊಮಾ ಇನ್ ಪ್ಲಾಸ್ಟಿಕ್ಸ್ ಟೆಕ್ನಾಲಜಿ (DPT),, ಡಿಪ್ಲೊಮಾ ಇನ್ ಪ್ಲಾಸ್ಟಿಕ್ಸ್ ಮೌಲ್ಡ್ ಟೆಕ್ನಾಲಜಿ (DPMT) ಕೋರ್ಸ್‌ಗಳಿಗೆ www.cipet.gov.in ವೆಬ್‌ಸೈಟ್ ಮೂಲಕ ಸೆ.1ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ದೂ.ಸಂ 9480253024, 9791431827 ಅನ್ನು ಸಂಪರ್ಕಿಸಬಹುದು ಎಂದು ಸಿಪೆಟ್ ಸಂಸ್ಥೆಯ ನಿರ್ದೇಶಕರು ಮತ್ತು ಮುಖ್ಯಸ್ಥರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಲ-ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

ಮೈಸೂರು, ಆ.7–ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದಿಂದ 2024–25ನೇ ಸಾಲಿಗೆ ವಿವಿಧ ಯೋಜನೆಯಡಿ ಸಾಲ–ಸೌಲಭ್ಯ ಪಡೆಯಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕಲಾವತಿಗೆ ಶೀಘ್ರ ಮುಡಾ ನಿವೇಶನ

ಪ್ರಾಧಿಕಾರದ ಸಭೆಗೆ ಮಂಡಿಸುತ್ತೇವೆ ಎಂದರು. ಕಲಾವತಿ ಅಲ್ಲದೇ, ಇತರ ನಾಲ್ವರು ಹುತಾತ್ಮರ ಕುಟುಂಬ ದವರು ನಿವೇಶನ ಕೋರಿ ಸಲ್ಲಿಸಿರುವ ಅರ್ಜಿಗಳನ್ನೂ ಸಭೆಯಲ್ಲಿ ಮಂಡಿಸಿ ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದವರ ಕುಟುಂಬದವರಿಗೆ ಆದ್ಯತೆ ಮೇಲೆ, ಅನುಕಂಪದ ಆಧಾರದಲ್ಲಿ ನಿವೇಶನ ನೀಡಬೇಕೆಂಬುದರ ಬಗ್ಗೆ ಸದಸ್ಯರಿಗೆ ಪೂರಕವಾದ ಅಂಶಗಳನ್ನು ವಿವರಿಸಿ ಎಲ್ಲಾ ಐದು ಮಂದಿಗೂ ನಿವೇಶನ ನೀಡುವ ಬಗ್ಗೆ ನಿರ್ಣಯ ಕೈಗೊಂಡು ಅದರಂತೆ ಕ್ರಮ ವಹಿಸಲಾಗುವುದು ಎಂದು ಮುಡಾ ಆಯುಕ್ತರು ತಿಳಿಸಿದರು. ಕಲಾವತಿ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿ 4 ವರ್ಷಗಳಿಂದ ಕಾಯುತ್ತಿದ್ದಾರೆಂಬ ವಿಷಯ ನನಗೆ ಗೊತ್ತಿರಲಿಲ್ಲ. 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳಲ್ಲಿ ಈ ಕುರಿತು ವರದಿ ಪ್ರಕಟವಾದ ಮೇಲಷ್ಟೇ ನನಗೆ ತಿಳಿಯಿತು. ನಮ್ಮ ಕಣ್ತೆರೆಸಿದ ಎರಡೂ ಪತ್ರಿಕೆಗಳಿಗೆ ನಾನು ಧನ್ಯವಾದ ಸಲ್ಲಿಸುತ್ತಿದ್ದೇನೆ ಎಂದರು.

ದೇಶ - ವಿದೇಶ

ಬಾಂಗ್ಲಾದಲ್ಲಿ ಅವಾಮಿ ಲೀಗ್‌ನ ನಾಯಕರು, ಕುಟುಂಬ ಸದಸ್ಯರ 29 ಶವ ಪತ್ತೆ

ಢಾಕಾ: ಬಾಂಗ್ಲಾದೇಶದಲ್ಲಿ ಶೇಖ್ ಹಸೀನಾ ಅವರು ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿ, ಭಾರತಕ್ಕೆ ಪಲಾಯನವಾದ ಬಳಿಕ ದೇಶಾದ್ಯಂತ ನಡೆದ ದಂಗೆಯಲ್ಲಿ ಶೇಖ್ ಹಸೀನಾ ಅವರ ಅವಾಮಿ ಲೀಗ್ ಪಕ್ಷದ ನಾಯಕರು ಮತ್ತು ಅವರ ಕುಟುಂಬದ ಸದಸ್ಯರ 29 ಮೃತದೇಹಗಳು ಪತ್ತೆಯಾಗಿವೆ. ಕ್ಯುಮಿಲ್ಲಾದಲ್ಲಿ ಜನಸಮೂಹ ನಡೆಸಿದ ದಾಳಿಯಲ್ಲಿ ಕನಿಷ್ಠ 11 ಜನರು ಸಾವಿಗೀಡಾಗಿದ್ದಾರೆ. ಮಾಜಿ ಕೌನ್ಸಿಲರ್ ಮೊಹಮ್ಮದ್ ಶಾ ಆಲಂ ಅವರ 3 ಅಂತಸ್ತಿನ ಮನೆಗೆ ದುಷ್ಕರ್ಮಿಗಳು ಬೆಂಕಿ ಹಚ್ಚಿದ್ದರಿಂದ 6 ಮಂದಿ ಮೃತಪಟ್ಟಿದ್ದಾರೆ. ಪ್ರತ್ಯಕ್ಷದರ್ಶಿಗಳು ಹೇಳುವ ಪ್ರಕಾರ ಗುಂಪೊಂದು ಶಾ ಆಲಂ ಅವರ ಮನೆಯ ಮೇಲೆ ದಾಳಿ ಮಾಡಿದರು. ಈ ವೇಳೆ ರಕ್ಷಣೆಗೆಂದು ಕೆಲವರು ಮನೆಯ 3ನೇ ಮಹಡಿಗೆ ಏರಿದರು. ದುಷ್ಕರ್ಮಿಗಳು ಮನೆಯ ನೆಲ ಮಹಡಿಗೆ ಬೆಂಕಿ ಹಚ್ಚಿದ ಪರಿಣಾಮ 3ನೇ ಮಹಡಿಯಲ್ಲಿ ಆಶ್ರಯ ಪಡೆದಿದ್ದವರು ದಟ್ಟ ಹೊಗೆಯಿಂದಾಗಿ ಸಾವಿಗೀಡಾದ ಘಟನೆ ನಡೆದಿದೆ.



ಗಡಿಯಲ್ಲಿ ನುಸುಳುವಿಕೆ ಹೆಚ್ಚಳ: ಈ ವರ್ಷದ ಜುಲೈವರೆಗೆ ಓರ್ವ ಪಾಕ್ ನುಸುಳುಕೋರನ ಹತ್ಯೆ, 24 ಮಂದಿ ಬಂಧನ

ನವದೆಹಲಿ: ಈ ವರ್ಷ ಪಂಜಾಬ್ ಸೆಕ್ಟರ್ ಗಡಿಯಲ್ಲಿ ಒಳನುಸುಳುವಿಕೆ ಪ್ರಯತ್ನಗಳು ಹೆಚ್ಚಾಗಿದ್ದು, ಜುಲೈ 31ರವರೆಗೂ ಓರ್ವ ಪಾಕ್ ನುಸುಳು ಕೋರನನ್ನು ಹತ್ಯೆಗೈಯಲಾಗಿದ್ದು, 24 ಜನರನ್ನು ಬಂಧಿಸಲಾಗಿದೆ ಎಂದು ಬಿಎಸ್‌ಎಫ್ ಅಧಿಕಾರಿಗಳು ತಿಳಿಸಿದ್ದಾರೆ.

ಬಂಧಿತ 24 ನುಸುಳುಕೋರರ ಪೈಕಿ 12 ಮಂದಿಯನ್ನು ಹೆಚ್ಚಿನ ತನಿಖೆಗಾಗಿ ಪಂಜಾಬ್ ಪೊಲೀಸರಿಗೆ ಹಸ್ತಾಂತರಿಸಲಾಗಿದ್ದು, ಉಳಿದ 12 ಮಂದಿಯನ್ನು ಪಾಕಿಸ್ತಾನ ರೇಂಜರ್‌ಗಳಿಗೆ ಹಸ್ತಾಂತರಿಸಲಾಗಿದೆ ಎಂದು ಹಿರಿಯ ಬಿಎಸ್‌ಎಫ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಆಗಸ್ಟ್ 2ರಂದು, ಜಮ್ಮುವಿನ ಮಂಗುಚೆಕ್ ಪ್ರದೇಶದ ಖೋರಾ ಪೋಸ್ಟ್ ಬಳಿ 45 ವರ್ಷದ ವ್ಯಕ್ತಿಯೊಬ್ಬ ಪಾಕಿಸ್ತಾನದ ತುಗ್ಲಿಯಾಲ್‌ಪುರ ಪೋಸ್ಟ್‌ನಿಂದ ಭಾರತದ ಕಡೆಗೆ ನುಸುಳಿದ ನಂತರ ಆತನನ್ನು ಹತ್ಯೆ ಮಾಡಲಾಗಿತ್ತು.

ನೇಪಾಳದ ನುವಾಕೋಟ್‌ನಲ್ಲಿ ಹೆಲಿಕಾಪ್ಟರ್ ಪತನ; ನಾಲ್ವರ ಸಾವು

ಕಠ್ಮಂಡು: ಬುಧವಾರ ಮಧ್ಯಾಹ್ನ ನುವಾಕೋಟ್‌ನ ಶಿವಪುರಿ ಪ್ರದೇಶದಲ್ಲಿ ಏರ್ ಡೈನಾಸ್ಟಿಯ ಹೆಲಿಕಾಪ್ಟರ್ ಪತನಗೊಂಡಿದೆ. ಈ ದುರಂತದಲ್ಲಿ ಒಟ್ಟು ನಾಲ್ವರು ಸಾವನ್ನಪ್ಪಿದ್ದಾರೆ. ಹೆಲಿಕಾಪ್ಟರ್ ಕಠ್ಮಂಡುವಿನಿಂದ ರಾಸುವಾಗೆ ತೆರಳುತ್ತಿದ್ದಾಗ ನುವಾಕೋಟ್ ಜಿಲ್ಲೆಯ ಸೂರ್ಯ ಚೌರ್–7ನಲ್ಲಿ ಬೆಟ್ಟಕ್ಕೆ ಡಿಕ್ಕಿ ಹೊಡೆದಿದೆ. ಈ ಅಪಘಾತದ ಬಗ್ಗೆ ಮಾಹಿತಿ ಪಡೆದ ಕೂಡಲೇ ಅಧಿಕಾರಿಗಳು ರಕ್ಷಣಾ ತಂಡವನ್ನು ಸ್ಥಳಕ್ಕೆ ರವಾನಿಸಿದರು. ಹೆಲಿಕಾಪ್ಟರ್ ಮಧ್ಯಾಹ್ನ 1.54ಕ್ಕೆ ಕಠ್ಮಂಡುವಿನಿಂದ ಹೊರಟಿತ್ತು. ಸೂರ್ಯ ಚೌರ್ ತಲುಪಿದ ನಂತರ ಹೆಲಿಕಾಪ್ಟರ್ ಅಧಿಕಾರಿಗಳೊಂದಿಗೆ ಸಂಪರ್ಕ ಕಳೆದುಕೊಂಡಿತು. ಈ ಹೆಲಿಕಾಪ್ಟರ್ ಅನ್ನು ಹಿರಿಯ ಕ್ಯಾಪ್ಟನ್ ಅರುಣ್ ಮಲ್ಲಾ ಅವರು ಪೈಲಟ್ ಮಾಡುತ್ತಿದ್ದರು. ಹೆಲಿಕಾಪ್ಟರ್ ಟೇಕಾಫ್ ಆಗುವಾಗ ಅದರಲ್ಲಿ ನಾಲ್ವರು ಚೀನಾದ ಪ್ರಜೆಗಳು ಮತ್ತು ಪೈಲಟ್ ಸೇರಿದಂತೆ ಒಟ್ಟು 5 ಮಂದಿ ಇದ್ದರು.



ಬಾಂಗ್ಲಾದಲ್ಲಿರುವ ಹಿಂದೂಗಳ ರಕ್ಷಿಸದಿದ್ದರೆ ಭಾರತ ಎಂದಿಗೂ ಮಹಾಭಾರತ ಆಗಲ್ಲ

ನವದೆಹಲಿ: ಬಾಂಗ್ಲಾದೇಶದಲ್ಲಿ ನಡೆಯುತ್ತಿರುವ ಹಿಂಸಾಚಾರ, ಅಲ್ಪಸಂಖ್ಯಾತ ಹಿಂದೂಗಳ ಮೇಲಿನ ದೌರ್ಜನ್ಯದ ವಿರುದ್ಧ ಧ್ವನಿಯೆತ್ತಿರುವ ಸದ್ಗುರು ಜಗ್ಗಿ ವಾಸುದೇವ್, ಹಿಂದೂಗಳ ಮೇಲಿನ ದೌರ್ಜನ್ಯಗಳು ಕೇವಲ ಬಾಂಗ್ಲಾದೇಶದ ಆಂತರಿಕ ವಿಷಯವಲ್ಲ. ಬಾಂಗ್ಲಾದಲ್ಲಿ ವಾಸಿಸುವ ಅಲ್ಪಸಂಖ್ಯಾತರನ್ನು ರಕ್ಷಿಸಲು ವಿಫಲವಾದರೆ ಇಂಡಿಯಾ ಅಥವಾ ಭಾರತವು ಬಲಿಷ್ಠ ರಾಷ್ಟ್ರವಾಗಲು ಸಾಧ್ಯವಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಅವರು, ಹಿಂದೂಗಳ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು ಕೇವಲ ಬಾಂಗ್ಲಾದೇಶದ ಆಂತರಿಕ ವಿಷಯವಲ್ಲ. ನಮ್ಮ ನೆರೆಹೊರೆಯಲ್ಲಿರುವ ಅಲ್ಪಸಂಖ್ಯಾತರ ಸುರಕ್ಷತೆಯನ್ನು ಖಾತ್ರಿಪಡಿಸಲು ನಾವು ಆದಷ್ಟು ಬೇಗ ಎದ್ದುನಿಂತು ಕಾರ್ಯನಿರ್ವಹಿಸದಿದ್ದರೆ ಭಾರತವು ಮಹಾಭಾರತವಾಗುವುದಿಲ್ಲ. ದುರದೃಷ್ಟವಶಾತ್ ಬಾಂಗ್ಲಾ ನಮ್ಮ ನೆರೆ ರಾಷ್ಟ್ರ. ನಮ್ಮ ನೆಲದ ನಾಗರಿಕರನ್ನು ರಕ್ಷಿಸುವುದು ನಮ್ಮ ಜವಾಬ್ದಾರಿಯಾಗಿದೆ ಎಂದು ಬರೆದುಕೊಂಡಿದ್ದಾರೆ.



ಇರಾನ್ ಸಂಪರ್ಕವಿರುವ ಪಾಕ್ ವ್ಯಕ್ತಿಯಿಂದ ಟ್ರಂಪ್ ಹತ್ಯೆಗೆ ಸಂಚು

ವಾಷಿಂಗ್‌ಟನ್: ಯುಎಸ್ ನೆಲದಲ್ಲಿ ಅಮೆರಿಕ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಇತರ ನಾಯಕರ ಹತ್ಯೆಗೆ ಇರಾನ್‌ನೊಂದಿಗೆ ಸಂಪರ್ಕ ಹೊಂದಿರುವ ಪಾಕಿಸ್ತಾನಿ ವ್ಯಕ್ತಿಯೊಬ್ಬ ಸಂಚು ಹೂಡಿದ್ದಾನೆ ಎಂದು ಆರೋಪಿಸಲಾಗಿದೆ. ಹಣ ಕೊಟ್ಟು ಕೊಲೆ ಮಾಡಿಸಲು ಯತ್ನಿಸಿದ ಪ್ರಕರಣವನ್ನು ಯುಎಸ್ ನ್ಯಾಯಾಂಗ ಇಲಾಖೆ ಬಹಿರಂಗಪಡಿಸಿದೆ. ಎಫ್‌ಬಿಐ ನಿರ್ದೇಶಕ ಕ್ರಿಸ್ಟೋಫರ್ ವ್ರೇ ಈ ಯೋಜನೆಯನ್ನು ಡೇಂಜರಸ್ ಮರ್ಡರ್ ಫಾರ್ ಹೈರ್ ಪ್ಲಾಟ್, ನೇರವಾಗಿ ಇರಾನಿನ ಪ್ಲೇಬುಕ್‌ನಿಂದ ಹೊರಬಂದಿದೆ ಎಂದಿದ್ದಾರೆ.

ಆರೋಪಿಯನ್ನು 46 ವರ್ಷದ ಆಸಿಫ್ ಮರ್ಚೆಂಟ್ ಎಂದು ಗುರುತಿಸಲಾಗಿದೆ. ನ್ಯಾಯಾಂಗ ಇಲಾಖೆಯ ದೋಷಾರೋಪಣೆ ಪ್ರಕಾರ, ಮರ್ಚೆಂಟ್ ಇರಾನ್‌ನಲ್ಲಿ ಸ್ವಲ್ಪ ಸಮಯ ಕಳೆದ ನಂತರ ಪಾಕಿಸ್ತಾನದಿಂದ ಯುಎಸ್‌ಗೆ ಬಂದಿದ್ದಾನೆ. ಜೂನ್‌ನಲ್ಲಿ ಹತ್ಯೆಗಳನ್ನು ನಡೆಸಲು ನೇಮಿಸಿಕೊಳ್ಳುತ್ತಿದ್ದಾರೆಂದು ನಂಬಿದ ವ್ಯಕ್ತಿಯನ್ನು ಭೇಟಿ ಮಾಡುವ ಉದ್ದೇಶಕ್ಕಾಗಿ ಆಸಿಫ್ ನ್ಯೂಯಾರ್ಕ್‌ಗೆ ಪ್ರಯಾಣ ಬೆಳೆಸಿದ್ದ. ಹತ್ಯೆ ನಡೆಸಲು ಇಬ್ಬರಿಗೆ \$5,000 ಮುಂಗಡ ಪಾವತಿಸಿದ್ದ. ಅವರು ವಾಸ್ತವವಾಗಿ ರಹಸ್ಯ ಕಾನೂನು ಜಾರಿ ಅಧಿಕಾರಿಗಳಾಗಿದ್ದರು ಎಂದು ಫೆಡರಲ್ ಅಧಿಕಾರಿಗಳನ್ನು ಉಲ್ಲೇಖಿಸಿ ಸುದ್ದಿ ಸಂಸ್ಥೆ ಅಸೋಸಿಯೇಟೆಡ್ ಪ್ರೆಸ್ ವರದಿ ಮಾಡಿದೆ.



ಐದನೇ ಪುಟದಿಂದ

ವಿನೀಶ್ ಫೋಗಟ್ ಔಟ್

ವಿನೇಶ್ 55 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿ ಚಿನ್ನದ ಪದಕ ಗೆದ್ದಿದ್ದರು. ಆದರೆ, 50 ಕೆಜಿ ವಿಭಾಗದಲ್ಲಿ ಇದೇ ಮೊದಲ ಬಾರಿಗೆ ಅವರು ಕಣಕ್ಕಿಳಿದ್ದರು. ಇದೀಗ ತೂಕ ಹೆಚ್ಚಳ ಅವರ ಈ ಹಿನ್ನಡೆಗೆ ಕಾರಣ ಎಂದು ಹೇಳಲಾಗುತ್ತಿದೆ.

ಒಲಿಂಪಿಕ್ಸ್ ಸ್ಪರ್ಧೆಗೂ ಮುನ್ನ ವಿನೇಶ್ ಅವರ ತೂಕ 2 ಕೆಜಿ ಹೆಚ್ಚಳವಾಗಿತ್ತು. ಇದನ್ನು ಕಡಿಮೆ ಮಾಡಲೆಂದೇ ಅವರು ನಿದ್ದೆ, ಆಹಾರ ಬಿಟ್ಟು ಅತ್ಯಂತ ಕಠಿಣ ಕಸರತ್ತು ನಡೆಸಿ ಸುಮಾರು 1.90 ಕೆಜಿ ತೂಕ ಇಳಿಸಿಕೊಂಡಿದ್ದರು. ಆದರೆ 100 ಗ್ರಾಂ ಹೆಚ್ಚಳದಿಂದ ಇದೀಗ ಅವರ ಒಲಿಂಪಿಕ್ಸ್ ಪದಕದ ಕನಸು ನುಚ್ಚು ನೂರಾಗಿದೆ. ಒಂದೊಮ್ಮೆ ಅವರು ತಮ್ಮ ಈ ಹಿಂದಿನಂತೆ 53 ಕೆಜಿ ತೂಕ ವಿಭಾಗದಲ್ಲಿ ಸ್ಪರ್ಧಿಸುತ್ತಿದ್ದರೆ ಸಮಸ್ಯೆ ಇರಲಿಲ್ಲ ಎಂಬ ವಾದವೂ ಇದೆ.

ಯುನೈಟೆಡ್ ವರ್ಲ್ಡ್ ವ್ರೆಸ್ಲಿಂಗ್ ನಿಯಮಗಳ ಪ್ರಕಾರ, ಒಬ್ಬ ಕುಸ್ತಿಪಟು ತೂಕ ಪರೀಕ್ಷೆಯಲ್ಲಿ ವಿಫಲರಾದರೆ, ತಕ್ಷಣವೇ ಅವರನ್ನು ಅನರ್ಹಗೊಳಿಸಲಾಗುತ್ತದೆ. ಅಲ್ಲದೆ ಕುಸ್ತಿಪಟುವಿನ ಗೆಲುವನ್ನೂ ಅನರ್ಹಗೊಳಿಸಿ ಕೊನೆಯ ಸ್ಥಾನದಲ್ಲಿ ಇರಿಸಲಾಗುತ್ತದೆ. "ಒಬ್ಬ ಅಥ್ಲೀಟ್ ತೂಕ– ಪರೀಕ್ಷೆಗೆ ಹಾಜರಾಗದಿದ್ದರೆ ಅಥವಾ ತೂಕ ಪರೀಕ್ಷೆಯಲ್ಲಿ ವಿಫಲವಾದರೆ ಅವನು/ಆಕೆ ಸ್ಪರ್ಧೆಯಿಂದ ಹೊರ ಹಾಕಲ್ಪಡುತ್ತಾರೆ. ಕನಿಷ್ಠ ಆ ಸ್ಪರ್ಧೆಗೆ ಕೊನೆಯ ಶ್ರೇಯಾಂಕ ಕೂಡ ನೀಡಲಾಗುವುದಿಲ್ಲ. ವಿನೇಶ್ ಫೋಗಟ್ ವಿಚಾರದಲ್ಲಿ ಹೆಚ್ಚುವರಿ ತೂಕದ ಕುರಿತು ನಿಖರ ಮಾಹಿತಿ ಇಲ್ಲವಾದರೂ ಆಕೆ 100 ರಿಂದ 150 ಗ್ರಾಂ ಹೆಚ್ಚುವರಿ ತೂಕ ಹೊಂದಿದ್ದರು ಎನ್ನಲಾಗಿದೆ.

ಇದೇ ಕಾರಣಕ್ಕೆ ವಿನೇಶ್ ಫೋಗಟ್ ಫೈನಲ್ ತಲುಪಿದ್ದರೂ ಯಾವುದೇ ಪದಕಕ್ಕೆ ಅರ್ಹರಾಗುವುದಿಲ್ಲ. ಒಂದು ವೇಳೆ ವಿನೇಶ್ ಫೋಗಟ್ ಫೈನಲ್ ಪಂದ್ಯದಲ್ಲಿ ಸೋತಿದ್ದರೂ ಬೆಳ್ಳಿ ಪದಕ ಖಚಿತಪಡಿಸಿಕೊಳ್ಳುತ್ತಿದ್ದರು. ಆದರೆ 100 ಗ್ರಾಂ ತೂಕ ಅವರ ಕನಸಿಗೆ ಕೊಳ್ಳಿ ಇಟ್ಟಿದೆ.

ಮಂಗಳವಾರ ಬೆಳಗ್ಗೆ ವಿನೇಶ್ ಫೋಗಟ್ 50 ಕೆಜಿ ಗರಿಷ್ಠ ಮಿತಿಯನ್ನು ತಲುಪಿದ್ದರು. ನಾಲ್ಕು ಬಾರಿಯ ವಿಶ್ವ ಚಾಂಪಿಯನ್ ಮತ್ತು ಜಪಾನ್‌ನ ಟೋಕಿಯೊ ಚಿನ್ನದ ಪದಕ ವಿಜೇತ ಯುಯಿ ಸುಸಾಕಿ ವಿರುದ್ಧ ಸೇರಿದಂತೆ ಮೂರು ಪಂದ್ಯಗಳನ್ನು ಗೆದ್ದರು, ಯಾವುದೇ ತೂಕ ವಿಭಾಗದಲ್ಲಿ ಒಲಿಂಪಿಕ್ಸ್‌ನಲ್ಲಿ ಫೈನಲ್‌ಗೆ ತಲುಪಿದ ಮೊದಲ ಭಾರತೀಯ ಮಹಿಳಾ ಕುಸ್ತಿಪಟು ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ಆದರೆ, ಬುಧವಾರ ಬೆಳಗ್ಗೆ ನಡೆದ ತೂಕ ಪರೀಕ್ಷೆಯಲ್ಲಿ ವಿಫಲವಾಗುವ ಮೂಲಕ ಭಾರತೀಯ ಕ್ರೀಡಾಭಿಮಾನಿಗಳಿಗೆ ನಿರಾಸೆ ಮೂಡಿಸಿದ್ದಾರೆ.

ರಾತ್ರಿಯಿಡೀ ವರ್ಕೌಟ್ ಮಾಡಿದ್ದ ಫೋಗಟ್: ತೂಕ ಏರಿಕೆಯಾದ ಆತಂಕದಲ್ಲಿ ವಿನೇಶ್ ನಿನ್ನೆ ಹಗಲು ರಾತ್ರಿಯಿಡೀ ಸೈಕ್ಲಿಂಗ್, ಸ್ಕಿಪ್ಪಿಂಗ್ ಮಾಡಿ ಹೇಗಾದರೂ ತೂಕ ಇಳಿಸಿಕೊಳ್ಳಲು ಪ್ರಯತ್ನಿಸಿದ್ದರು. ಭಾರತೀಯ ಒಲಿಂಪಿಕ್ ಅಸೋಸಿಯೇಷನ್ ತನ್ನ ಪ್ರಯತ್ನ ಮುಂದುವರಿಸಿತ್ತು. ಆದರೆ ಈ ದಿನ ವಿನೇಶ್ ಪರವಾಗಿಲ್ಲ. ಚಿನ್ನದ ಪದಕ ಗೆಲ್ಲದಿದ್ದರೂ ಇಂದು ಶತಕೋಟಿ ಜನರ ಮನ ಗೆದ್ದಿದ್ದಾರೆ.

ಸೂಕ್ತ ಕ್ರಮ ಕೈಗೊಳ್ಳಲು ಪ್ರಧಾನಿ ಸೂಚನೆ

ನವದೆಹಲಿ: ಭಾರತದ ಕುಸ್ತಿಪಟು ವಿನೇಶಾ ಫೋಗಟ್ ಅವರನ್ನು ಒಲಿಂಪಿಕ್ಸ್‌ನಿಂದ ಅನರ್ಹಗೊಳಿಸಿರುವ ಸಂಬಂಧ ಸೂಕ್ತ ಕ್ರಮ ಕೈಗೊಳ್ಳುವಂತೆ ಭಾರತ ಒಲಿಂಪಿಕ್ ಸಂಸ್ಥೆಗೆ (LMJ) ಪ್ರಧಾನಿ ನರೇಂದ್ರ ಮೋದಿ ಅವರು ಸೂಚನೆ ನೀಡಿದ್ದಾರೆ ಎಂದು ಲೋಕಸಭೆಗೆ ಕೇಂದ್ರ ಸರ್ಕಾರ ಬುಧವಾರ ತಿಳಿಸಿದೆ.

ಈ ಕುರಿತು ಲೋಕಸಭೆಗೆ ಮಾಹಿತಿ ನೀಡಿರುವ ಕೇಂದ್ರ ಸಚಿವ ಮನ್‌ಸುಖ್ ಮಾಂಡವೀಯ, ಫೋಗಟ್ ಅನರ್ಹ ಸಂಬಂಧ ಯುನೈಟೆಡ್ ವರ್ಲ್ಡ್ ರೆಸ್ಲಿಂಗ್‌ಗೆ (ಯುಡಬ್ಲ್ಯುಡಬ್ಲ್ಯು) ಭಾರತ ಒಲಿಂಪಿಕ್ಸ್ ಸಂಸ್ಥೆ ತೀವ್ರ ಪ್ರತಿಭಟನೆ ದಾಖಲಿಸಿದೆ ಎಂದು ತಿಳಿಸಿದ್ದಾರೆ. ಭಾರತ ಪ್ರಧಾನಿ ನರೇಂದ್ರ ಮೋದಿ ಅವರು ಐಒಎ ಅಧ್ಯಕ್ಷೆ ಪಿ.ಟಿ.ಉಷಾ ಅವರೊಂದಿಗೆ ಮಾತನಾಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ ಎಂದು ಅವರು ಹೇಳಿದ್ದಾರೆ. 100 ಗ್ರಾಂ ತೂಕ ಹೆಚ್ಚಿದ್ದರಿಂದ ಭಾರತದ ಕುಸ್ತಿಪಟು ವಿನೇಶಾ ಫೋಗಟ್ ಅವರು ಒಲಿಂಪಿಕ್ಸ್‌ನಿಂದ ಅನರ್ಹಗೊಂಡಿದ್ದಾರೆ. ವಿನೇಶಾ ಅವರು ಮಹಿಳೆಯರ 50 ಕೆ.ಜಿ ವಿಭಾಗದಲ್ಲಿ ಸ್ಪರ್ಧಿಸಿದ್ದರು. ಸ್ಪರ್ಧೆಯ ನಿಯಮದ ಅನ್ವಯ ಅವರ ತೂಕ 50 ಕೆ.ಜಿ ಇರಬೇಕಿತ್ತು ಎಂದು ಅವರು ತಿಳಿಸಿದ್ದಾರೆ. ಯುನೈಟೆಡ್ ವರ್ಲ್ಡ್ ರೆಸ್ಲಿಂಗ್ ನಿಯಮದ ಅನ್ವಯ ಸ್ಪರ್ಧೆಗೂ ಮುನ್ನ ಪ್ರತಿದಿನ ಬೆಳಿಗ್ಗೆ ತೂಕವನ್ನು ಅಳೆಯಲಾಗುತ್ತದೆ. ಆಗಸ್ಟ್ 7 ಬೆಳಿಗ್ಗೆ 7.15ರಿಂದ 7.15ರ (ಪ್ಯಾರಿಸ್ ಸಮಯ) ನಡುವೆ ನಡೆಸಿದ ಪರೀಕ್ಷೆಯಲ್ಲಿ ವಿನೇಶಾ ಅವರ ತೂಕ 50 ಕೆ.ಜಿ 100 ಗ್ರಾಂ ಇತ್ತು. ಇದರಿಂದಾಗಿ ಅನರ್ಹಗೊಂಡರು ಎಂದು ಅವರು ಮಾಹಿತಿ ನೀಡಿದ್ದಾರೆ.

ಚಾಂಪಿಯನ್‌ಗಳಲ್ಲಿ ಚಾಂಪಿಯನ್

ಎಂದು ಭರವಸೆ ತುಂಬುವ ಶಬ್ದಗಳನ್ನು ಸೋಷಿಯಲ್ ಮೀಡಿಯಾ ಮೂಲಕ ಪ್ರಧಾನಿ ಮೋದಿ ಹಂಚಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ಭಾರತ ಮತ್ತು ವಿನೇಶ್ ಫೋಗಟ್‌ಗೆ ಮುಕ್ತವಾದ ಆಯ್ಕೆಗಳ ಕುರಿತು ಹಿರಿಯ ಅಥ್ಲೀಟ್ ಮತ್ತು ಭಾರತೀಯ ಒಲಿಂಪಿಕ್ಸ್ ಅಸೋಸಿಯೇಷನ್ ಅಧ್ಯಕ್ಷೆ ಪಿಟಿ ಉಷಾ ಅವರೊಂದಿಗೆ ಪ್ರಧಾನ ಮಂತ್ರಿ ಮಾತನಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ಎಲ್ಲಾ ಆಯ್ಕೆಗಳನ್ನು ಅನ್ವೇಷಿಸಲು IOA ಮುಖ್ಯಸ್ಥರಿಗೆ ಪ್ರಧಾನಮಂತ್ರಿ ಕೇಳಿದ್ದಾರೆ ಮತ್ತು ವಿನೇಶ್ ಫೋಗಟ್ ಅವರ ಅನರ್ಹತೆಗೆ ಭಾರತದ ಪ್ರಬಲ ವಿರೋಧವನ್ನು ವ್ಯಕ್ತಪಡಿಸುವಂತೆ ಒತ್ತಾಯಿಸಿದ್ದಾರೆ.

ಸತ್ಯಮೇವ ಜಯತೆ...

ಸರ್ಕಾರವನ್ನು ಭ್ರಷ್ಟ ಎಂದೇಳಲು ಅವರಿಗೇನು ನೈತಿಕತೆ ಇದೆ ಎಂದು ಪ್ರಶ್ನಿಸಿದರು. ಬಿಜೆಪಿ ಹಾಗೂ ಜೆಡಿಎಸ್‌ನವರು ನನ್ನನ್ನು ಟಾರ್ಗೆಟ್ ಮಾಡಿದ್ದಾರೆ. ಈ ಮೂಲಕ ನಮ್ಮ ಸರ್ಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನ ಮಾಡುತ್ತಿದ್ದಾರೆ. ಆಪರೇಷನ್ ಕಮಲ ಮಾಡಲು ನಡೆಸಿದ ಪ್ರಯತ್ನ ವಿಫಲ ವಾಯಿತು. ಈಗ ಮುಡಾ ವಿಚಾರವನ್ನು ವಿವಾದವಾಗಿ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ನಮ್ಮ ಸರ್ಕಾರ ಗ್ಯಾರಂಟಿ ಯೋಜನೆ ಜಾರಿಗೊಳಿಸಲು ಸಾಧ್ಯವಾಗುವುದಿಲ್ಲ ಎಂದು ಸ್ವತಃ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರೇ ಟೀಕಿಸಿದರು. ಜಾರಿಯಾದ ಮೇಲೆ ಅರ್ಧಕ್ಕೆ ನಿಲ್ಲುತ್ತದೆ ಎಂದು ಭವಿಷ್ಯ ನುಡಿದರು. ಆದರೆ ಗ್ಯಾರಂಟಿ ಯೋಜನೆ ಕೂಡ ಯಶಸ್ವಿಯಾಯಿತು. ಈಗ ಇದನ್ನು ಸಹಿಸದೆ ಮುಡಾ ವಿಚಾರ ಮುಂದಿಟ್ಟು ಆಧಾರರಹಿತ ಆರೋಪ ಮಾಡುತ್ತಿದ್ದಾರೆ ಎಂದು ಬಿಜೆಪಿ ಹಾಗೂ ಜೆಡಿಎಸ್ ನಾಯಕರ ವಿರುದ್ಧ ಸಿದ್ದರಾಮಯ್ಯ ಟೀಕಾ ಪ್ರಹಾರ ನಡೆಸಿದರು.

ಬಡವರು, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಪರ ಕೆಲಸ ಮಾಡುತ್ತಿರುವ ನನ್ನ ಜನಪರ ಯೋಜನೆಗಳಿಂದ ಬಿಜೆಪಿ ಹಾಗೂ ಜೆಡಿಎಸ್ ಭಯಭೀತರಾಗಿದ್ದಾರೆ ಎಂದು ತಿಳಿಸಿದರು. ಮುಡಾ ಪ್ರಕರಣ ಸಂಬಂಧ ರಾಜ್ಯಪಾಲರು ನನಗೆ ಒಂದು ನೋಟಿಸ್ ಮಾತ್ರ ನೀಡಿದ್ದು, ಅದಕ್ಕೆ ಈಗಾಗಲೇ ಉತ್ತರ ನೀಡಿದ್ದೇನೆ. ಸಚಿವ ಸಂಪುಟದ ನಿರ್ಣಯವನ್ನು ಕೂಡ ರಾಜ್ಯಪಾಲರಿಗೆ ತಲುಪಿಸಿದ್ದೇವೆ. ರಾಜ್ಯಪಾಲರು ನಾವು ನೀಡಿರುವ ಉತ್ತರವನ್ನು ಒಪ್ಪಿಕೊಳ್ಳುತ್ತಾರೆ ಎಂಬ ವಿಶ್ವಾಸವಿದೆ ಎಂದರು. ಮುಖ್ಯ ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಮೊದಲ ಬಾರಿಗೆ ಶಾಲಿನಿ ರಜನೀಶ್ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರನ್ನು ಸೌಜನ್ಯಯುತ ಭೇಟಿ ಯಾಗಿದ್ದಾರೆ. ಮುಡಾ ಪ್ರಕರಣಕ್ಕೂ ಶಾಲಿನಿ ರಜನೀಶ್ ಭೇಟಿಗೂ ಯಾವುದೇ ಸಂಬಂಧವಿಲ್ಲ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಮೈಸೂರು ಸಮಾವೇಶದಲ್ಲಿ ಎಲ್ಲವನ್ನೂ ಬಿಚ್ಚಿಡುತ್ತೇನೆ

ಬಿಜೆಪಿ ಹಾಗೂ ಜೆಡಿಎಸ್ ಸರ್ಕಾರದ ಅವಧಿಯಲ್ಲಿ ಏನೆಲ್ಲಾ ಹಗರಣ ನಡೆದಿದೆ ಎಂಬುದನ್ನು ಮೈಸೂರಿನಲ್ಲಿ ಆಗಸ್ಟ್ 9 ರಂದು ನಡೆಯುವ ಜನಾಂದೋಲನ ಸಮಾವೇಶದಲ್ಲಿ ಬಿಚ್ಚಿಡುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಎರಡೂ ಪಕ್ಷಗಳ ಹಗರಣಗಳ ಬಗ್ಗೆ ವಿವರ ನೀಡಲು ಮೈಸೂರಿನ ಪತ್ರಕರ್ತರ ಭವನದಲ್ಲಿ ಇಂದು ಪತ್ರಿಕಾಗೋಷ್ಠಿ ಕರೆದಿದ್ದೆ. ಆದರೆ ನಾಡಿದ್ದು ನಡೆಯುವ ಸಮಾವೇಶದಲ್ಲಿ ಜನರೆದುರು ಹೇಳೋಣ ಎಂದು ಪತ್ರಿಕಾಗೋಷ್ಠಿ ರದ್ದು ಮಾಡಿದೆ ಎಂದು ಹೇಳಿದರು. ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ಭ್ರಷ್ಟಾಚಾರವನ್ನು ಅಂದು ಎಳೆ ಎಳೆಯಾಗಿ ಬಿಡಿಸಿ ಹೇಳುತ್ತೇನೆ ಎಂದು ಸಿದ್ದರಾಮಯ್ಯ ತಿಳಿಸಿದರು.

ನನ್ನ ಪತ್ನಿಗೆ ಬದಲಿ ನಿವೇಶನ ನೀಡದಂತೆ ಆದೇಶಿಸಿದ್ದೆ

ಹಾಕದಿದ್ದರೂ ಭ್ರಷ್ಟಾಚಾರ ಆರೋಪದಲ್ಲಿ ಜೈಲಿಗೆ ಹೋಗಿದ್ದ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ಯಡಿಯೂರಪ್ಪ ಜೈಲಿಗೆ ಹೋಗಿದ್ದ ಪ್ರಕರಣವೇ ಬೇರೆ, ಇದೇ ಬೇರೆ ಎಂದು ಹೇಳಿದರು. ಯಡಿಯೂರಪ್ಪ ಡಿ ನೋಟಿಫಿಕೇಷನ್ ಮಾಡಿದ್ದರು. ಇದಕ್ಕೆ ಚೆಕ್ ಮೂಲಕ ಲಂಚ ಪಡೆದಿದ್ದರು. ಇದಕ್ಕಾಗಿ ಜೈಲಿಗೆ ಹೋಗಿದ್ದರು. ಆದರೆ ನಾನು ಯಾವುದೇ ಅಕ್ರಮ ಎಸಗಿಲ್ಲ, ಸಹಿ ಹಾಕಿಲ್ಲ, ಹಣ ಪಡೆದಿಲ್ಲ, ಪ್ರಭಾವ ಬೀರಿಲ್ಲ ಎಂದು ಪುನರ್ ಸ್ಪಷ್ಟನೆ ನೀಡಿದರು.

ಕಾರ್ಯಕರ್ತರ ನಡುವೆ ಮಾರಾಮಾರಿ

ಪೊಲೀಸರು ಹೆಣಗಾಡುತ್ತಿದ್ದರು. ಕೊನೆಗೆ ಪೊಲೀಸರು ಪ್ರೀತಂಗೌಡ ಹಾಗೂ ಬೆಂಬಲಿಗರನ್ನು ಸ್ಥಳದಿಂದ ಬೇರೆಡೆ ಕಳಿಸುವ ಮೂಲಕ ಪರಿಸ್ಥಿತಿಯನ್ನು ನಿಯಂತ್ರಿಸಿದರಾದರೂ ಉಭಯ ಪಕ್ಷದ ಕಾರ್ಯಕರ್ತರ ನಡುವೆ ಅಸಮಾಧಾನದ ಹೊಗೆಯಾಡುತ್ತಲೇ ಇತ್ತು. ಕುಮಾರಸ್ವಾಮಿ ಮತ್ತು ಆರ್. ಅಶೋಕ್ ಕಾರಿನಲ್ಲಿ ಬೆಂಗಳೂರಿನತ್ತ ಪ್ರಯಾಣ ಬೆಳೆಸಿದ ನಂತರ ವಿಜಯೇಂದ್ರ, ಸಿ.ಟಿ.ರವಿ, ಛಲವಾದಿ ನಾರಾಯಣಸ್ವಾಮಿ, ಅರವಿಂದ ಬೆಲ್ಲದ್, ಬಿಜೆಪಿ ಕಾರ್ಯಕರ್ತರು ಪಾದಯಾತ್ರೆ ಮುಂದುವರೆಸಿದರೆ, ಜೆಡಿಎಸ್ ಕಾರ್ಯಕರ್ತರು ಕೆಲ ನಿಮಿಷಗಳ ನಂತರ ನಿಖಿಲ್ ಕುಮಾರಸ್ವಾಮಿ, ಸುರೇಶ್ ಬಾಬು ನೇತೃತ್ವದಲ್ಲಿ ಹೆಜ್ಜೆ ಹಾಕಿದರು.

ಸಿದ್ದರಾಮಯ್ಯ ಸಿದ್ಧಾಂತದ ರಾಜಕಾರಣಿ; ಜಾತಿ ರಾಜಕಾರಣಿಯಲ್ಲ

● ಮಾಜಿ ಸಚಿವರೂ, ಮಾಜಿ ಸಭಾಪತಿ ಬಿ.ಎಲ್.ಶಂಕರ್ ಪ್ರತಿಪಾದನೆ ● ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕೆಂಪೇಗೌಡರು; ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನವರ ಫೋಟೋ ಹಾಕಿದ್ದು ಸಿದ್ದರಾಮಯ್ಯರ ಸಾಮಾಜಿಕ ಚಿಂತನೆ



'ಕರ್ನಾಟಕದ ಅಪರೂಪದ ಜನನಾಯಕನಿಗೆ ಜನಪರತೆಯೇ ದ್ವೇಷವಾಯಿತೆ' ವಿಚಾರ ಸಂಕಿರಣವನ್ನು ಮಾಜಿ ಸಭಾಪತಿ ಬಿ.ಎಲ್.ಶಂಕರ್, ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕೆಪಿಸಿಸಿ ವಕ್ತಾರ ನಿಕೇತ್ ರಾಜ್ ಮೌರ್ಯ ಮತ್ತಿತರರು ನಗಾರಿ ಬಾರಿಸುವ ಮೂಲಕ ಉದ್ಘಾಟಿಸಿದರು.

ಮೈಸೂರು, ಆ.7(ಎಂಕೆ)– ಸದಾ ಸಿದ್ಧಾಂತದ ರಾಜಕಾರಣ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಕರ್ನಾಟಕದ ಅಪರೂಪದ ಜನನಾಯಕರೇ ಹೊರತು ಅಹಿಂದ ನಾಯಕರಲ್ಲ. ತಮ್ಮ ಮೇಲೆ ಕಲ್ಲು ಎಸೆದವರಿಗೂ ಫಲವತ್ತಾದ ವೃಕ್ಷದಂತೆ ಹಣ್ಣನ್ನೇ ನೀಡಿದ್ದಾರೆಯೇ ಹೊರತು ಎಸೆದ ಕಲ್ಲನ್ನು ವಾಪಸ್ ಕೊಟ್ಟಿಲ್ಲ. 90 ವರ್ಷದ ಮುಡಾ ಇತಿಹಾಸದಲ್ಲಿ ಸಿದ್ದರಾಮಯ್ಯನವರ ಪ್ರಭಾವ ಇದೆ ಎಂಬ ಒಂದೇ ಒಂದು ಅಕ್ಷರವೂ ಇಲ್ಲ ಎಂದು ಮಾಜಿ ಸಭಾಪತಿ ಬಿ.ಎಲ್.ಶಂಕರ್ ಪ್ರತಿಪಾದಿಸಿದರು.

ಮೈಸೂರಿನ ವಿಶ್ವೇಶ್ವರನಗರದಲ್ಲಿರುವ ಮೈಬಿಲ್ಡ್ ಸಭಾಂಗಣದಲ್ಲಿ ಬುಧವಾರ ಜನಸ್ಪಂದನ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ 'ಕರ್ನಾಟಕದ ಅಪರೂಪದ ಜನನಾಯಕನಿಗೆ ಜನಪರತೆಯೇ ದ್ವೇಷವಾಯಿತೆ' ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಅವರನ್ನು ಅಹಿಂದ ನಾಯಕ ಎಂದೇಳಿ ಅವರ ವ್ಯಕ್ತಿತ್ವವನ್ನು ಕುಬ್ಜ ಮಾಡಲಾಗುತ್ತಿದೆ. ಆದರೆ, ಅವರು ಯಾವತ್ತೂ ಕೂಡ ಜಾತಿ ರಾಜಕಾರಣ ಮಾಡದೆ, ಸಿದ್ಧಾಂತದ ರಾಜಕಾರಣ ಮಾಡಿದ್ದೇ ಹೆಚ್ಚು ಸಿದ್ಧಾಂತದ ರಾಜಕಾರಣ ಮಾಡುವ ಸಂದರ್ಭದಲ್ಲಿ ಯಾರು ಶೋಷಿತರಿದ್ದಾರೆ, ಬಡವರಿದ್ದಾರೆ, ನಿರ್ಲಕ್ಷ್ಯಕ್ಕೆ ಒಳಗಾದವರಿದ್ದಾರೆ, ಸಮಾನತೆಯಿಂದ ವಂಚಿತರಾದವರಿದ್ದಾರೆ ಅವರ ಪರವಾಗಿ ಮಾತನಾಡಬೇಕಿರುವುದು ಮತ್ತು ಕೆಲಸ ಮಾಡಬೇಕಿರುವುದು ನಿಜವಾದ ಜನನಾಯಕ ಕೆಲಸ, ಕರ್ತವ್ಯ ಮತ್ತು ಜವಾಬ್ದಾರಿ. ಅದನ್ನೇ ಸಿದ್ದರಾಮಯ್ಯ ಮಾಡಿದ್ದಾರೆ. ಹಾಗಾಗಿ ಅವರು ಕರ್ನಾಟಕದ ಜನನಾಯಕನೇ ಹೊರತು ಅಹಿಂದ ನಾಯಕರಲ್ಲ ಎಂದರು.

ಸಿದ್ದರಾಮಯ್ಯ ಅವರು ನೀಡಿರುವ ಕಾರ್ಯಕ್ರಮಗಳು ಒಂದು ಜಾತಿಗೆ ಸೀಮಿತವಾಗದೆ ಬಡವರು, ಶೋಷಿತರು, ನಿರ್ಲಕ್ಷಕ್ಕೆ ಒಳಗಾದವರು ಹಾಗೂ ಅವಶ್ಯಕತೆ ಇದ್ದವರಿಗೆ ತಲುಪಿವೆಯೇ ಹೊರತು ಅನವಶ್ಯಕವಾಗಿದ್ದವರಿಗಲ್ಲ. ಕರ್ನಾಟಕದಲ್ಲಿ ಬಹಳಷ್ಟು ಜನ ಮುಖ್ಯಮಂತ್ರಿಗಳಾಗಿದ್ದಾರೆ. ಆದರೆ, ಸರ್ಕಾರಿ ಶಾಲೆ ಮತ್ತು ಕಚೇರಿಗಳಲ್ಲಿ ಬಸವಣ್ಣನವರ ಫೋಟೋ ಹಾಕಬೇಕು ಎಂದೇಳಲು ಹಾಗೂ ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಘೋಷಣೆ ಮಾಡಲು ಸಿದ್ದರಾಮಯ್ಯನವರೇ ಬರಬೇಕಾಯಿತು. ಬೆಂಗಳೂರಿನಲ್ಲಿರುವ ವಿಮಾನ ನಿಲ್ದಾಣಕ್ಕೆ ಕೆಂಪೇಗೌಡರ ಹೆಸರನ್ನೇ ಇಡಬೇಕು ಎಂದು ಕೇಂದ್ರ ಸರ್ಕಾರದ ಒಪ್ಪಿಗೆ ಪಡೆಯುವ ಕೆಲಸವನ್ನು ಸಿದ್ದರಾಮಯ್ಯನವರೇ ಮಾಡಬೇಕಾಯಿತು ಎಂದು ವಿವರಿಸಿದರು.

ಫಲವತ್ತಾದ ವೃಕ್ಷ: ಜನರು ಫಲವತ್ತಾದ ಮರಕ್ಕೆ ಕಲ್ಲು ಹೊಡೆಯುತ್ತಾರೆಯೇ ಹೊರತು ಬರಡು ಮರಕ್ಕಲ್ಲ. ಅದರಂತೆ ಸಿದ್ದರಾಮಯ್ಯ ರಾಜ್ಯ ಮತ್ತು ರಾಷ್ಟ್ರದಲ್ಲಿರುವ ಒಂದು ಫಲ ತುಂಬಿದ ಫಲವತ್ತಾದ ವೃಕ್ಷ. ಸಹಜವಾಗಿ ಕಲ್ಲುಗಳು ಜಾಸ್ತಿ ಬೀಳುತ್ತವೆ. ಆದರೆ, ಸಿದ್ದರಾಮಯ್ಯ ತಮ್ಮ ಮೇಲೆ ಎಸೆದ ಕಲ್ಲನ್ನು ಸ್ವೀಕರಿಸಿ, ವೃಕ್ಷದಂತೆ ಹಣ್ಣನ್ನೆ ನೀಡಿದ್ದಾರೆಯೇ ಹೊರತು ಆ ಕಲ್ಲನ್ನು ವಾಪಸ್ ಕೊಟ್ಟಿಲ್ಲವೆಂಬುದು ಅಷ್ಟೇ ಸತ್ಯ ಎಂದರು.

ದೈಹಿಕ ಆರೋಗ್ಯ ವೃದ್ಧಿ: ಬೆಂಗಳೂರಿಂದ ಮೈಸೂರಿಗೆ ಪಾದಯಾತ್ರೆ ಮಾಡುತ್ತಿರುವವರಿಂದ ಏನೂ ಸಾಧನೆಯಾಗದಿದ್ದರೂ ಅವರ ದೈಹಿಕ ಆರೋಗ್ಯವಂತೂ ಸುಧಾರಿಸಲಿದೆ. ದೆಹಲಿಯವರೆಗೆ ಪಾದಯಾತ್ರೆ ಮಾಡಿದ್ದರೆ ಇನ್ನೂ ಹೆಚ್ಚಿನ ಆರೋಗ್ಯ ಸುಧಾರಣೆ ಆಗುತ್ತಿತ್ತು. ಅವರಲ್ಲಿನ ರಾಜಕೀಯ ಮತ್ತು ಮಾನಸಿಕ ಆರೋಗ್ಯ ಸುಧಾರಣೆ ಆಗದಿದ್ದರೂ ದೈಹಿಕ ಆರೋಗ್ಯ ಸುಧಾರಣೆ ಆಗಲಿದೆ ಎಂದು ವ್ಯಂಗ್ಯವಾಡಿದರು.

ಹಗರಣವೇ ಅಲ್ಲ: ಮುಡಾದಲ್ಲಿ ನಡೆದಿರುವುದು ಹಗರಣವೇ ಅಲ್ಲ. ಅದೊಂದು ತೀರ್ಮಾನ. ಕಾನೂನುಬಾಹಿರವಾಗಿ ಹಗರಣ ನಡೆದಿದೆ ಎಂದಾದರೆ, ಅದಕ್ಕೆ ಯಾರು ಕಾರಣರೋ ಅವರ ವಿರುದ್ಧ ಕ್ರಮವಾಗಬೇಕು. ಸಿದ್ದರಾಮಯ್ಯ ಅವರ ಪತ್ನಿಗೆ ಮುಡಾದಿಂದ ನಿವೇಶನ ನೀಡಿರುವ ಕುರಿತು, ವಕೀಲನಾಗಿ ದಾಖಲೆಗಳನ್ನು ಪರಿಶೀಲನೆ ನಡೆಸಿದ್ದೇನೆ. 1935 ರಿಂದ 2024ರವರೆಗಿನ ಮುಡಾ ಇತಿಹಾಸದಲ್ಲಿನ ಯಾವುದೇ ಹಂತದಲ್ಲಿಯೂ ಸಿದ್ದರಾಮಯ್ಯ ಅವರು, ಶಾಸಕರಾಗಿ, ಸಚಿವರಾಗಿ, ಉಪ ಮುಖ್ಯಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ ಅಥವಾ ಪಕ್ಷದ ಅಧ್ಯಕ್ಷರಾಗಿ ಪ್ರಭಾವ ಬೀರಿದ್ದಾರೆ ಎನ್ನುವುದಕ್ಕೆ ಒಂದೇ ಒಂದು ಅಕ್ಷರದ ಸಾಕ್ಷಿಯೂ ಇಲ್ಲ ಎಂಬುದು ಸತ್ಯವಾದ ವಿಚಾರ ಎಂದು ಸಮರ್ಥಿಸಿದರು.

ಆತ್ಮಸಾಕ್ಷಿ ಪರಿಶುದ್ಧವಾಗಿದೆ: ಮಹಾತ್ಮ ಗಾಂಧೀಜಿ ಹೇಳುವಂತೆ ಎಲ್ಲಾ ನ್ಯಾಯಾಲಯಗಳಿಗಿಂತ ಮಿಗಿಲಾದುದು ಆತ್ಮಸಾಕ್ಷಿ ನ್ಯಾಯಾಲಯ. ಅದರಂತೆ ಸಿದ್ದರಾಮಯ್ಯರ ಆತ್ಮಸಾಕ್ಷಿ ಹಾಗೂ ನಮ್ಮಗಳ ಆತ್ಮಸಾಕ್ಷಿ ಪರಿಶುದ್ಧವಾಗಿದೆ. ಸರಳತೆ, ನೇರ ಮತ್ತು ಪ್ರಾಮಾಣಿಕತೆಯನ್ನು ಮೈಗೂಡಿಸಿಕೊಂಡಿರುವ ಸಿದ್ದರಾಮಯ್ಯ ಅವರ ಕೈಯ್ಯಲ್ಲಿ ರಾಜ್ಯ ಸುರಕ್ಷಿತವಾಗಿರುತ್ತದೆ ಎಂಬ ಕಾರಣಕ್ಕೆ ಅವರೊಂದಿಗೆ ನಿಂತಿದ್ದೇವೆಯೇ ಹೊರತು ಯಾವುದೇ ಲಾಭಕ್ಕಾಗಿ ಅಲ್ಲ ಎಂದು ನುಡಿದರು. ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್, ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಸಂವಿಧಾನ, ಕಾನೂನು, ಸಂಸದೀಯ ಪ್ರಜಾಪ್ರಭುತ್ವ ಉಳಿಸಲು ಜನಾಂದೋಲನವೇ ಹೊರತು ಸಿದ್ದರಾಮಯ್ಯರ ಉಳಿಸುವುದಕ್ಕಲ್ಲ...

2014ರ ನಂತರ ದೇಶದಲ್ಲಿ ನಡೆಯುತ್ತಿರುವ ರಾಜಕಾರಣ ಅಭಿವೃದ್ಧಿ ದೃಷ್ಟಿಯನ್ನು ಹೊಂದಿಲ್ಲ. ರಾಷ್ಟ್ರದಲ್ಲಿರುವ ರಾಜ್ಯಪಾಲರು, ರಾಜ್ಯಸಭೆ, ಲೋಕಸಭೆಯ ಸಭಾಪತಿಗಳು ನಡೆದುಕೊಳ್ಳುತ್ತಿರುವ ರೀತಿ ಚರ್ಚೆಯಾಗಬೇಕಿದೆ. ಸಂವಿಧಾನಾತ್ಮಕ ತನಿಖಾ ಸಂಸ್ಥೆಗಳು ಆಡಳಿತ ಹಿಡಿದವರ ಸ್ವಹಿತ ಸಂಸ್ಥೆಗಳಾಗುತ್ತಿವೆ. ಸಂವಿಧಾನಕ್ಕೆ ನಿಷ್ಠೆಯಿಂದ ಕೆಲಸ ಮಾಡುವ ಬದಲು ತಮ್ಮನ್ನು ನೇಮಿಸಿದವರಿಗೆ ನಿಷ್ಠೆ ತೋರಿಸುತ್ತಿರುವುದು ದುರಂತ. ಆದ್ದರಿಂದ ದೇಶದ ಸಂವಿಧಾನ, ಕಾನೂನು, ಸಂಸದೀಯ ಪ್ರಜಾಪ್ರಭುತ್ವ ಉಳಿಸಲು ಕಾಂಗ್ರೆಸ್ ಜನಾಂದೋಲನ ನಡೆಸುತ್ತಿದೆಯೇ ಹೊರತು ಸಿದ್ದರಾಮಯ್ಯರ ಉಳಿಸುವುದಕ್ಕಲ್ಲ. ಸಿದ್ದರಾಮಯ್ಯ ಅವರು ತಮ್ಮನ್ನು ತಾವು ರಕ್ಷಣೆ ಮಾಡಿಕೊಳ್ಳಲು ಸರ್ವ ಶಕ್ತರಾಗಿದ್ದಾರೆ.

- ಬಿ.ಎಲ್.ಶಂಕರ್, ಮಾಜಿ ಸಭಾಪತಿ

ಸಿದ್ದರಾಮಯ್ಯರಂತಹ ಪ್ರಾಮಾಣಿಕರನ್ನು ಕರ್ನಾಟಕ ಪಡೆದದ್ದೇ ಪುಣ್ಯ..

ಸಿದ್ದರಾಮಯ್ಯ ಅವರು ಒಂದು ದಿನದಲ್ಲಿ ಬೆಳೆದವರಲ್ಲ. ಅನೇಕ ವರ್ಷಗಳ ಕಾಲ ಪ್ರಾಮಾಣಿಕತೆ, ನೇರ ನುಡಿ, ಸತ್ಯ, ಬಡವರ ಪರ ಕಾಳಜಿ ಇರುವ ಅವರನ್ನು ಕರ್ನಾಟಕ ಪಡೆದದ್ದೇ ಪುಣ್ಯ. ಉಪ ಮುಖ್ಯಮಂತ್ರಿಯಾಗಿದ್ದ ಅವರು, ತಾವೇ ಮುಡಾ ಅಧ್ಯಕ್ಷರಾಗಿ ನೇಮಿಸಿದ ಬಸವೇಗೌಡರು ಸೈಟ್ ಕೊಡುತ್ತೇನೆ ಎಂದರೂ ಬೇಡ ಎಂದವರು. ಸಾಲ ಮಾಡಿ ವಿಜಯನಗರದಲ್ಲಿ ಮನೆ ಕಟ್ಟಿ, ಸಾಲ ತೀರಿಸಲಾಗದೆ ಅದನ್ನು ಮಾರಾಟ ಮಾಡಿದವರು. ಅಂತಹ ಪ್ರಾಮಾಣಿಕರನ್ನು ಭ್ರಷ್ಟಾಚಾರಿಗಳೆಲ್ಲಾ ಸೇರಿ ಭ್ರಷ್ಟಾಚಾರಿ ಎನ್ನುತ್ತಿದ್ದಾರೆ.

- ಎಂ.ಕೆ.ಸೋಮಶೇಖರ್, ಮಾಜಿ ಶಾಸಕ ಹಾಗೂ ಜನಸ್ಪಂದನ ಟ್ರಸ್ಟ್ ಅಧ್ಯಕ್ಷ

ರಾವಣನ ಸೇನೆಯಂತೆ ಬಿಜೆಪಿ–ಜೆಡಿಎಸ್ ಪಾದಯಾತ್ರೆ ಮಾಡುತ್ತಿವೆ..!

ರಾಮಾಯಣದಲ್ಲಿ ಬರುವ ರಾವಣನ ಸೇನೆಯಂತೆ ಬಿಜೆಪಿ–ಜೆಡಿಎಸ್ ಪಾದಯಾತ್ರೆ ಮಾಡುತ್ತಿವೆ. ಅವರ ಸೇನೆಯಲ್ಲಿ ಕುಂಭಕರ್ಣ, ರಾಕ್ಷಸರಂತಹ ಸೇನೆ ಇದೆ. ಆದರೆ ಸಿದ್ದರಾಮಯ್ಯನಂತಹ ರಾಮನ ಸೇನೆಯಲ್ಲಿ ಕಪಿ ಸೇನೆಯಂತೆ ಬಡವರು, ಹಿಂದುಳಿದವರು, ಶೋಷಿತರು, ಬುದ್ಧ, ಬಸವ, ಅಂಬೇಡ್ಕರರನ್ನು ಓದಿಕೊಂಡವರಿದ್ದಾರೆ. ರಾಜ್ಯದಲ್ಲಿ ತಲೆ ಎತ್ತಿ ನಿಲ್ಲದ ಸಮುದಾಯಗಳನ್ನು ಹುಡುಕಿ ಅಧಿಕಾರ ನೀಡಿದ ಕೀರ್ತಿ ಸಿದ್ದರಾಮಯ್ಯರದು. ಸಿದ್ದರಾಮಯ್ಯ ಪರಿಶುದ್ಧ ರಾಜಕಾರಣಿ ಎಂಬ ಹೆಸರು ಉಳಿಸಲು ಜನಾಂದೋಲನ ನಡೆಸುತ್ತಿದ್ದೇವೆಯೇ ಹೊರತಾಗಿ ಅಧಿಕಾರಕ್ಕಾಗಿ ಅಲ್ಲ. ಅಧಿಕಾರವನ್ನು ಅಪ್ಪಿಕೊಳ್ಳುವುದಿದ್ದರೆ ಉಪಮುಖ್ಯಮಂತ್ರಿ ಸ್ಥಾನವನ್ನು ಬಿಟ್ಟು ಅವರು ಜನತಾದಳದಿಂದ ಹೊರ ಬರುತ್ತಿರಲಿಲ್ಲ. ರಾಜ್ಯ ರಾಜಕಾರಣದಲ್ಲಿ ಅವರೊಬ್ಬ ಲಿವಿಂಗ್ ಲೆಜೆಂಡ್. ಹಾಗಾಗಿ ಆ.9ರ ಜನಾಂದೋಲನವು ಅವರ ರಾಜಕೀಯ ಜೀವನದ ಕಟ್ಟಕಡೆಯ ದೊಡ್ಡ ಹೋರಾಟ.

- ನಿಕೇತ್ ರಾಜ್ ಮೌರ್ಯ, ಕೆಪಿಸಿಸಿ ವಕ್ತಾರ

ಪ್ರಾಮಾಣಿಕತೆಗೆ ಒತ್ತು ನೀಡಿದವರಿಗೆ ಭ್ರಷ್ಟಾಚಾರಿ ಪಟ್ಟಕಟ್ಟುವ ಯತ್ನ...

ತಂದೆ ಮುಖ್ಯಮಂತ್ರಿ ಸ್ಥಾನಕ್ಕೇರಿದರೂ ನಮ್ಮದು ಮಧ್ಯಮ ವರ್ಗದ ಕುಟುಂಬದ ಪರಿಸ್ಥಿತಿಯಲ್ಲಿತ್ತು. ಪ್ರಾಮಾಣಿಕ ರಾಜಕಾರಣಕ್ಕೆ ಸದಾ ಒತ್ತು ನೀಡುತ್ತಿದ್ದರು. ಶೋಷಿತ, ಹಿಂದುಳಿದ ಸಮಾಜದವರು ರಾಜಕೀಯಕ್ಕೆ ಬಂದರೆ ಅವರದು ಕತ್ತಿಯ ಮೇಲಿನ ನಡಿಗೆಯಾಗಿರುತ್ತದೆ. ಕುತಂತ್ರ ರಾಜಕಾರಣ ಮಾಡುವ ಬಿಜೆಪಿ, ಬಿಜೆಪಿಯೇತರ ರಾಜ್ಯಗಳಲ್ಲಿ ಮಾಡುವ ಹಾಗೆಯೇ ರಾಜ್ಯದಲ್ಲಿ ಮುಖ್ಯಮಂತ್ರಿಗಳ ವಿರುದ್ಧ ಸುಳ್ಳು ಆರೋಪ ಮಾಡಿ 'ಭ್ರಷ್ಟಾಚಾರಿ' ಪಟ್ಟ ಕಟ್ಟಲು ಯತ್ನಿಸುತ್ತಿದ್ದಾರೆ. ನಮ್ಮ ತಾಯಿಯವರಿಗೆ ತವರು ಮನೆಯ ಉಡುಗೊರೆಯಾಗಿ ಬಂದ ಜಮೀನನ್ನು ಅಕ್ರಮವಾಗಿ ಮಾಹಿತಿ ನೀಡದೆ ಒತ್ತುವರಿ ಮಾಡಿದ ಮುಡಾ, ಅದಕ್ಕೆ ಪ್ರತಿಯಾಗಿ ಕಾನೂನಾತ್ಮಕವಾಗಿ ನಿವೇಶನ ನೀಡಿದೆ.

- ಡಾ.ಯತೀಂದ್ರ, ವಿಧಾನಪರಿಷತ್ ಸದಸ್ಯ

ಸಿಎಂ ಸಿದ್ದರಾಮಯ್ಯರ ಸಂಧಾನ ರಾಜಕಾರಣ!

ಬಿ.ಕೆ. ಹರಿಪ್ರಸಾದ್‌ರೊಂದಿಗೆ ಮಹತ್ವದ ಮಾತುಕತೆ

ಬೆಂಗಳೂರು, ಆ. 7– ಪದೇ ಪದೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಸಾರ್ವಜನಿಕವಾಗಿ ಹರಿಹಾಯುತ್ತಿದ್ದ ವಿಧಾನಪರಿಷತ್ ಸದಸ್ಯರೂ ಆದ ಕಾಂಗ್ರೆಸ್ ಹಿರಿಯ ಮುಖಂಡ ಬಿ.ಕೆ. ಹರಿಪ್ರಸಾದ್ ಅವರು ಇಂದು ಸಂಜೆ ತಾವೇ ಖುದ್ದಾಗಿ ಮುಖ್ಯಮಂತ್ರಿಗಳ ನಿವಾಸಕ್ಕೆ ಭೇಟಿ ನೀಡಿ, ಅವರೊಂದಿಗೆ ಸುಮಾರು 30 ನಿಮಿಷ ಕಾಲ ಮಹತ್ವದ ಚರ್ಚೆ ನಡೆಸಿದ್ದು, ರಾಜಕೀಯ ವಲಯದಲ್ಲಿ ಕುತೂಹಲ ಮೂಡಿಸಿದೆ.



ಸಿದ್ದರಾಮಯ್ಯ



ಹರಿಪ್ರಸಾದ್

ಮುಡಾ ಪ್ರಕರಣದಲ್ಲಿ ರಾಜ್ಯಪಾಲರು ತಮಗೆ ನೋಟಿಸ್ ನೀಡಿರುವುದರಿಂದ ವಿಚಲಿತರಾದಂತೆ ಕಂಡುಬರುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ತಮ್ಮ ಪಕ್ಷದಲ್ಲಿ ತಮ್ಮೊಂದಿಗೆ ಭಿನ್ನಾಭಿಪ್ರಾಯ ಹೊಂದಿರುವವರೊಂದಿಗೆ ರಾಜೀ ಮಾಡಿಕೊಳ್ಳಲು ಮುಂದಾಗಿದ್ದಾರೆ ಎಂದು ಹೇಳಲಾಗಿದ್ದು, ಇದರ ಭಾಗವಾಗಿ ಬಿ.ಕೆ. ಹರಿಪ್ರಸಾದ್ ಅವರನ್ನು ಕರೆಸಿ ಮಾತುಕತೆ ನಡೆಸಿದ್ದಾರೆಂದು ಹೇಳಲಾಗಿದೆ.

ಇಂದು ಸಂಜೆ ಹರಿಪ್ರಸಾದ್ ಅವರಿಗೆ ಕರೆ ಮಾಡಿದ ಸಿದ್ದರಾಮಯ್ಯ ಆಪ್ತರೂ ಆದ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಅವರು, "ಮುಖ್ಯಮಂತ್ರಿಗಳು ತಮ್ಮನ್ನು ಭೇಟಿಯಾಗಲು ಇಚ್ಛಿಸಿದ್ದಾರೆ. ದಯವಿಟ್ಟು ಅವರ ನಿವಾಸಕ್ಕೆ ಬನ್ನಿ" ಎಂದು ಹರಿಪ್ರಸಾದ್ ಕರೆದಿದ್ದಾರೆ ಎನ್ನಲಾಗಿದೆ. ಕೊನೆಗೆ ಹರಿಪ್ರಸಾದ್ ಅವರನ್ನು, ಮಾಜಿ ಸಚಿವ ದಿವಂಗತ ಆರ್.ಎಲ್. ಜಾಲಪ್ಪ ಅವರ ಅಳಿಯ ನಾಗರಾಜು ಮುಖ್ಯಮಂತ್ರಿಗಳ ನಿವಾಸಕ್ಕೆ ಕರೆತಂದಿದ್ದಾರೆ.

ಹರಿಪ್ರಸಾದ್ ಅವರೊಂದಿಗೆ ಸುಮಾರು 30 ನಿಮಿಷ ಕಾಲ ಮಾತುಕತೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ವಾಲ್ಮೀಕಿ ನಿಗಮ ಹಾಗೂ ಮುಡಾ ಪ್ರಕರಣದ ಬಗ್ಗೆ ಸುದೀರ್ಘವಾಗಿ ವಿವರಿಸಿದ್ದಾರೆ. ಪ್ರಮುಖವಾಗಿ ಮುಡಾದಿಂದ ತಮ್ಮ ಪತ್ನಿ ನಿವೇಶನ ಪಡೆದಿರುವುದು ಕಾನೂನು ಬದ್ಧವಾಗಿಯೇ ಇದೆ ಎಂದು ಕೆಲವು ದಾಖಲೆಗಳನ್ನು ತೋರಿಸಿ ಹೇಳಿದ್ದಲ್ಲದೇ, ಬಿಜೆಪಿ ಮತ್ತು ಜೆಡಿಎಸ್‌ನವರು ಸರ್ಕಾರವನ್ನು ಪತನಗೊಳಿಸಲು ಸಂಚು ರೂಪಿಸುತ್ತಿದ್ದು, ಕಾಂಗ್ರೆಸ್ಸಿಗರಾದ ನಾವೆಲ್ಲರೂ ಇಂತಹ ಸಂದರ್ಭದಲ್ಲಿ ಒಗ್ಗಟ್ಟು ಪ್ರದರ್ಶಿಸಬೇಕಾದ ಅವಶ್ಯಕತೆ ಇದೆ ಎಂದು ಹೇಳಿದ್ದಲ್ಲದೇ, ಶುಕ್ರವಾರ ಮೈಸೂರಿನಲ್ಲಿ ನಡೆಯಲಿರುವ ಸಮಾವೇಶದಲ್ಲಿ ಭಾಗವಹಿಸುವಂತೆ ಆಹ್ವಾನ ನೀಡಿದರು ಎಂದು ಮೂಲಗಳು ತಿಳಿಸಿವೆ.



ಕಿಬ್ಬೆಟ್ಟ ದರೋಡೆ ಪ್ರಕರಣ ಬಯಲು

7 ಮಂದಿ ದರೋಡೆಕೋರರ ಬಂಧನ

ನಗದು, ಕಾರುಗಳು, ಮೊಬೈಲ್‌ಗಳ ವಶ

ಮಡಿಕೇರಿ,ಆ.7– ಸೋಮವಾರಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯ ಕಿಬ್ಬೆಟ್ಟ ಗ್ರಾಮದಲ್ಲಿ ನಡೆದಿದ್ದ ದರೋಡೆ ಪ್ರಕರಣದಲ್ಲಿ ಭಾಗಿಯಾಗಿದ್ದ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಒಟ್ಟು 7 ಮಂದಿ ದರೋಡೆಕೋರರನ್ನು ಬಂಧಿಸುವಲ್ಲಿ ಸೋಮವಾರಪೇಟೆ ಪೊಲೀಸರು ಯಶಸ್ವಿಯಾಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಕುದುಮಾರು ಗ್ರಾಮದ ಕೆ.ರೋಷನ್(32), ಕನ್ಯಾನ ನಿವಾಸಿ ಸತೀಶ್ ರೈ(54), ಪಡೂರು ಗ್ರಾಮದ ಕೆ.ಗಣೇಶ(28), ವೀರಕೆಂಬ ಗ್ರಾಮದ ಕುಸುಮಕರ(39), ವಿರಾಜಪೇಟೆ ಶಿವಕೇರಿಯ ಸೂರ್ಯಪ್ರಸಾದ್ .ಬಿ.ಎ(43), ಸೋಮವಾರಪೇಟೆ ವೆಂಕಟೇಶ್ವರ ಬ್ಲಾಕ್ ನಿವಾಸಿ ವಿನೋದ್ ಕುಮಾರ್ ಹೆಚ್.ಪಿ(36) ಮತ್ತು ಕುಶಾಲನಗರ ತಾಲೂಕು ಹೆಬ್ಬಾಲೆ ಗ್ರಾಮದ ಬಿ.ಮೋಹನ್ ಕುಮಾರ್(45) ಎಂಬವರೇ ಬಂಧಿತ ದರೋಡೆಕೋರರು.

ಬಂಧಿತರಿಂದ 3.2 ಲಕ್ಷ ರೂ ನಗದು, ಕೃತ್ಯಕ್ಕೆ ಬಳಸಿದ್ದ 2 ಕಾರುಗಳು, 9 ಮೊಬೈಲ್ ಫೋನ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಪ್ರಕರಣದಲ್ಲಿ ಶಾಮೀಲಾದ ಇತರ ಆರೋಪಿಗಳಿಗಾಗಿ ಶೋಧ ಕಾರ್ಯ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಕರಣ ಹಿನ್ನೆಲೆ: ಸೋಮವಾರಪೇಟೆ ಕಿಬ್ಬೆಟ್ಟ ನಿವಾಸಿ ನೇಮರಾಜ್.ಕೆಎಂ ಸೋಮವಾರಪೇಟೆಯ ಖಾಸಗಿ ಬಸ್ ನಿಲ್ದಾಣದ ಬಳಿ ಇರುವ ಅನುಷಾ ಮಾರ್ಕೆಟಿಂಗ್ ಏಜೆನ್ಸಿ ಹೆಸರಿನ ಅಂಗಡಿ ಹೊಂದಿದ್ದರು. ಎಂದಿನಂತೆ ಜುಲೈ 29ರಂದು ರಾತ್ರಿ 8.45 ಗಂಟೆಗೆ ತನ್ನ ಪತ್ನಿಯೊಂದಿಗೆ ಸ್ಕೂಟರ್‌ನಲ್ಲಿ ಮನೆಗೆ ಹೋಗುತ್ತಿದ್ದ ಸಂದರ್ಭ ಕಿಬ್ಬೆಟ್ಟ ರಸ್ತೆಯಲ್ಲಿರುವ ಸಾಕ್ಷಿ ಕನ್ವೆನ್ಸ್ ಹಾಲ್‌ನಿಂದ ರಸ್ತೆಯ ಮುಂದಿನ ತಿರುವಿನಲ್ಲಿ ಅಪರಿಚಿತ ವ್ಯಕ್ತಿಗಳು ಕಾರು ಮತ್ತು ಬೈಕಿನಲ್ಲಿ ಬಂದು ಅಡ್ಡಗಟ್ಟಿ ಮುಖಕ್ಕೆ ಕಾರದಪುಡಿ ಎರಚಿ ನೇಮರಾಜ್ ಅವರ ಪತ್ನಿ ಮೇಲೆ ಹಲ್ಲೆ ಮಾಡಿ ರೂ. 6.18 ಲಕ್ಷ ನಗದು ಹಾಗೂ 3 ಮೊಬೈಲ್ ಫೋನ್‌ಗಳಿದ್ದ ಬ್ಯಾಗ್‌ನ್ನು ಕಿತ್ತುಕೊಂಡು ಹೋಗಿದ್ದರು. ಈ ಕುರಿತು ನೇಮರಾಜ್ ಸೋಮವಾರಪೇಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಬಿಎನ್‌ಎಸ್ ಕಲಂ 310(2) ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಆರಂಭಿಸಿದ್ದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಹಿತಿ ಮತ್ತು ಸಾಕ್ಷ್ಯಗಳನ್ನು ಕಲೆ ಹಾಕಿದ ಪೊಲೀಸರು 7 ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ. ತೀವ್ರ ವಿಚಾರಣೆಗೆ ಒಳಪಡಿಸಿದ ಸಂದರ್ಭ ರೋಷನ್, ಸತೀಶ್ ರೈ, ಗಣೇಶ, ಕುಸುಮಕರ ಎಂಬ ಆರೋಪಿಗಳು ಅಂತರ್ ಜಿಲ್ಲಾ ದರೋಡೆ ಪ್ರಕರಣ, ಈ ಹಿಂದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊಲೆ, ಕೊಲೆ ಪ್ರಯತ್ನ, ಅಪಹರಣ ಮುಂತಾದ ಹಲವು ಗಂಭೀರ ಪ್ರಕರಣಗಳಲ್ಲಿ ಭಾಗಿಯಾಗಿರುವುದು ಕಂಡು ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಸುಂದರ್‌ರಾಜ್, ಸೋಮವಾರಪೇಟೆ ಡಿವೈಎಸ್‌ಪಿ ಗಂಗಾಧರಪ್ಪ, ವೃತ್ತ ನಿರೀಕ್ಷಕ ಮುದ್ದು ಮಾದೇವ, ಠಾಣಾಧಿಕಾರಿ ಗೋಪಾಲ, ಸೋಮವಾರಪೇಟೆ ಪೊಲೀಸ್ ಠಾಣೆ ಹಾಗೂ ಸಿಬ್ಬಂದಿಗಳು, 'ಅಪರಾಧ' ಪತ್ತೆ ತಜ್ಞರ' ತಂಡ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಮುಂದುವರೆದ ಕಾರ್ಯಾಚರಣೆ, 12 ಆನೆ ಕಾಡಿಗೆ

ಉಳಿದ ಆನೆಗಳನ್ನು ಕಾಡಿಗಟ್ಟಲು ಇಂದು ಮತ್ತೆ ಕಾರ್ಯಾಚರಣೆ

ಸಿದ್ದಾಪುರ, ಆ.7– ಕಾಫಿ ತೋಟಗಳಲ್ಲಿ ಬೀಡುಬಿಟ್ಟು ಅಪಾರ ಪ್ರಮಾಣದ ಕೃಷಿ ಫಸಲು ನಾಶ ಮಾಡುವುದರ ಮೂಲಕ ಕಾರ್ಮಿಕರು ಮತ್ತು ಬೆಳೆಗಾರರಲ್ಲಿ ಆತಂಕ ಸೃಷ್ಟಿಸುತ್ತಿದ್ದ ಕಾಡಾನೆಗಳನ್ನು ಕಾಡಿಗಟ್ಟುವ ಕಾರ್ಯಾಚರಣೆ ಮುಂದುವರೆದಿದ್ದು, 12 ಕಾಡಾನೆಗಳನ್ನು ಕಾಡಿಗಟ್ಟಲಾಯಿತು. ವಿರಾಜಪೇಟೆ ತಾಲೂಕಿನ ಪುಲಿಯೇರಿ, ಇಂಜಿಲಗೆರೆ, ಗುಯ್ಯ ಗ್ರಾಮದ ಕಾಫಿ ತೋಟಗಳಲ್ಲಿ ನಡೆದ ಆನೆಗಳನ್ನು ಕಾಡಿಗಟ್ಟುವ ಕಾರ್ಯಾಚರಣೆಯಲ್ಲಿ ವಿರಾಜಪೇಟೆ ಡಿಎಫ್‌ಓ ಹಾಗೂ ಎಸಿಎಫ್ ಅವರ ಮಾರ್ಗದರ್ಶನದಲ್ಲಿ ವಲಯ ಅರಣ್ಯಾಧಿಕಾರಿ ಶಿವರಾಮ್ ನೇತೃತ್ವದಲ್ಲಿ ಹತ್ತಕ್ಕೂ ಹೆಚ್ಚು ಸಿಬ್ಬಂದಿಗಳ ತಂಡ ಭಾಗವಹಿಸಿತ್ತು.



ಕಾಫಿ ತೋಟದಲ್ಲಿದ್ದ ಕಾಡಾನೆಗಳನ್ನು ಕಾಡಿಗಟ್ಟುವ ಕಾರ್ಯಾಚರಣೆ ನಡೆಯಿತು.

ಬೆಳಿಗ್ಗೆ ಪುಲಿಯೇರಿ ಭಾಗದಲ್ಲಿ ಬೀಡು ಬಿಟ್ಟಿದ್ದ 12 ಆನೆಗಳನ್ನು ಗುಯ್ಯ ಭಾಗದ ಮಾರ್ಗವಾಗಿ ವಿರಾಜಪೇಟೆ– ಸಿದ್ದಾಪುರ ಮುಖ್ಯ ರಸ್ತೆಯಲ್ಲಿ ಸಂಚರಿಸುತ್ತಿದ್ದ ವಾಹನಗಳನ್ನು ತಡೆದು ಕಾಡಾನೆಗಳನ್ನು ಬಜಗೊಲ್ಲಿ ಭಾಗಕ್ಕೆ ಅಟ್ಟಲಾಯಿತು. ಸಂಜೆಯಾದ್ದರಿಂದ ಕಾರ್ಯಾಚರಣೆ ಸ್ಥಗಿತಗೊಳಿಸಿ ಮತ್ತೆ 2ನೇ ದಿನದ ಕಾರ್ಯಾಚರಣೆ ಮುಂದುವರಿಸುವುದಾಗಿ ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಕಾರ್ಯಾಚರಣೆ ವೇಳೆ ಗುಯ್ಯ ಗ್ರಾಮದ ಕಾಫಿ ತೋಟದಲ್ಲಿ ಸಣ್ಣ ಮರಿಯೊಂದಿಗೆ ಎರಡು ಕಾಡಾನೆಗಳು ಕಾಣಿಸಿಕೊಂಡಿತ್ತು. ಎಷ್ಟೇ ಹರಸಾಹಸಪಟ್ಟರು ಆನೆಗಳನ್ನು ಅಟ್ಟಲು ಸಾಧ್ಯವಾಗಲಿಲ್ಲ. ಒಂದು ತೋಟದಿಂದ ಮತ್ತೊಂದು ತೋಟಕ್ಕೆ ನುಸುಳಿದ ಮೂರು ಆನೆಗಳು ಸಣ್ಣ ಮರಿ ಇರುವುದರಿಂದ ಗಿಡ–ಮರಗಳ ನಡುವೆ ನಿಂತು ಬಿಟ್ಟವು.

ಎರಡನೇ ದಿನವೂ ಕಾರ್ಯಾಚರಣೆ ನಡೆಸಿ ಕಾಫಿ ತೋಟಗಳಲ್ಲಿ ಬೀಡುಬಿಟ್ಟಿರುವ ಕಾಡಾನೆಗಳನ್ನು ಕಾಡಿಗಟ್ಟಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಉಪವಲಯ ಅರಣ್ಯಾಧಿಕಾರಿ ಸಂಜಿತ್ ಸೋಮಯ್ಯ, ಅರಣ್ಯ ರಕ್ಷಕ ಅರುಣ್, ಅರ್‌ಆರ್‌ಟಿ ಹಾಗೂ ಇಟಿಎಫ್ ಸಿಬ್ಬಂದಿಗಳಾದ ಅಚ್ಚಯ್ಯ, ವಿನೋದ್, ಸಚಿನ್, ಗಣೇಶ್, ಅಖಿಲೇಶ್, ವಿನು, ಪ್ರವೀಣ್ ಸೇರಿದಂತೆ ಇತರೆ ಸಿಬ್ಬಂದಿಗಳು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಆ.10, ಸಿಎನ್‌ಸಿಯಿಂದ ಜನಜಾಗೃತಿ ಮಾನವ ಸರಪಳಿ

ಮಡಿಕೇರಿ,ಆ.7– ಕಾಫಿ ತೋಟಗಳು ಸೇರಿದಂತೆ ಕೊಡಗು ಜಿಲ್ಲೆಯ ವಿವಿಧೆಡೆ ನಡೆಯುತ್ತಿರುವ ಬೃಹತ್ ಭೂಪರಿವರ್ತನೆ ಮತ್ತು ಭೂವಿಲೇವಾರಿಯನ್ನು ಸ್ಥಗಿತಗೊಳಿಸಬೇಕೆಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ಆ.10ರಂದು ಮಾದಾಪುರದಲ್ಲಿ ಜನಜಾಗೃತಿ ಮಾನವ ಸರಪಳಿ ಕಾರ್ಯಕ್ರಮ ನಡೆಯಲಿದೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು. ನಾಚಪ್ಪ ತಿಳಿಸಿದ್ದಾರೆ.



ಎನ್.ಯು.ನಾಚಪ್ಪ

ಅಂದು ಬೆಳಗ್ಗೆ 10.30 ಗಂಟೆಗೆ ಮಾನವ ಸರಪಳಿ ನಿರ್ಮಿಸಿ ಬೃಹತ್ ಭೂಪರಿವರ್ತನೆ ಮತ್ತು ಭೂವಿಲೇವಾರಿಯನ್ನು ವಿರೋಧಿಸಿ ಹಕ್ಕೊತ್ತಾಯ ಮಂಡಿಸಲಾಗುವುದು. ಕೊಡವ ಲ್ಯಾಂಡ್‌ನ ಸಂರಕ್ಷಣೆಗಾಗಿ ಸರ್ವ ಕೊಡವರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸುವಂತೆ ಪತ್ರಿಕಾ ಹೇಳಿಕೆಯಲ್ಲಿ ಅವರು ಮನವಿ ಮಾಡಿದ್ದಾರೆ.

2018ರಲ್ಲಿ ಸೂರ್ಲಬ್ಬಿ ನಾಡ್, ಮುತ್ತುನಾಡ್, ಪೊರಮಲೆನಾಡ್, ಬದಿಗೇರಿನಾಡ್ ಮತ್ತು ಗಡಿನಾಡ್‌ನಲ್ಲಿ ಭೀಕರ ಜಲಕಂಟಕದಿಂದ ಅನಾಹುತ ಸಂಭವಿಸಿತ್ತಲ್ಲದೆ ಅನೇಕ ಮನೆಗಳು ನಾಶವಾಗಿದ್ದವು. 15 ವರ್ಷಗಳ ಹಿಂದೆ ಬಿಳಿಗೇರಿ ಭಾಗದಲ್ಲಿ ಸಂಭವಿಸಿದ ಭೂಕಂಪನದಿಂದ ಬಾಚಿನಾಡಂಡ ಅಪ್ಪಾಜಿ ಕುಟುಂಬದ ಮನೆ ಸಂಪೂರ್ಣ ನಾಶವಾಗಿತ್ತು. ಇದೀಗ ಕೇರಳದ ವಯನಾಡಿನ ದುರಂತ ನಮ್ಮ ಮುಂದೆ ಇದ್ದು, ಮತ್ತೊಮ್ಮೆ ಈ ಅನಾಹುತ ಸಂಭವಿಸದಂತೆ ಕೊಡಗು ಜಿಲ್ಲೆಗೆ ಪೂರಕವಾಗಿ ಕಾನೂನು ತಿದ್ದುಪಡಿ ತರಬೇಕು. ಕೊಡಗು ಪ್ರದೇಶ ಬೆಟ್ಟಗುಡ್ಡ ನದಿ, ತೊರೆಗಳಿಂದ ಕೂಡಿದ್ದು, ಅತ್ಯಂತ ಸೂಕ್ಷ್ಮತೆಯನ್ನು ಹೊಂದಿದೆ. ಆದ್ದರಿಂದ ಬಯಲುಸೀಮೆಯಂತೆ ಕೊಡಗಿನ ಭೌಗೋಳಿಕ ಸ್ಥಿತಿಗತಿಯನ್ನು ಪರಿಗಣಿಸಬಾರದು ಎಂದು ಮಾನವ ಸರಪಳಿ ರಚಿಸಿ ಒತ್ತಾಯಿಸುವುದಾಗಿ ತಿಳಿಸಿದ್ದಾರೆ. ಅವೈಜ್ಞಾನಿಕವಾಗಿ ನಿರ್ಮಾಣಗೊಂಡ ಹಾರಂಗಿ ಜಲಾಶಯ ಹಾಗೂ ದಕ್ಷಿಣ ಕೊಡಗಿನಲ್ಲಿ ಲಕ್ಷ್ಮಣತೀರ್ಥ ನದಿಗೆ ಕಟ್ಟಿರುವ ಕಟ್ಟೆಯಲ್ಲಿ ಹೂಳು ತುಂಬಿದ್ದು, ಇದು ಅಪಾಯದ ಮುನ್ಸೂಚನೆಯಾಗಿದೆ. ಜಲಾಶಯದ ಹೂಳು ತೆಗೆಯದೆ ಮತ್ತು ವೈಜ್ಞಾನಿಕ ರೀತಿಯಲ್ಲಿ ನಿರ್ವಹಣೆ ಮಾಡದೆ ಇರುವುದರಿಂದ ಜಲನಾಳಗಳಿಗೆ ಹಾನಿಯಾಗಿ ಭೂಗರ್ಭ ಸೀಳಿ ಅನಾಹುತಗಳಿಗೆ ದಾರಿಯಾಗುವ ಸಾಧ್ಯತೆಗಳಿದೆ ವಯನಾಡಿ ನಂತಹ ದುರಂತ ಕೊಡಗಿನಲ್ಲೂ ಸಂಭವಿಸಬಾರದು ಎಂದರೆ ಆಡಳಿತ ವ್ಯವಸ್ಥೆ ಈಗಲೇ ಎಚ್ಚೆತ್ತುಕೊಳ್ಳುವ ಅಗತ್ಯವಿದೆ ಎಂದರು.

ಸಾಲ ವಸೂಲಿಗೆ ಕಾಲಾವಕಾಶ ನೀಡಲು ಜಿಲ್ಲಾಧಿಕಾರಿ ಸೂಚನೆ

ಮಡಿಕೇರಿ, ಆ.7– ಸಾಲ ವಸೂಲಿಗೆ ಸಮಯ ನೀಡುವಂತೆ ಹಣಕಾಸು ಸಂಸ್ಥೆಗಳಿಗೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರು ಸೂಚನೆ ನೀಡಿದ್ದಾರೆ. ಕೊಡಗು ಜಿಲ್ಲೆಯಲ್ಲಿ ಬೀಳುತ್ತಿರುವ ಭಾರಿ ಮಳೆಯಿಂದ ಜಿಲ್ಲೆಯಲ್ಲಿನ ಕೂಲಿ ಕಾರ್ಮಿಕರಿಗೆ ಕೆಲಸ ಇಲ್ಲದೆ ದಿನ ನಿತ್ಯದ ಜೀವನ ನಡೆಸಲು ತೊಂದರೆ ಉಂಟಾಗಿದೆ.

ಈ ಮಧ್ಯೆ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಲವಾರು ಹಣಕಾಸು ಸಂಸ್ಥೆಗಳು, ಗಿರವಿದಾರರು ಮತ್ತು ಮೈಕ್ರೋ ಫೈನಾನ್ಸ್ ಸಂಸ್ಥೆಗಳಿಂದ ಕೃಷಿಯೇತರ ಸಾಲಗಳನ್ನು ಪಡೆಯುವ ಸಾರ್ವಜನಿಕರು ಬಹುತೇಕ ಕೂಲಿ ಕಾರ್ಮಿಕರು, ಕೃಷಿಕರು ಮತ್ತು ಶ್ರಮಿಕರಾಗಿದ್ದಾರೆ. ಮಳೆಯಿಂದ ಶ್ರಮಿಕ ವರ್ಗದ ಜನರಿಗೆ ಕೆಲಸವಿಲ್ಲದೆ ಅವರ ಆದಾಯದಲ್ಲಿ ವ್ಯತ್ಯಯ ಉಂಟಾಗಿದೆ. ಇದರಿಂದ ಕಂತುಗಳನ್ನು ಪಾವತಿಸಲು ಕಷ್ಟಸಾಧ್ಯವಾಗಿದೆ.

ಈ ಹಿನ್ನೆಲೆಯಲ್ಲಿ ಕೊಡಗು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುವ ಹಣಕಾಸು ಸಂಸ್ಥೆಗಳು, ಗಿರವಿದಾರರು ಹಾಗೂ ಮೈಕ್ರೋ ಫೈನಾನ್ಸ್ ಸಾಲ ಸೌಲಭ್ಯ ನೀಡುವ ಸಂಸ್ಥೆಗಳು ಸಾಲ ವಸೂಲಿ ಮಾಡುವ ತಿಂಗಳ ಕಂತುಗಳನ್ನು ಸೆಪ್ಟೆಂಬರ್ 15ರ ನಂತರ ವಸೂಲಿ ಮಾಡುವಂತೆ ಸಂಬಂಧಪಟ್ಟ ಸಂಸ್ಥೆಗಳಿಗೆ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದ್ದಾರೆ.

ಪರಿಶಿಷ್ಟರ ಹಣ ಲೂಟಿ ಹೊಡೆದ ಕಾಂಗ್ರೆಸ್‌ನಿಂದ ಅಂಬೇಡ್ಕರ್‌ಗೆ ಅಪಮಾನ

ಮಂಡ್ಯ,ಆ.7(ಮೋಹನ್‌ರಾಜ್)– ಪ್ರಧಾನಿ ಮೋದಿ ಅಧಿಕಾರಕ್ಕೆ ಬಂದರೆ ಸಂವಿಧಾನ ಬದಲಿಸುತ್ತಾರೆ ಎಂದು ಅಪಪ್ರಚಾರ ಮಾಡಿದ್ದ ಕಾಂಗ್ರೆಸ್ಸಿಗರು ಪರಿಶಿಷ್ಟರಿಗೆ ಮೀಸಲಿಟ್ಟಿದ್ದ ಹಣವನ್ನು ಲೂಟಿ ಹೊಡೆಯುವ ಮೂಲಕ ಡಾ.ಬಿ.ಆರ್.ಅಂಬೇಡ್ಕರ್‌ಗೆ ಅಪಮಾನ ಮಾಡಿದ್ದಾರೆ ಎಂದು ಕೇಂದ್ರ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಸಚಿವ ಹೆಚ್.ಡಿ.ಕುಮಾರಸ್ವಾಮಿ ಕಿಡಿಕಾರಿದರು.

ಮೈಸೂರು ಚಲೋದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ವಾಗ್ದಾಳಿ

ಮೈಸೂರು ಚಲೋ ಹಿನ್ನೆಲೆಯಲ್ಲಿ ಬಿಜೆಪಿ–ಜೆಡಿಎಸ್ ಬುಧವಾರ ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ಹಮ್ಮಿಕೊಂಡಿದ್ದ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ನೀವು ಕೇವಲ ಒಂದು ಸಮುದಾಯಕ್ಕೆ ಮುಖ್ಯಮಂತ್ರಿಯಾಗಿಲ್ಲ. ರಾಜ್ಯದ ಆರೂವರೆ ಕೋಟಿ ಜನರಿಗೆ ಸಿಎಂ ಆಗಿದ್ದೀರಿ. ಪರಿಶಿಷ್ಟ ವರ್ಗಕ್ಕೆ ಮೀಸಲಾಗಿದ್ದ ಹಣ ಲೂಟಿ ಆಗಿದೆ. ಕೇವಲ ಇಬ್ಬರಿಂದ ಮೂವರು ಅಧಿಕಾರಿಗಳ ಮೇಲೆ ಚಾರ್ಜ್‌ಶೀಟ್ ಮಾಡಿ, ತಪ್ಪಿತಸ್ಥರನ್ನು ಕಾಪಾಡುವ ಮೂಲಕ ಇಡೀ ಪ್ರಕರಣವನ್ನು ದಾರಿ ತಪ್ಪಿಸುವ ಹುನ್ನಾರ ನಡೆಸಿರುವ ನಿಮಗೆ ಅಧಿಕಾರದಲ್ಲಿರಲು ಯಾವುದೇ ನೈತಿಕತೆ ಇಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಿಮ್ಮ ಕಪ್ಪು ಚುಕ್ಕೆಗಳನ್ನು ಮುಚ್ಚಿ ಹಾಕಲು ಜನಾಂದೋಲನ ಕಾರ್ಯಕ್ರಮ ನಡೆಸುತ್ತಿದ್ದೀರಿ. ರಾಜ್ಯದ ಬಡವರ ಪರ ಕೆಲಸ ಮಾಡಲು ವಿಫಲರಾಗಿರುವ ನಿಮಗೆ ರಾಜ್ಯದ ಜನರ ಕಷ್ಟ ಅರ್ಥವಾಗುತ್ತಿಲ್ಲ. ಬೆಳಗಾಯಿತೆಂದರೆ ಎಲ್ಲಿ ಲೂಟಿ ಹೊಡೆಯಬೇಕೆಂಬುದೇ ನಿಮ್ಮ ಚಿಂತೆಯಾಗಿದೆ. ಹಗರಣಗಳ ಸರಮಾಲೆಯಲ್ಲಿ ಮುಳುಗಿರುವ ನಿಮ್ಮನ್ನು ಎಚ್ಚರಿಸುವ ಕೆಲಸಕ್ಕೆ ನಾವು ಮುಂದಾದರೆ, ನಮ್ಮ ಮೇಲೆಯೇ ಗೂಬೆ ಕೂರಿಸಲು ಹೊರಟಿದ್ದೀರಿ ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಮೈಸೂರು ಚಲೋ ಪಾದಯಾತ್ರೆಯಲ್ಲಿ ಪಾಲ್ಗೊಂಡಿರುವ ಅಪಾರ ಜನಸ್ತೋಮದತ್ತ ಕೈಬೀಸುತ್ತಿರುವ ಹೆಚ್.ಡಿ.ಕುಮಾರಸ್ವಾಮಿ

ನಿನ್ನೆ ಮಂಡ್ಯದಲ್ಲಿ ನಡೆದ ಜನಾಂದೋಲನಾ ಸಮಾವೇಶದಲ್ಲಿ ಡಿ.ಕೆ.ಶಿವಕುಮಾರ್ ನಾವು ಮತ್ತು ಬಿಜೆಪಿಗರು ಕೊಟ್ಟಿರುವ ಹೇಳಿಕೆಗಳ ಹಳೇ ವೀಡಿಯೋ ತುಣುಕನ್ನು ಪ್ರಸಾರ ಮಾಡಿದ್ದಾರೆ. ಅದಕ್ಕೆ ನಾನು ಅವರನ್ನು ಸಿಡಿ ಶಿವು ಎಂದು ಕರೆಯುವುದು. ಕೆಲವೊಂದು ಸಂದರ್ಭದಲ್ಲಿ ರಾಜ್ಯದ ಹಿತಕ್ಕಾಗಿ ಕೆಲವರ ವಿರುದ್ಧ ಮಾತನಾಡಿರುಬಹುದು. ಈ ಹಿಂದೆ ಜೆಡಿಎಸ್‌ನಲ್ಲೇ ಇದ್ದ ಸಿದ್ದರಾಮಯ್ಯ ಅಮು ಸೋನಿಯಾ ಗಾಂಧಿ ಹಾಗೂ ಕಾಂಗ್ರೆಸ್ ಪಕ್ಷವನ್ನು ಎಷ್ಟು ಟೀಕೆ ಮಾಡಿದ್ದಾರೆ ಅದು ನಿಮಗೆ ಗೊತ್ತೇ? ಎಂದು ಪ್ರಶ್ನಿಸಿದರು.

2018ರಲ್ಲಿ ನಾನು ಮುಖ್ಯಮಂತ್ರಿಯಾಗ ಬೇಕೆಂದು ಅರ್ಜಿ ಹಾಕಿರಲಿಲ್ಲ. ನಮ್ಮ ಮನೆ ಬಾಗಿಲಿಗೆ ಬಂದು ಅಧಿಕಾರ ಕೊಟ್ಟವರು ನೀವು. ಆದರೆ ಅಧಿಕಾರವನ್ನು ನಡೆಸಲು ಬಿಡದೇ ಹಿಂಸೆ ಕೊಟ್ಟಿರಿ. ಆದರೂ ಸಹ ನಾನು ರೈತರ ಸಾಲ ಮನ್ನಾ ಮಾಡುವ ಸಲುವಾಗಿ 14 ತಿಂಗಳು ಕಾಂಗ್ರೆಸ್ಸಿಗರ ಹಿಂಸೆ ತಡೆದುಕೊಂಡು ಅಧಿಕಾರ ನಡೆಸಿದೆ. ಆದರೆ ಜನ ನನ್ನನ್ನು ನೆನಪಿಸಿಕೊಳ್ಳುವುದು 2006ರಲ್ಲಿ ಮುಖ್ಯಮಂತ್ರಿಯಾಗಿದ್ದಾಗ ಅಧಿಕಾರ ನಡೆಸಿದ ದಿನಗಳನ್ನು. ಅಂದು ನಾನು ಮತ್ತು ಯಡಿಯೂರಪ್ಪ ನಡೆಸಿದ ಸಮ್ಮಿಶ್ರ ಸರ್ಕಾರದಿಂದ ನನಗೆ ಜನಪ್ರಿಯತೆ ಬಂತು. ಇದುವರೆಗೂ ರಾಜಕಾರಣದಲ್ಲಿ ಯಶಸ್ಸನ್ನು ಕಂಡಿದ್ದರೆ, 2006ರ ಆಡಳಿತವೇ ಕಾರಣ ಎಂದರು.

ಕಳೆದ ಲೋಕಸಭಾ ಚುನಾವಣೆ ವೇಳೆ ನಾನು ಗೆದ್ದರೆ ಐದೇ ನಿಮಿಷದಲ್ಲಿ ಮೇಕೆದಾಟು ಯೋಜನೆಗೆ ಅನುಮತಿ ಕೊಡಿಸುವೆ ಎಂದು ಹೇಳಿಕೆ ಕೊಟ್ಟಿರುವೆ ಎಂದು ಡಿ.ಕೆ.ಶಿವಕುಮಾರ್ ನನ್ನ ಬಗ್ಗೆ ಮಾತನಾಡಿ, ವೀಡಿಯೋಗಳನ್ನು ಹರಿಬಿಟ್ಟಿದ್ದಾರೆ. ಆದರೆ ನಾನು ಪೂರ್ಣ ಮಾತನಾಡಿರುವುದನ್ನು ಎಲ್ಲಿಯೂ ಪ್ರಕಟಿಸಿಲ್ಲ. ರಾಜ್ಯ ಕಾಂಗ್ರೆಸ್ ಸರ್ಕಾರ ತಮಿಳುನಾಡಿನ ಅನುಮತಿ ಕೊಡಿಸಿದರೆ ಐದೇ ನಿಮಿಷದಲ್ಲಿ ಮೋದಿ ಬಳಿ ಮೇಕೆದಾಟು ಯೋಜನೆಗೆ ಅನುಮತಿ ಕೊಡಿಸುವೆ ಎಂದು ಹೇಳಿದ್ದೆ. ಆದರೆ ನನ್ನ ಮಾತನ್ನೇ ತಿರುಚಲಾಗಿದೆ ಎಂದು ಕಿಡಿಕಾರಿದರು.

ಮೇಕೆದಾಟಿಗಾಗಿ ಪಾದಯಾತ್ರೆ ನಡೆಸಿದ ಕಾಂಗ್ರೆಸ್ಸಿಗರು ಇದೀಗ ತಮ್ಮ ಮೈತ್ರಿ ಪಕ್ಷವಾದ ಡಿಎಂಕೆಯನ್ನು ಮೇಕೆದಾಟು ಯೋಜನೆಗಾಗಿ ಒಪ್ಪಿಗೆ ಪಡೆಯಲು ವಿಫಲವಾಗಿದ್ದಾರೆ. ಅದಲ್ಲದೇ ತಮಿಳುನಾಡಿನ ಸೇಲಂ ಬಳಿ ಹೊಸ ಕೆರೆಗಳನ್ನು ಸ್ಥಾಪಿಸಿ, ತಮಿಳುನಾಡು ಕಾವೇರಿ ನೀರನ್ನು ತುಂಬಿಸಿಕೊಳ್ಳುವ ಕೆಲಸ ಮಾಡುತ್ತಿದೆ. ಆದರೆ ನಮ್ಮಲ್ಲೇ ಹರಿಯುವ ಕಾವೇರಿ ನೀರನ್ನು ಸಮರ್ಪಕವಾಗಿ ನಾಲೆಗಳಿಗೆ ಹಾಗೂ ಕೆರೆಗಳಿಗೆ ಹರಿಸಲು ನಿಮ್ಮ ಸರ್ಕಾರ ವಿಫಲವಾಗಿದೆ ಎಂದು ದೂರಿದರು.

ಅಕ್ರಮ ಆಸ್ತಿ ಬಗ್ಗೆ ಇಲ್ಲಸಲ್ಲದ್ದನ್ನು ಮಾತನಾಡುತ್ತಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ನನ್ನ ಅಣ್ಣ ಅಕ್ರಮವಾಗಿ ಆಸ್ತಿ ಮಾಡಿದ್ದಾರೆಂದು ಆರೋಪಿಸಿದ್ದಾರೆ. ಆಸ್ತಿ ಮಾಡುವುದು ತಪ್ಪಲ್ಲ. ಕ್ರಮಬದ್ಧವಾಗಿ ಆಸ್ತಿ ಸಂಪಾದಿಸಿದರೆ ಯಾರು ಸಹ ಬೇಡ ಎನ್ನುವುದಿಲ್ಲ. ನೀವು ಕ್ರಮಬದ್ಧವಾಗಿ ಆಸ್ತಿ ಮಾಡಿದ್ದೀರಾ? ದೊಡ್ಡ ಆಲಹಳ್ಳಿ ಗ್ರಾಮಕ್ಕೆ ಶ್ರೀಕೃಷ್ಣದೇವರಾಯ ಬಂದು ಕೆ.ಜಿ.ಗಟ್ಟಲೇ ಚಿನ್ನಕೊಟ್ಟು ಹೋಗಿದ್ದನಾ? ಆದ್ದರಿಂದ ನೀವು ಶ್ರೀಮಂತರಾಗಿದ್ದೀರಾ ಎಂದು ಡಿಕೆಶಿ ಕಾಲೆಳೆದರು.

ನಾನು ಕೇಂದ್ರ ಸಚಿವನಾಗಿ ಕೇವಲ ಎರಡು ತಿಂಗಳಾಗಿದ್ದು, ದೆಹಲಿಯಲ್ಲಿ ಎರಡು ಇಲಾಖೆಗಳ ಹಲವು ಕೆಲಸಗಳನ್ನು ನಿಭಾಯಿಸುತ್ತಿದ್ದೇನೆ. ಶೀಘ್ರದಲ್ಲೇ ಸತತ ಒಂದು ವಾರ ಮಂಡ್ಯದಲ್ಲೇ ವಾಸ್ತವ್ಯ ಹೂಡಿ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಜನರ ಸಮಸ್ಯೆಗಳನ್ನು ಆಲಿಸಿ, ಅವರಿಗೆ ಪರಿಹಾರ ಒದಗಿಸುವ ಕೆಲಸವನ್ನು ಮಾಡುತ್ತೇನೆ ಎಂದು ಭರವಸೆ ನೀಡಿದರು.

ತಾಲೂಕಿನ ತೂಬಿನಕೆರೆ ತಲುಪಿದ ಮೈಸೂರು ಚಲೋ ಪಾದಯಾತ್ರೆ

ಮಂಡ್ಯ,ಆ.7(ಮೋಹನ್‌ರಾಜ್)– ಮೈಸೂರು ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ಮತ್ತು ಜೆಡಿಎಸ್ ನಡೆಸುತ್ತಿರುವ ಮೈಸೂರು ಚಲೋ ಐದನೇ ದಿನಕ್ಕೆ ಕಾಲಿಟ್ಟಿದ್ದು, ಬುಧವಾರ ಮಂಡ್ಯ ನಗರದಲ್ಲಿ ಯಶಸ್ವಿಯಾಗಿ ಸಾಗಿತು.

ನಗರದ ಹೊರವಲಯದ ಶಶಿಕಿರಣ ಕನ್ವೆನ್ಷನ್ ಹಾಲ್‌ನಿಂದ ಬೆಳಿಗ್ಗೆ 9 ಗಂಟೆಗೆ ಆರಂಭವಾದ ಪಾದಯಾತ್ರೆ ಬೆಂಗಳೂರು–ಮೈಸೂರು ಹೆದ್ದಾರಿ ಮೂಲಕ ಮಂಡ್ಯ ನಗರ ಪ್ರವೇಶಿಸಿತು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ಸಾಗಿದ ಪಾದಯಾತ್ರೆಗೆ ನಗರದ ಫ್ಯಾಕ್ಟರಿ ವೃತ್ತದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಸೇರ್ಪಡೆಯಾದರು.

ಅಲ್ಲಿಂದ ರ್‍ಯಾಲಿ ಮೂಲಕ ಎಸ್.ಡಿ.ಜಯರಾಂ ವೃತ್ತ, ಮಹಾವೀರ ವೃತ್ತದ ಮಾರ್ಗವಾಗಿ ಜಯಚಾಮರಾಜೇಂದ್ರ ಒಡೆಯರ್ ವೃತ್ತದ ಬಳಿಗೆ ಯಾತ್ರೆ ಆಗಮಿಸಿತು. ದಾರಿಯುದ್ದಕ್ಕೂ ಬೃಹತ್ ಹಾರಗಳು, ಸಾಂಸ್ಕೃತಿಕ ಕಲಾತಂಡಗಳೊಂದಿಗೆ ನಾಯಕರನ್ನು ಸ್ಥಳೀಯ ಜೆಡಿಎಸ್ ಮತ್ತು ಬಿಜೆಪಿ ಕಾರ್ಯಕರ್ತರು ಸ್ವಾಗತಿಸಿದರು. ಪಾದಯಾತ್ರೆಯು ಮಂಡ್ಯ ತಾಲೂಕು ತೂಬಿನಕೆರೆ ತಲುಪಿ ಅಲ್ಲೆ ವಾಸ್ತವ್ಯ ಹೂಡಿತು. ಇದಕ್ಕೂ ಮುನ್ನ ಜೆ.ಸಿ. ವೃತ್ತದಲ್ಲಿ ನಡೆದ ಬೃಹತ್ ಸಾರ್ವಜನಿಕ ಸಭೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಪಕ್ಷ ನಾಯಕ ಆರ್.ಅಶೋಕ್, ಕೇಂದ್ರ ಸಚಿವ ಕುಮಾರಸ್ವಾಮಿ ಸೇರಿದಂತೆ ಘಟಾನುಘಟಿ ನಾಯಕರುಗಳು ಪಾಲ್ಗೊಂಡು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

ಗೌರಮ್ಮ ನಿಧನ

ಕೆ.ಆರ್.ಪೇಟೆ,ಆ.7– ತಾಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ, ಮೂಡನಹಳ್ಳಿ ಗ್ರಾಮದ ದಿ. ರಾಮೇಗೌಡರ ಧರ್ಮಪತ್ನಿ ಶ್ರೀಮತಿ ಗೌರಮ್ಮ (85) ನಿಧನ ಹೊಂದಿದ್ದಾರೆ.



ಗೌರಮ್ಮನವರು ಪುತ್ರ ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟಿನ ನಿವೃತ್ತ ನೌಕರರು ಹಾಗೂ ಕೆ.ಆರ್.ಪೇಟೆ ಪಟ್ಟಣದ ಶ್ರೀ ಕಾಳಿದಾಸ ಪತ್ತಿನ ಸಹಕಾರ ಸಂಘದ ಸಂಸ್ಥಾಪಕ ಅಧ್ಯಕ್ಷರಾದ ಎಂ.ಆರ್. ರಂಗಸ್ವಾಮಿ ಸೇರಿದಂತೆ ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು, ಸೊಸೆಯಂದಿರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಸ್ವಗ್ರಾಮ ಮೂಡನಹಳ್ಳಿ ಗ್ರಾಮದಲ್ಲಿ ನಡೆಯಿತು.

ಆಲಹಳ್ಳಿ ಮಠದ ಶ್ರೀ ಶಿವಕುಮಾರ ಸ್ವಾಮೀಜಿ ಲಿಂಗೈಕ್ಯ

ಇಂದು ಸುತ್ತೂರು ಶ್ರೀಗಳ ನೇತೃತ್ವದಲ್ಲಿ ಅಂತಿಮ ವಿಧಿ, ವಿಧಾನ

ಕೊಳ್ಳೇಗಾಲ: ತಾಲೂಕಿನ ಆಲಹಳ್ಳಿ ಪಟ್ಟದ ಮಠಾಧ್ಯಕ್ಷರಾಗಿದ್ದ ಶ್ರೀ ಶಿವಕುಮಾರ ಸ್ವಾಮೀಜಿಯವರು ಬುಧವಾರ ಬೆಳಗಿನ ಜಾವ ಲಿಂಗೈಕ್ಯರಾಗಿದ್ದಾರೆ.



ಶ್ರೀಗಳು 3 ದಶಕಗಳಿಂದಲೂ ಭಕ್ತಾದಿಗಳಿಗೆ ಮಾರ್ಗದರ್ಶನ ಮಾಡುವ ಮೂಲಕ ದಾಸೋಹ ಉಣಬಡಿಸುವ ಔದಾರ್ಯ ಗುಣ ಹೊಂದಿದ್ದರು, ಎಲ್ಲಾ ವರ್ಗದ ಸಮಾಜದ ಮುಖಂಡರನ್ನು ಪ್ರೀತಿಸುತ್ತಾ, ಉತ್ತಮ ಬಾಂಧವ್ಯ ಹೊಂದುವ ಮೂಲಕ ಶ್ರೀಗಳು ಖ್ಯಾತರಾಗಿದ್ದರು. 1994ರಲ್ಲಿ ಅವರು ಅಂದಿನ ಮಠಾಧಿಪತಿಗಳಾಗಿದ್ದ ಬಸಪ್ಪ ಸ್ವಾಮೀಜಿಗಳವರಿಂದ ಮಠದ ಹೊಣೆಗಾರಿಕೆ ಸ್ವೀಕರಿಸಿ 3 ದಶಕಗಳ ಕಾಲ ತಮ್ಮ ಹೊಣೆಗಾರಿಕೆ ನಿಭಾಯಿಸುವ ಜೊತೆ ಸಿದ್ದಗಂಗಾ ಶ್ರೀಗಳು, ಸುತ್ತೂರು ಶ್ರೀಗಳಿಂದಲೂ ಮೆಚ್ಚುಗೆಗೆ ಪಾತ್ರರಾಗಿದ್ದರು.

ಸಿದ್ದಗಂಗಾ ಶ್ರೀಗಳಿಂದ ನಮನ: ಶಿವಕುಮಾರ ಸ್ವಾಮೀಜಿಗಳವರ ಅಂತ್ಯಕ್ರಿಯೆ ಗುರುವಾರ ಜರುಗಲಿದ್ದು, ಅವರ ನಿಧನದ ವಾರ್ತೆ ಕೇಳುತ್ತಿದ್ದಂತೆ ಸಿದ್ದಗಂಗಾ ಮಠದ ಸಿದ್ದಲಿಂಗ ಮಹಾಸ್ವಾಮೀಜಿಗಳು ಸೇರಿದಂತೆ ಜಿಲ್ಲೆಯ ಅನೇಕ ಮಂದಿ ಶ್ರೀಗಳು ಮೃತರಿಗೆ ನಮನ ಸಲ್ಲಿಸಿದರು.

ಗುರುವಾರ ಸುತ್ತೂರು ಶ್ರೀಗಳ ನೇತೃತ್ವದಲ್ಲಿ ಅಂತ್ಯಕ್ರಿಯೆ ನಡೆಯಲಿದೆ. ಕೊಳ್ಳೇಗಾಲ ಶಾಸಕ ಎ.ಆರ್. ಕೃಷ್ಣಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ಬ್ಯಂಗೇಶ್ ಕಟ್ಟೆ, ಸಿದ್ದಲಿಂಗಸ್ವಾಮಿ, ಮಹದೇವಪ್ರಸಾದ್ ಸೇರಿದಂತೆ ಅನೇಕ ಭಕ್ತಾದಿಗಳು ಶ್ರೀಗಳ ದರ್ಶನದಲ್ಲಿ ಪಾಲ್ಗೊಂಡರು.

ಸಾರಿಗೆ ಬಸ್ ಡಿಕ್ಕಿ ಹೊಡೆದು ಗರ್ಭಿಣಿ ಸಾವು

ರೊಚ್ಚಿಗೆದ್ದ ಗ್ರಾಮಸ್ಥರಿಂದ ರಸ್ತೆ ತಡೆ

ಕೊಳ್ಳೇಗಾಲ, ಆ.7– ತಾಲೂಕಿನ ಕಾಮಗೆರೆ ಗ್ರಾಮದ ಹೋಲಿಕ್ರಾಸ್ ಆಸ್ಪತ್ರೆ ಮುಂಭಾಗ ಬಸ್ ನಿಲ್ದಾಣದಲ್ಲಿ ಆಸ್ಪತ್ರೆಯಿಂದ ರಸ್ತೆ ದಾಟುತ್ತಿದ್ದ ಅಜ್ಜೀಪುರ ಗ್ರಾಮದ 22 ವರ್ಷದ ಗರ್ಭಿಣಿ ನಮಿತಾ ಅತಿ ವೇಗದಿಂದ ಬರುತ್ತಿದ್ದ ಸಾರಿಗೆ ಬಸ್‌ಗೆ ಸಿಲುಕಿ ಮೃತಪಟ್ಟಿದ್ದಾರೆ.



ಈ ಘಟನೆಯಿಂದ ರೊಚ್ಚಿಗೆದ್ದ ಸ್ಥಳೀಯ ಗ್ರಾಮಸ್ಥರು ಹಾಗೂ ಮೃತ ಗರ್ಭಿಣಿ ಸಂಬಂಧಿಕರು ರಸ್ತೆ ತಡೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು. ಕಾಮಗೆರೆ ಗ್ರಾಮದಲ್ಲಿ ಕಳೆದ ನಾಲ್ಕೈದು ತಿಂಗಳಿಂದ ಅಪಘಾತದಿಂದ ಸಾವನ್ನಪ್ಪಿರುವುದು ಇದು ಮೂರನೇ ಘಟನೆಯಾಗಿದ್ದು ಬ್ಯಾರಿಕೇಡ್ ಅಳವಡಿಸುವಂತೆ ನಾಲ್ಕು ತಿಂಗಳ ಹಿಂದೆ ಪೊಲೀಸ್ ಇಲಾಖೆಗೆ ಹಾಗೂ ಡಿಪೋ ವ್ಯವಸ್ಥಾಪಕರಿಗೆ ಮನವಿ ಮಾಡಿದ್ದೆವು. ಆದರೂ ಕೂಡ ಎಚ್ಚೆತ್ತುಕೊಂಡಿಲ್ಲ. ಇಂತಹ ಅಪಘಾತಗಳು ಪುನಃ ಸಂಭವಿಸದೆ ಇರಲಿ ಎಂಬ ಉದ್ದೇಶದಿಂದ ಈ ರಸ್ತೆಯಲ್ಲಿ ರಸ್ತೆ ಡುಬ್ಬ ಅಥವಾ ಬ್ಯಾರಿಕೇಡ್ ಹಾಕುವ ಮೂಲಕ ವಾಹನಗಳಿಗೆ ವೇಗ ನಿಯಂತ್ರಣ ಮಾಡಬೇಕು ಎಂದು ಒತ್ತಾಯಿಸಿ ಸ್ಥಳೀಯ ಗ್ರಾಮಸ್ಥರು ರಸ್ತೆ ತಡೆದು ಪ್ರತಿಭಟನೆ ನಡೆಸಿದರು. ಇದರಿಂದ ಕೆಲಕಾಲ ಟ್ರಾಫಿಕ್ ಜಾಮ್ ಉಂಟಾಯಿತು.

ಕೊಳ್ಳೇಗಾಲ ಡಿಪೋ ವ್ಯವಸ್ಥಾಪಕ ಶಂಕರ್ ಘಟನ ಸ್ಥಳಕ್ಕೆ ಆಗಮಿಸಿ ಗರ್ಭಿಣಿ ಸಾವಿಗೆ ಸಂತಾಪ ಸೂಚಿಸಿ 25 ಸಾವಿರ ರೂ. ಅಂತ್ಯಸಂಸ್ಕಾರದ ಖರ್ಚು ನೀಡುವ ಆದೇಶವಿದೆ. ಚಾರ್ಜ್‌ಶೀಟ್ ಆದ ಬಳಿಕ 25 ಸಾವಿರ ನೀಡಲಾಗುವುದು. ಆ ನಂತರ ಕೋರ್ಟ್ ಮೂಲಕ ಕುಟುಂಬಸ್ಥರಿಗೆ ಪರಿಹಾರದ ಹಣ ಒದಗಿಸಿಕೊಡಲಾಗುವುದು ಎಂದು ಭರವಸೆ ನೀಡಿದರು. ಕೊಳ್ಳೇಗಾಲ ಮತ್ತು ಹನೂರು ತಾಲೂಕಿನ ಪೊಲೀಸರು ಸ್ಥಳಕ್ಕೆ ಆಗಮಿಸಿ ರಸ್ತೆ ತಡೆ ಮಾಡುತ್ತಿದ್ದವರ ಮನವೊಲಿಸಿದರು.

ಎಸ್‌ಸಿಎಸ್‌ಪಿ, ಟಿಎಸ್‌ಪಿ ಹಣ ಅನ್ಯ ಉದ್ದೇಶಕ್ಕೆ ಬಳಕೆ ಖಂಡಿಸಿ ಬಿಎಸ್ಪಿ ಪ್ರತಿಭಟನೆ

ಚಾಮರಾಜನಗರ, ಆ.7–ಎಸ್‌ಸಿಎಸ್‌ಪಿ, ಟಿಎಸ್‌ಪಿ ಮೀಸಲು ಅನುದಾನದ ಹಣವನ್ನು ಅನ್ಯ ಉದ್ದೇಶಗಳಿಗೆ ಬಳಸುವುದನ್ನು ಖಂಡಿಸಿ ಬಹುಜನ ಸಮಾಜ ಪಕ್ಷದ ಚಂದಕವಾಡಿ ಹೋಬಳಿ ಘಟಕದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ತಾಲೂಕಿನ ಚಂದಕವಾಡಿ ಹೋಬಳಿ ಕೇಂದ್ರದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಭವನದ ಮುಂಭಾಗದಲ್ಲಿ ಪಕ್ಷದ ಜಿಲ್ಲಾಧ್ಯಕ್ಷ ಎನ್.ನಾಗಯ್ಯ, ತಾಲೂಕು ಅಧ್ಯಕ್ಷ ಚಂದ್ರಕಾಂತ, ಹೋಬಳಿ ಘಟಕದ ಅಧ್ಯಕ್ಷ ಸಂತೋಷ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ಅಲ್ಲಿಂದ ಮೆರವಣಿಗೆ ಹೊರಟು ಗ್ರಾಮದ ಬಿ.ಆರ್.ಹಿಲ್ಸ್ ರಸ್ತೆಯ ಮೂಲಕ ನಾಡ ಕಚೇರಿಗೆ ತೆರಳಿ ಉಪ ತಹಸೀಲ್ದಾರ್ ಮುಖಾಂತರ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಪ್ರತಿಭಟನೆ ನೇತೃತ್ವ ವಹಿಸಿದ್ದ ಪಕ್ಷದ ಜಿಲ್ಲಾಧ್ಯಕ್ಷ ಎನ್.ನಾಗಯ್ಯ ಮಾತನಾಡಿ, ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಎಸ್ಸಿ,ಎಸ್ಟಿಗಳ ಅಭಿವೃದ್ಧಿಗೆಂದು ಜಾರಿಗೆ ತಂದ ಎಸ್ಸಿಎಸ್ಪಿ ಮತ್ತು ಟಿಎಸ್ಪಿಯ ಹಣವನ್ನು 2023–24 ಮತ್ತು 2024–25ನೇ ಸಾಲಿನ 2 ವರ್ಷಗಳಲ್ಲಿ ರೂ. 25 ಸಾವಿರದ 398 ಕೋಟಿಗಳನ್ನು ಗ್ಯಾರಂಟಿ ಯೋಜನೆಗಳಿಗೆ ದುರ್ಬಳಕೆ ಮಾಡಿಕೊಳ್ಳುವ ಮೂಲಕ ಎಸ್ಸಿ/ಎಸ್ಟಿಗಳ ಕುತ್ತಿಗೆ ಕುಯ್ಯುವ ಕೆಲಸ ಮಾಡಿದೆ ಎಂದು ಆರೋಪಿಸಿದರು.



ಎಸ್‌ಸಿಎಸ್‌ಪಿ, ಟಿಎಸ್‌ಪಿ ಮೀಸಲು ಅನುದಾನದ ಹಣವನ್ನು ಅನ್ಯ ಉದ್ದೇಶಗಳಿಗೆ ಬಳಸುವುದನ್ನು ಖಂಡಿಸಿ ಬಹುಜನ ಸಮಾಜ ಪಕ್ಷದ ಚಂದಕವಾಡಿ ಹೋಬಳಿ ಘಟಕದಿಂದ ಪ್ರತಿಭಟನೆ ನಡೆಸಲಾಯಿತು.

ಇದೂವರೆಗೆ ಈ ರೀತಿಯಾಗಿ 70 ಸಾವಿರ ಕೋಟಿ ರೂಪಾಯಿಗಳ ದುರ್ಬಳಕೆಯಾಗಿದೆ ಎನ್ನಲಾಗಿದೆ. ಎಸ್ಸಿ,ಎಸ್ಟಿ ಮತ್ತು ಟಿಎಸ್ಪಿ ಜಾರಿಯಾದಾಗಿನಿಂದ ಇದೂವರೆಗೆ 2 ಲಕ್ಷದ 56 ಸಾವಿರ ಕೋಟಿಗಳನ್ನು ಈ ಯೋಜನೆಗೆ ಒದಗಿಸಲಾಗಿದೆ ಇಷ್ಟು ಹಣದಿಂದ ಕರ್ನಾಟಕದ ಎಸ್ಸಿ, ಎಸ್ಟಿ ವಿದ್ಯಾರ್ಥಿಗಳಿಗೆ ಪ್ರಾಥಮಿಕ ಶಿಕ್ಷಣದಿಂದ ಬಿಇ, ಎಂಬಿಬಿಎಸ್, ಪಿಹೆಚ್‌ಡಿ ವರೆಗೆ ಉಚಿತ ಶಿಕ್ಷಣ ನೀಡಬಹುದಿತ್ತು. ಲಕ್ಷಾಂತರ ಎಸ್ಸಿ/ಎಸ್‌ಟಿ ನಿರುದ್ಯೋಗಿಗಳಿಗೆ ಸ್ವಯಂ ಉದ್ಯೋಗ ಒದಗಿಸಬಹುದಿತ್ತು ಎಂದರು.

ಮನೆ ಇಲ್ಲದ ಪ್ರತಿಯೊಂದು ಎಸ್ಸಿ/ಎಸ್ಟಿ ಕುಟುಂಬಗಳಿಗೆ ಸ್ವಂತ ಮನೆ ಕಟ್ಟಿಕೊಡಬಹುದಿತ್ತು. ಭೂರಹಿತ ಎಸ್ಸಿ/ಎಸ್ಟಿ ಕೃಷಿಕಾರ್ಮಿಕರಿಗೆ ತಲಾ 5 ಎಕರೆ ಜಮೀನು ಖರೀದಿಸಿ ಕೊಡಬಹುದಿತ್ತು. ಪ್ರತಿಯೊಬ್ಬ ಎಸ್ಸಿ/ಎಸ್ಟಿ ರೋಗಿಗಳಿಗೂ ಉಚಿತ ಚಿಕಿತ್ಸೆ ಕೊಡಿಸಬಹುದಿತ್ತು. ಆದರೆ ಈ ಯೋಜನೆಯ ಶೇ.10 ರಷ್ಟೂ ಕೂಡ ಎಸ್ಸಿ/ಎಸ್ಟಿಗಳಿಗೆ ನೇರವಾಗಿ ತಲುಪುತ್ತಿಲ್ಲ. ಬದಲಾಗಿ ಅಧಿಕಾರಿಗಳು ಮತ್ತು ಮಂತ್ರಿ, ಶಾಸಕರು ನುಂಗಿ ನೀರು ಕುಡಿಯುತ್ತಿದ್ದಾರೆ. ಉದಾಹರಣೆಗೆ ಎಸ್ಟಿಗಳ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ 187 ಕೋಟಿ ರೂಪಾಯಿಗಳ ಹಗರಣವೇ ಇದಕ್ಕೇ ಸಾಕ್ಷಿಯಾಗಿದೆ ಎಂದರು.

2023ರ ವಿಧಾನಸಭೆ ಮತ್ತು 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಸಂವಿಧಾನ ಬದಲಾಯಿಸುತ್ತದೆ ಮತ್ತು ಮೀಸಲಾತಿಯನ್ನು ರದ್ದು ಮಾಡುತ್ತದೆ ಎಂದು ಭಾವನಾತ್ಮಕವಾಗಿ ಎಸ್ಸಿ/ಎಸ್ಟಿ/ಓಬಿಸಿ/ ಧಾರ್ಮಿಕ ಅಲ್ಪಸಂಖ್ಯಾತರನ್ನು ಕೆರಳಿಸಿ, ಈ ವರ್ಗದ ಶೇ. 90 ರಷ್ಟು ಓಟುಗಳನ್ನು ಪಡೆದುಕೊಂಡು ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಎಸ್ಸಿ, ಎಸ್‌ಟಿಗಳನ್ನು ಮುಖ್ಯಮಂತ್ರಿ ಮಾಡುವುದಿರಲಿ, ಉಪಮುಖ್ಯಮಂತ್ರಿಯನ್ನು ಮಾಡಲಿಲ್ಲ. ಸಂವಿಧಾನ ಉಳಿಸುತ್ತೇವೆಂದು ಕಾಂಗ್ರೆಸ್ ನಮಗೆ ಸಂವಿಧಾನಾತ್ಮಕವಾಗಿ ನೀಡಿರುವ ಎಲ್ಲಾ ಹಕ್ಕುಗಳನ್ನು ಮತ್ತು ಯೋಜನೆಗಳನ್ನು ಪ್ರತ್ಯಕ್ಷ, ಪರೋಕ್ಷವಾಗಿ ರದ್ದುಮಾಡುತ್ತಿದೆ ಎಂದು ಆರೋಪಿಸಿದರು

ಪ್ರತಿಭಟನೆಯಲ್ಲಿ ಬಿಎಸ್‌ಪಿ ಜಿಲ್ಲಾ ಸಂಯೋಜಕ ಅಮಚವಾಡಿ ಪ್ರಕಾಶ್, ರಾಜಶೇಖರ, ಉಪಾಧ್ಯಕ್ಷ ಬ್ಯಾಡಮೂಡ್ಲು ಬಸವಣ್ಣ, ರಾಜೇಂದ್ರ, ಕಾರ್ಯದರ್ಶಿ ಎಸ್.ಪಿ.ಮಹೇಶ್, ತಾಲೂಕು ಅಧ್ಯಕ್ಷ ಚಂದ್ರಕಾಂತ್, ಪ್ರಧಾನ ಕಾರ್ಯದರ್ಶಿ ಸಿದ್ದರಾಜು, ಕಾರ್ಯದರ್ಶಿ ಶಂಕರ್, ಖಜಾಂಚಿ ಕೃಷ್ಣಮೂರ್ತಿ, ಹೋಬಳಿ ಘಟಕದ ಅಧ್ಯಕ್ಷ ಸಂತೋಷ, ಬಿವಿಎಫ್ ರವಿಮೌರ್ಯ, ಗ್ರಾ.ಪಂ ಸದಸ್ಯ ಬಾಲರಾಜು, ಟೌನ್ ಅಧ್ಯಕ್ಷ ಗಾಳೀಪುರ ರಂಗಸ್ವಾಮಿ ಇತರರು ಭಾಗವಹಿಸಿದ್ದರು

ಅಕ್ರಮ ವಿದ್ಯುತ್ ತಂತಿಗೆ ಸಿಲುಕಿ ಕಡವೆ ಸಾವು

ಯಳಂದೂರು, ಆ.7– ತಾಲೂಕಿನ ಬಿಆರ್‌ಟಿ ಅರಣ್ಯ ವ್ಯಾಪ್ತಿಯ ಪುರಾಣಿ ಶಾಖೆಯ ಬೇತಾಳ ಕಟ್ಟೆ ಗಸ್ತಿನ ವ್ಯಾಪ್ತಿಯ ಕಾಡಂಚಿನ ಪ್ರದೇಶ ಪಕ್ಕದಲ್ಲಿ ಬರುವ ಮದ್ದೂರು ಗ್ರಾಮದ ಎ.ಮೋಹನ ಬಾಬು ಎಂಬುವರ ಒಡೆತನದ ಜಮೀನಿಗೆ ವಿದ್ಯುತ್ ಕಂಬದಿಂದ ಅಕ್ರಮವಾಗಿ ವಿದ್ಯುತ್ ಸಂಪರ್ಕದ ತಂತಿಗೆ ಸಿಲುಕಿ ಹೆಣ್ಣು ಕಡವೆ ಬುಧವಾರ ರಾತ್ರಿ ಸಾವನ್ನಪ್ಪಿದೆ. ಈ ಬಗ್ಗೆ ಬಿಆರ್‌ಟಿಯ ನಿರ್ದೇಶಕಿ ದೀಪಾ.ಜೆ ಕಂಟ್ರಾಕ್ಟರ್ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ನಡೆಸಿ ವನ್ಯಜೀವಿ ಸಂರಕ್ಷಣಾ ಕಾಯ್ದೆ ಉಲ್ಲಂಘನೆ ಮಾಡಿರುವ ಹಿನ್ನೆಲೆಯಲ್ಲಿ ಬೆಂಗಳೂರು ಮೂಲದ ನಿವಾಸಿ ಎ. ಮೋಹನ್ ಬಾಬು(75), ತೆಲಂಗಾಣ ರಾಜ್ಯದ ನವಿಪೆಟ್ ಅಬಂಗ ಪಟ್ಟಣಂ ನಿಜಮಬಾದ್ ನಿವಾಸಿಯಾದ ಕೆ. ಪವನ್(45) ಎಂಬುವರ ವಿರುದ್ಧ ಪ್ರಕರಣ ದಾಖಲಿಸಿ ಕೊಳ್ಳಲಾಗಿದೆ. ಪವನ್ ಎಂಬುವರನ್ನು ಬಂಧಿಸಿದ್ದು, ಎ.ಮೋಹನ್ ಬಾಬು ಎಂಬ ವ್ಯಕ್ತಿ ನಾಪತ್ತೆಯಾಗಿದ್ದು ಈ ಬಗ್ಗೆ ಕಾರ್ಯಾಚರಣೆ ಮಾಡಲಾಗುತ್ತಿದೆ ಎಂದು ಬಿಆರ್‌ಟಿ ಯಳಂದೂರು ವಲಯದ ಆರ್‌ಎಫ್‌ಓ ನಾಗೇಂದ್ರ ನಾಯಕ್ ಮಾಹಿತಿ ನೀಡಿದ್ದಾರೆ. ಈ ಕಾರ್ಯಾಚರಣೆಯಲ್ಲಿ ಡಿಆರ್‌ಎಫ್‌ಓ ಡಿ.ಕೆ.ಮಧು, ಅರಣ್ಯ ರಕ್ಷಕರಾದ ಶ್ರೀಕಂಠ, ಮಾದೇಗೌಡ್, ಪಶಿವಮೂರ್ತಿ, ಶಿವು ಸೇರಿದಂತೆ ಇತರರು ಹಾಜರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

SITE FOR SALE
Vijayanagar
40x60 North Facing
Site 4th Stage,
3rd Stage
(Brokers Excuse)
6364345151

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡುಗಳು– 10 ಜನ
ಉಚಿತ ವಸತಿ/ಊಟ/ ESI/PF ಹಾಗೂ ಸಮಯಕ್ಕೆ ಸರಿಯಾಗಿ ಸಂಬಳ
9686422400
9242406261

FOR RENT
Room with attach for Rent No.26, 9th Main, Vinayakanagar
Behind Canara Bank
Jayalaxmipuram, Mysore
9845291043

ಸೈಟು ಮಾರಾಟಕ್ಕಿದೆ
30x40 ಸೈಟು ವಿಶ್ವಪ್ರಜ್ಞ ಲೇಔಟ್‌ಗೆ ಹೊಂದಿಕೊಂಡಿರುವ ಬಡಾವಣೆಯಲ್ಲಿ ಲಭ್ಯವಿದೆ. ಹಳೆಕೆಸರೆ, ಮೈಸೂರು
Just 2 Km from Manipal Hospital
8073300783
8792235466

ಬೇಕಾಗಿದ್ದಾರೆ
ಫ್ಯಾಕ್ಟರಿ ಕೆಲಸಕ್ಕೆ 18 ರಿಂದ 25 ವರ್ಷ ಹುಡುಗರು ಬೇಕಾಗಿದ್ದಾರೆ. ಹೆಚ್.ಡಿ.ಕೋಟೆ ರಸ್ತೆ, ಮೈಸೂರು ಜೆಮಿನಿ ರೋಲಿಂಗ್ ಷಟರ್ಸ್ ಮೆಟೀರಿಯಲ್
ಸಂಬಳ: 13,000/–
7829665715

BUILDING PLANS

Corporation/MUDA LICENCE (online / offline) 2D/3Ds
9342384641

ಹೊಸ ಮನೆ ಭೋಗ್ಯ / ಬಾಡಿಗೆಗೆ
2BHK, NF, G.Floor
ಸೋಲಾರ್, ಶ್ರೀ ವಿಠಲಧಾಮ ದೇವಸ್ಥಾನದ ಹತ್ತಿರ, ಜೆ.ಪಿ.ನಗರ ಮೈಸೂರು, ಸಸ್ಯಾಹಾರಿಗಳಿಗೆ ಮಾತ್ರ
9945552052

MUDA ALLOTED SITE FOR SALE
ವಿಜಯನಗರ 4ನೇ ಹಂತ 2ನೇ ಫೇಸ್‌ನಲ್ಲಿ 40'×60' NORTH Facing ಸೈಟ್.
[Borkers & Resalers Excuse]
ಫೋನ್ - 9886048471

ಯುವಕ ಯುವತಿಯರು ಬೇಕಾಗಿದ್ದಾರೆ
7th, SSLC, PUC, Diploma in Nursing & Any Education Qualification
ಮೈಸೂರು ಹಾಗೂ ಮಂಗಳೂರಿನಲ್ಲಿ ಹೋಂ ಕೇರ್ ಕೆಲಸಕ್ಕೆ ಬೇಕಾಗಿದ್ದಾರೆ. ತರಬೇತಿಯೊಂದಿಗೆ ಉದ್ಯೋಗವನ್ನು ಒದಗಿಸಲಾಗುವುದು. ಊಟ ಮತ್ತು ವಸತಿಯೊಂದಿಗೆ ಉತ್ತಮ ಸಂಬಳವನ್ನು ನೀಡಲಾಗುವುದು. ಸಂಬಳ: 12000 ರಿಂದ 18000
9035324777
7259306665

HOUSE FOR SALE & SITE
30x40 Residential House, Ground Floor -2 BHK, 1st Floor - 1 Attach Room, 1500 Sqft Construction area, 9 and 11A Property, & 40x30 Site Also Sale, Bank loan available, Near Yelawala City Bus stand, Yelawala, Mysore.
Further details contact
95354 80519

COMMERCIAL SPACE FOR RENT
G/F - 1500 Sqft.,
Cellar - 1000 Sqft.,
No. 14, KHB, Adichunchanagiri road, behind Damro Furnitures Kuvempunagar - 570023. Contact:
9448229296 / 9535348395

ಸೈಟುಗಳನ್ನು ಕೊಳ್ಳಲು/ಮಾರಲು
(Muda & Muda Approved)
ಸೈಟು ಮಾರಾಟಕ್ಕಿದೆ.
30x40 E/F KBL Gardenia
ವಿಜಯನಗರ 4ನೇ ಹಂತ
ಬೆಲೆ: 55 ಲಕ್ಷ
9538412881

ಬಾದಾಮಿ, ಗೋಡಂಬಿ, ಪಿಸ್ತಾ, ಒಣದ್ರಾಕ್ಷಿ, ಖರ್ಜೂರ, ಅಂಜೂರ ಮುಂತಾದ ಡ್ರೈಫ್ರೂಟ್ಸ್ ದೊರೆಯುತ್ತದೆ. (5 ಕಿ.ಮೀ ವರೆಗೂ ಉಚಿತ ಡೆಲಿವರಿ) ಸಂಪರ್ಕಿಸಿ:
ರಾಜ್ ಗುರು ಡ್ರೈಫ್ರೂಟ್, ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು
9845460211
7022293342

SITE FOR SALE
30X50 E/F
SILVER SPRINGS
BOGADI ROAD
8050821108
8792207164

ಬೇಕಾಗಿದ್ದಾರೆ
ಶಾಲೆಯಲ್ಲಿ ಕಸಗುಡಿಸಲು ಮತ್ತು ಸಣ್ಣ ಪ್ರಮಾಣದ ಅಡುಗೆ ಮತ್ತಿತರ ಸಹಾಯಕ ಕೆಲಸಗಳಿಗೆ ದೃಢಕಾಯ ಮಹಿಳೆಯರು ಬೇಕಾಗಿದ್ದಾರೆ ಕೆಲಸದ ಸಮಯ ಬೆಳಿಗ್ಗೆ 9 ರಿಂದ ಸಂಜೆ 6ರವರೆಗೆ ಸಂಬಳ ಪ್ರತಿ ದಿನಕ್ಕೆ 300/–
ಜ್ಞಾನ ಗಂಗೋತ್ರಿ ಕಾನ್ವೆಂಟ್ ರಾಜೇಂದ್ರ ನಗರ ಮೈಸೂರು
9243580672

WANTED
DANCE & ZUMBA
LADY TRAINER
9448247766

ITI ಗೆ ಪ್ರವೇಶಾವಕಾಶ
ITI (Fitter - NSQF) ವೃತ್ತಿಗೆ & SSLC / PUC pass or fail ಅಭ್ಯರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ. NCVT ಭಾರತ ಸರ್ಕಾರದಿಂದ ಸಂಯೋಜನೆಗೊಂಡಿರುತ್ತದೆ.
Benaka ITI College, Near Cauvery Circle, Dr. Rajkumar Road, Raghavendra Nagar, Mysore.
9342123467, 9141756695

ಹೊಸ ಮನೆ ಮಾರಾಟಕ್ಕಿದೆ
ಸರ್ದಾರ್ ವಲ್ಲಭಾಯಿಪಟೇಲ್ ನಗರ ಮುಡಾ ಅನುಮೋದಿತ ಲೇಔಟ್ 20*40 ಅಡಿ. ಪೂರ್ವ ದಿಕ್ಕು. 3 ಬಿಹೆಚ್‌ಕೆ. ಬೋರ್‌ವೆಲ್ ಮತ್ತು ಪಿಲ್ಲರ್ ಹೊಂದಿದೆ, 100% ವಾಸ್ತು, ಉತ್ತಮ ಗುಣಮಟ್ಟದ ಹೊಸ ಮನೆ
Call: 9380284276

ಜಮೀನು ಮಾರಾಟಕ್ಕಿದೆ
ತೆಂಗಿನ ತೋಟ 2 ಬೋರ್ ವೆಲ್ ಕೊಟ್ಟಿಗೆ ವಾಸದ ಮನೆ ಪೆರಿಫೆರಲ್ ರಿಂಗ್ ರೋಡ್‌ಗೆ ಹೊಂದಿಕೊಂಡಿರುವ 8.5 ಎಕರೆ ಮೈಸೂರಿನ RT ನಗರ Layout ನಿಂದ ಕೇವಲ 2km ದೂರದಲ್ಲಿದೆ
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
ಸಂಪರ್ಕಿಸಿ: ಡಾ. ಪ್ರಸಾದ್
9036284426

OLD AGE HOME
We offer nursing and Medical Services to Bedridden and Senior Citizens with Veg. Food and Accomodation at Our Centre in Gokulam Mysore at a Reasonable Cost
9880102700

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ನಿಮ್ಮ ವ್ಯಾಪಾರ ಅಥವಾ ನಿಮ್ಮ ವೃತ್ತಿಪರ ಸೇವೆಯ ಬಗ್ಗೆ ಪ್ರತಿಯೊಬ್ಬ ಮೈಸೂರಿಗರಿಗೂ ತಿಳಿಯಬೇಕೆಂದು ನೀವು ಬಯಸುತ್ತೀರಾ?
9845076497

20x30 DUPLEX HOUSE FOR SALE - 3BHK
NEW HOUSE,
Opp to St. Joseph's Central School, After Belavadi, Hunasuru Main Road, Mysuru. MUDA Approved, Rs.69 Lakhs
9986675044

ಪ್ರಸಿದ್ಧ ಕೇರಳ
ಶ್ರೀ ಭಗವತಿ ಜ್ಯೋತಿಷ್ಯರು
ಪಂ॥ ಕುಮಾರ್ ಪ್ರಸಾದ್ ಗುರೂಜಿ
Mob: 9731839596
ಸ್ತ್ರೀ–ಪುರುಷಪ್ರೇಮ, ಸಂತಾನ, ದಾಂಪತ್ಯ, ಸಮಸ್ಯೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ, ಅಷ್ಟಮಂಗಳ, ಪ್ರಶ್ನೆಯಿಂದ, ನೇರ ಉತ್ತರ ಹಾಗೂ ಶಾಶ್ವತ, ಪರಿಹಾರಕ್ಕಾಗಿ, ಚೋಟನಿಕರ, ಭಗವತಿ ತಾಯಿ, ರಾಜರಾಜೇಶ್ವರಿ, ಕುಟ್ಟಿಚೇತನ್, ಕೇರಳದ, ಮಾಂತ್ರಿಕ ಶಕ್ತಿಯಿಂದ, 2 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ಮನೆ ವಿಳಾಸ: ಲಕ್ಷ್ಮಿ ನಿವಾಸ ನಂ.19/D2, ಬುದ್ಧ ಮಾರ್ಗ, ಹೋಟೆಲ್ ದೋಸೆ ಕಾರ್ನರ್ ಪಕ್ಕ, ಹೊಸ DC ಆಫೀಸ್ ಎದುರು, ಸಿದ್ಧಾರ್ಥ ಲೇಔಟ್, ಮೈಸೂರು

ಕೇರಳ ಕೊಳ್ಳೇಗಾಲದ
ಶ್ರೀ ಜ್ಯೋತಿಷ್ಯರು
ಪಂ॥ ಎಸ್.ರಾಜು ಗುರೂಜಿ
9902239655
ಸ್ತ್ರೀ–ಪುರುಷ ಪ್ರೇಮ, ಮದುವೆ, ಸಂತಾನ, ಸಾಲಬಾಧೆ, ವ್ಯಾಪಾರ, ಶತ್ರುಕಾಟ, ಪ್ರೇತಬಾಧೆ, ದಾಂಪತ್ಯ ಸಮಸ್ಯೆ, ಪ್ರೀತಿಯಲ್ಲಿ ನಂಬಿ ಮೋಸ, ಭೂಮಿ ಕೋರ್ಟ್ ನಿಮ್ಮ ಯಾವುದೇ ಗುಪ್ತ, ನಿಗೂಢ ಸಮಸ್ಯೆಗಳಿಗೆ, ಕೇರಳದ ಮುಡಾಯಿಕಾವು ಶ್ರೀಭಗವತಿ ಭದ್ರಕಾಳಿ ಮಾಂತ್ರಿಕ ಶಕ್ತಿ ಕೊಳ್ಳೇಗಾಲದ ಅಘೋರ, ಮೋಡಿ ಮಾಂತ್ರಿಕ ಶಕ್ತಿಯಿಂದ 2 ದಿನದಲ್ಲಿ ಶಾಶ್ವತ ಪರಿಹಾರ ಶತಸಿದ್ಧ
ರೂಂ.9, 2ನೇ ಮಹಡಿ, ಸಿಟಿ ಬಸ್ ಸ್ಟ್ಯಾಂಡ್, ಬಿಲ್ಡಿಂಗ್ ಕೆ.ಆರ್.ಸರ್ಕಲ್, ಮೈಸೂರು

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗ ದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು-1

ಹೋಂ ನರ್ಸಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ
ವಯಸ್ಸಾದವರನ್ನು ರೋಗಿಗಳನ್ನು ಅವರ ಮನೆಯಲ್ಲೇ ನೋಡಿಕೊಳ್ಳಲು ಗಂಡಸರು/ಹೆಂಗಸರು ಮೈಸೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ.
ಉತ್ತಮ ಸಂಬಳ ನೀಡಲಾಗುವುದು.
9880102700

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

DISHA APARTMENT
2 BHK 12 FLATS FOR SALE
1086X6,500 RS, 1190X6,300RS
1238X6,300 RS, 1283X6,100RS
Fully Furnished,
24x7 Security Parking Elevators
Venue: Suyog Hospital Road, Near RubyBakery, Ramakrishna Nagar, Mysore-570001
9900322799
9845693181

ಮಾರಾಟಕ್ಕಿದೆ
20x30 ಡ್ಯೂಪ್ಲೆಕ್ಸ್ ಮನೆ –ದಟ್ಟಗಳ್ಳಿ
30x40 ಸೈಟ್ ಬೋಗಾದಿ SBM
30x40 ಸೈಟ್ ಹೊಸ
R.T ನಗರದ ಹತ್ತಿರ 40 ಲಕ್ಷ
ಹಳೆಮನೆ–ಹೊಸಮನೆ ಸೈಟ್ ಮಾರುವವರು ಕೊಳ್ಳುವವರು
ಸಂಪರ್ಕಿಸಿ
9945042875

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8296341145

ಬೇಕಾಗಿದ್ದಾರೆ
ಸ್ಕಿನ್‌ಕೇರ್ ಕ್ಲಿನಿಕ್‌ನಲ್ಲಿ ಕೆಲಸ ಮಾಡಲು ಸಹಾಯಕರು ಬೇಕಾಗಿದ್ದಾರೆ.
ವಿದ್ಯಾರ್ಹತೆ: SSLC/PUC
ಇಂಗ್ಲೀಷ್ ಮತ್ತು ಕನ್ನಡ ಓದಲು ಬರೆಯಲು ಬರಬೇಕು ಹಾಗೂ ಬೇಸಿಕ್ ಕಂಪ್ಯೂಟರ್ ಮಾಹಿತಿ ಇರಬೇಕು.
ಮಹಿಳೆಯರಿಗೆ ಆದ್ಯತೆ
9845961233

HOUSES & OFFICE SPACE FOR RENT
@ SARASWATHIPURAM, KUVEMPUNAGAR & SURROUNDINGS.
S.S. PROPERTY SERVICES
(Opp. Kuvempu School)
S.S. Puram, Mysore.
9342125252

60x40 ಹೊಸ ಮನೆ ಮಾರಾಟಕ್ಕಿದೆ
3BHK
ಕಾರ್ ಪಾರ್ಕಿಂಗ್ ರೈಲ್ವೆ ಲೇಔಟ್ ಜೆಪಿನಗರ ಪಕ್ಕ ಶ್ರೀನಗರ ರೈಲ್ವೆ ಗೇಟ್ ಹತ್ತಿರ.
8105906571

ಕರ್ನಾಟಕದಾದ್ಯಂತ ಪ್ರಸಿದ್ಧ
MNC ಕಂಪನಿಗಳಿಗೆ
ಕಂಪನಿ ಮತ್ತು ಆಫೀಸ್ ಕೆಲಸದ ಉದ್ಯೋಗಗಳಿಗೆ ತಕ್ಷಣ ಯುವಕ ಯುವತಿಯರು ಬೇಕಾಗಿದ್ದಾರೆ ಯಾವುದೇ ಸಂದರ್ಶನ ಇರುವುದಿಲ್ಲ ಪ್ರಸಿದ್ಧ ಕಂಪನಿಗಳಲ್ಲಿ, ಅಕೌಂಟೆಂಟ್, ಡೇಟಾ ಆಪರೇಟರ್, ಟೆಲಿಕಾಲರ್, ಕ್ಯಾಶಿಯರ್, ಆಫೀಸ್ ಬಾಯ್ ಮತ್ತು ಮ್ಯಾನುಫ್ಯಾಕ್ಚರಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ, ಶಿಕ್ಷಣ 4ನೇ ತರಗತಿ ಇಂದ ಯಾವುದೇ ಪದವೀಧರರು, (ಸಂಬಳ: 18000rs ಇಂದ 30000rs+ ಇನ್ಸೆಂಟಿವ್ಸ್) ಹೆಚ್ಚಿನ ಮಾಹಿತಿಗಾಗಿ ಇಂದೇ ಸಂಪರ್ಕಿಸಿ:
9632831680,7411273440

ವರ ಬೇಕಾಗಿದೆ
ಬ್ರಾಹ್ಮಣ ವಧು, ವಯಸ್ಸು 27, SSLC / ವಿಶ್ವಕರ್ಮ ವಧು, ವಯಸ್ಸು, 29, SSLC / GSB, RSB ಕೊಂಕಣಿ ವಧು, ವಯಸ್ಸು 30, PUC / ಒಕ್ಕಲಿಗ ಗೌಡ ವಧು, ವಯಸ್ಸು, 28, SSLC ಕಲಿತಿರುವ ವಧುವಿಗೆ ವರ ಬೇಕಾಗಿದೆ. ಶೀಘ್ರ ವಿವಾಹಕ್ಕಾಗಿ ಎಲ್ಲಾಜಾತಿಯ ವಧು ವರರಿಗಾಗಿ ಸಂಪರ್ಕಿಸಿ:
Mob: 9880685177

ಸೈಟುಗಳು, ಮನೆಗಳು ಮಾರಾಟಕ್ಕಿವೆ
ಪೋಲೀಸ್ ಲೇಔಟ್ 2ನೇ ಹಂತ 40x60 E/S ಕಾರ್ನರ್.
ಪೋಲೀಸ್ ಲೇಔಟ್ 2ನೇ ಹಂತ 40x60 N/E ಕಾರ್ನರ್.
ಪೋಲೀಸ್ ಲೇಔಟ್ 2ನೇ ಹಂತ 40x60 S/N ಫೇಸ್.
ಪೋಲೀಸ್ ಲೇಔಟ್ 2ನೇ ಹಂತ 50x80 North face 80 Ft. ರೋಡ್ ಪಕ್ಕ. ಲಾಲ್‌ಬಹದ್ದೂರ್ ಶಾಸ್ತ್ರಿನಗರ 30x40 E/F ಮನೆ. ವಸಂತ ನಗರ 30x40 E/F ಮನೆ. ವಸಂತ ನಗರ 20x30 Duplex ಮನೆ.
ನೇರ ಮಾಲೀಕರನ್ನು ಸಂಪರ್ಕಿಸಿ:
Mob: 9844985868

CHANGE OF NAME
I, NASEEMUNNISA M W/o Late ALI KHAN, aged about 77 years, residing at # 3, Model House, 1st cross, 1st Stage, Gayathri Puram, Udayagiri, Mysore-570019 do hereby swear that my correct name is NASEEMUNNISA M. But in passport No. B9382620 my name mentioned as NASEEMUNNISA. Hence I affirm that both the names belongs to me only vide affidavit sworn before Notary C. Mangala on 6.8.2024.
Sd/- NASEEMUNNISA M

ಮನೆ ಭೋಗ್ಯಕ್ಕೆ ಇದೆ
30X40 ಗ್ರೌಂಡ್ ಫ್ಲೋರ್
2 BHK with Solar
ನ್ಯಾಯಾಂಗ ಬಡಾವಣೆ (ಕ್ರೈಸ್ಟ್ ಪಬ್ಲಿಕ್ ಸ್ಕೂಲ್ ಹತ್ತಿರ).
Mob: 9741967776

SITES FOR SALE
MUDA Approved Layout
30x50
Bogadi - Vijayanagar 4th Stage.
Very good location. Govt. approved layout, Near MIT Engineering College.
30x40, 30x50
High potential for investors.
Near Mysore-Bangalore Highway.
9483358399, 6381779015

FOR RENT
1) 2BHK, Ground Floor
2) Commercial Space
8 Squares Ground Floor # 1555, HT Double Road, Vijayanagar 2nd Stage Mysore
9663604699

ಬೇಕಾಗಿದ್ದಾರೆ
ಎಸ್.ಎಸ್.ಟಿ ಕಾರ್ನರ್ ಟೀ ಮಾಡಲು ಹುಡುಗ ಹುಡುಗಿಯರು ಬೇಕಾಗಿದ್ದಾರೆ ವಿಳಾಸ ಕಾಂಟೂರ್ ರಸ್ತೆ ಜಯದೇವ ಆಸ್ಪತ್ರೆ ಹಿಂಭಾಗ ಮಹದೇಶ್ವರ ಬಡಾವಣೆ ನಂದಗೋಕುಲ
9591566927

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8880558064

ಅಂಜನ ಶಾಸ್ತ್ರದ ಮೂಲಕ ಪರಿಹಾರ
ಶ್ರೀ ಅಂಜನ ದೇವಿ ಆರಾಧಕರು
ಪಂ॥ ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ವಂಶಪಾರಂಪರ್ಯ ಜ್ಯೋತಿಷ್ಯರು. ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಸೆ ಆಗುವ ಮಾತೆ ಇಲ್ಲ. ಫೋನಿನ ಮೂಲಕ ಪರಿಹಾರ.
Mob: 9663466548

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ, 15200 – 86,000.
8147560344, 7892046990

KGTTI Training Center
ಡೊಮೆಸ್ಟಿಕ್ ಎಲೆಕ್ಟ್ರಿಷಿಯನ್ ವಿಷಯದಲ್ಲಿ ಎರಡು ತಿಂಗಳ ತರಬೇತಿಯು ಶೀಘ್ರದಲ್ಲೇ ಆರಂಭವಾಗಲಿದೆ. ಆಸಕ್ತರು ಹೆಚ್ಚಿನ ವಿವರಗಳಿಗೆ ಕೂಡಲೇ ಸಂಪರ್ಕಿಸಿ: ಕರ್ನಾಟಕ ಜರ್ಮನ್ ಟೆಕ್ನಿಕಲ್ ಟ್ರೈನಿಂಗ್ ಇನ್ಸ್ಟಿಟ್ಯೂಟ್, ಮೈಸೂರು.
www.kgtti.com
9353267509

ವಧು ಬೇಕಾಗಿದೆ
ಒಳ್ಳೆ ಅನುಕೂಲ ಇರುವ 50 ವರ್ಷ ಮೇಲ್ಪಟ್ಟ ವಿದುರ ಗಂಡಸಿಗೆ 35 ವರ್ಷ ಒಳಪಟ್ಟ ವಿಧವೆ ಅಥವಾ ಡೈವೋರ್ಸಿ ಮಕ್ಕಳಿದ್ದರೂ ಪರವಾಗಿಲ್ಲ ಯಾವ ಜಾತಿಯಾದರೂ ಸರಿ ಮದುವೆಯಾಗಲು ತುಂಬಾ ಕಷ್ಟದಲ್ಲಿರುವ ಬಡವರಾದರು ಸರಿ ಇವರಿಗೆ ಮೊದಲಾದ್ಯತೆ. ಮೈಸೂರು
9591327746

SITE FOR SALE
30x50 North Face
Silicon Valley
Bastipura
Price 48 Lacks
9916355557
9901311197

FOR SALE
1. Properties at Kuvempu Nagar Starting @ 45L
2. 30x40 & 30x50 Near Varuna Lake
3. 30x50 Sites at Brahmins Layout
4. 30x30 New House at Vijaya Nagar
5. Properties For Sale at Vidyaranyapuram
6. 20x30 Site Near SBM Lyt, Bogadhi
7. 30x40 Site at Kandhaya Lyt, Srirampura
8. 100x100 Farm House @ KRS Back Water Attach 20L
PRAKRUTHI PROPERTIES
95386 90359, 90359 90359

ಬೇಕಾಗಿದ್ದಾರೆ
ಮೈಸೂರಿನ ಇನ್ಫೋಸಿಸ್‌ಗೆ ಪುರುಷರು ಅಭ್ಯರ್ಥಿಗಳು
ಸೆಕ್ಯೂರಿಟಿ ಗಾರ್ಡ್ಸ್
ಆಕರ್ಷಕ ಸಂಬಳ : 21,000/-
ವಿದ್ಯಾರ್ಹತೆ: 10ನೇ ತರಗತಿ & ಪಿಯುಸಿ ತೇರ್ಗಡೆ
ವಯಸ್ಸು : 22 ರಿಂದ 40 ವರ್ಷ
78296 48007

Sudarshan Saur
SOLAR WATER HEATER

ATTRACTIVE OFFER
ಸೇಲ್ಸ್ & ಸರ್ವಿಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಸೈಟುಗಳು ಮಾರಾಟಕ್ಕಿವೆ
ಪೂರ್ಣ ಅಭಿವೃದ್ಧಿ ಹೊಂದಿದ ಸೈಟ್‌ಗಳು Govt ಹೈಸ್ಕೂಲ್ ಮತ್ತು ಕಾಲೇಜು ಹತ್ತಿರ, Yelwala ನಂತರ
8050009696

ಪ್ರಿಯೂನಿವರ್ಸಿಟಿ ಲೇಔಟ್
ದನಗಹಳ್ಳಿ ಶಾಂತಿನಿಕೇತನ ಹೆಚ್.ಡಿ.ಕೋಟೆ ರಸ್ತೆ, HD ಕೆಂಚಲಗೂಡು ಪಕ್ಕದ ಲೇಔಟ್ ಸೈಟ್ ನಂ.100 30x40 ಪೂರ್ವ ಮುಖ ಮೂಡಾ ಖಾತೆ 25 ಲಕ್ಷಗಳು
7259135555

ಶ್ರೀ ಗುರುಭ್ಯೋ ನಮಃ
ನಮ್ಮಲ್ಲಿ ಶಾಸ್ತ್ರೋಕ್ತವಾಗಿ ಸರ್ಪ ಸಂಸ್ಕಾರ, ತಿಲಹೋಮ ಬಲಿ, ರಾಹು ಕೇತು ಶಾಂತಿ ಪೂಜಾ ಕಾರ್ಯಗಳನ್ನು ಮಾಡಿಕೊಡಲಾಗುತ್ತದೆ.
ಸ್ಥಳ: ಹಸ್ತಿಕೇರಿ ಮಠ, ತಲಕಾಡು
ಶ್ರೀ ವೇ॥ ನಾಗೇಶ್‌ಶರ್ಮ
9945888912
ಶ್ರೀ ವಿದ್ವಾನ್ ನಿಜಗುಣಾರಾಧ್ಯ
9900779696

ಕೆಲಸಕ್ಕೆ ಬೇಕಾಗಿದ್ದಾರೆ
ಕನ್ನಡ ಇಂಗ್ಲಿಷ್ ಟೈಪಿಂಗ್ ಬರುವವರು 1 ವರ್ಷ ಅನುಭವ ಇರುವವರು ಆಂದೋಲನ ಸರ್ಕಲ್, ಮೈಸೂರು ಕೆಲಸದ ಸಮಯ ಬೆಳಿಗ್ಗೆ 9.30 ರಿಂದ ಸಂಜೆ 5.30 ವರೆಗೆ ಸಬ್‌ರಿಜಿಸ್ಟರ್ ಎದುರು ಮೈಸೂರು
ಸಂಬಳ: 8,000–10,000
8310781679

SITE FOR SALE
40x50
South Face
Roopa Nagar
9916355557
9901311197

ಬೇಕಾಗಿದ್ದಾರೆ
ಹೊಸದಾದ ಲೇಔಟ್‌ಗೆ ಮತ್ತು ಅಪಾರ್ಟ್‌ಮೆಂಟ್‌ಗೆ ಗಾರ್ಡ್ಸ್ ಸೆಕ್ಯೂರಿಟಿ ಸೂಪರ್‌ವೈಸರ್ ಬೇಕಾಗಿದ್ದಾರೆ
ಹೌಸ್ ಕೀಪಿಂಗ್ ಸೂಪರ್‌ವೈಸರ್. ಹೌಸ್ ಕೀಪಿಂಗ್ ಕೆಲಸಕ್ಕೆ ಹುಡುಗರು ಮತ್ತು ಮಹಿಳೆಯರು ಯಾವುದೇ ಶುಲ್ಕ ಇರುವುದಿಲ್ಲ. ಉತ್ತಮ ಸಂಬಳ ಮತ್ತು ESI, PF ಸೌಲಭ್ಯ ಇರುತ್ತದೆ.
7483962689,8884286123
8884286321

WANTED
Montessori Teachers
Good Salary
Near Tilak Nagar
9739606258
9739548823

SITE FOR SALE
30X40 S/F
4th Stage,
Vijayanagar
2nd Phase
9019733430

HOUSE FOR SALE
First main road
Jayalaksmipuram
Mysore-570012
3 Bed Room House
Site Dimension 65x40
South Facing Near Chandrakala Hospital
9900431846

ಹೆಲ್ತ್ ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲಮೋ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. GNM/BSC ನರ್ಸಿಂಗ್ ಆದವರಿಗೆ ಕೆಲಸವಿದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ.
ಸೆಂಟ್ ಮೇರಿಸ್ ಆಸ್ಪತ್ರೆ
ಸಿಲ್ಕ್ ಫ್ಯಾಕ್ಟರಿ ಸರ್ಕಲ್
NIE ಕಾಲೇಜ್ ಪಕ್ಕ, ಮೈಸೂರು
9916908454

ಬೇಕಾಗಿದ್ದಾರೆ
ಹೆಸರಾಂತ ಕೋರಿಯರ್ಸ್ ಸಂಸ್ಥೆಗೆ NR ಮೊಹಲ್ಲಾ ಶಾಖೆಯಲ್ಲಿ ಆಫೀಸ್ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ. (ಕಂಪ್ಯೂಟರ್ ಜ್ಞಾನ ಹೊಂದಿರತಕ್ಕದ್ದು) ಹಾಗೂ ಕೆ.ಟಿ. ಸ್ಟ್ರೀಟ್ ಶಾಖೆಗೆ ಬ್ರಾಂಚ್ Incharge ಹಾಗೂ NR ಮೊಹಲ್ಲಾ ಶಾಖೆಗೆ ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ. ಹಾಗೂ Marketing Executive ಸಹ ಬೇಕಾಗಿದ್ದಾರೆ.
9449871790

10 ಗುಂಟೆ ಜಮೀನು ಮಾರಾಟಕ್ಕಿದೆ
ಶ್ರೀರಾಂಪುರ ರಿಂಗ್ ರಸ್ತೆ ಇಂದ 15 ಕಿ.ಮೀ ದೂರದಲ್ಲಿ 14 ಲಕ್ಷಗಳಿಗೆ 10 ಗುಂಟೆ ಜಮೀನು ಮಾರಾಟಕ್ಕಿದೆ
Direct Owner
7411110087

HOUSE FOR RENT
Duplex 2BHK I and II Floor, Independent, Corner House, with Solar, Kitchen Chimany, Carparking, Layout borewater facility, Near Christ Public School, Bogadi, Mysuru Small Family without pet animal is required only employees need to contact.
9916777948
Brokers Excuse

ಅಡುಗೆಯರು ಬೇಕಾಗಿದ್ದಾರೆ
ಮೈಸೂರು ನಗರದ ಬನ್ನೂರು ರಸ್ತೆಯ ಅಪಾರ್ಟ್‌ಮೆಂಟ್‌ನಲ್ಲಿ ವಾಸವಾಗಿರುವ ದಂಪತಿಗಳಿಗೆ ಬ್ರಾಹ್ಮಣ ಹೆಂಗಸು ಅಡುಗೆ ಮಾಡಿಕೊಡಲು ಬೇಕಾಗಿದ್ದಾರೆ. ಬೆಳಿಗ್ಗೆ 8 ರಿಂದ ಸುಮಾರು 11–12 ಗಂಟೆ ತನಕ. ಕೂಡಲೇ ಸಂಪರ್ಕಿಸಿ:
9448218536

ಮನೆ ಮಾರಾಟಕ್ಕಿದೆ
923 Sqft G/F, F/F
South - East Corner,
80ft Road ವಸಂತ ನಗರ, ಅತಿಥಿ ಎನ್‌ಕ್ಲೇವ್
90 ಲಕ್ಷಗಳು
9342125063

WANTED
Office Staff with Computer Operating Skills
Tally Preferred
WA: 9606062178
Mail: bilvashree24@gmail.com

ಕಛೇರಿ ಕೆಲಸಕ್ಕೆ ಬೇಕಾಗಿದ್ದಾರೆ
ವಯಸ್ಸು : 22–30
ವಿದ್ಯಾಭ್ಯಾಸ: ಯಾವುದೇ ಪದವಿ
ಸಂಬಳ: 15 ಸಾವಿರದಿಂದ 25 ಸಾವಿರ
ಹುದ್ದೆಗಳು: ನುರಿತ ಟೆಲಿ ಕಾಲರ್ 10 (ಮಹಿಳೆ) ಟೀಮ್ ಲೀಡರ್ –2
ಆಫೀಸ್ ಅಸಿಸ್ಟೆಂಟ್–1
ಸ್ಥಳ: ನಾಗಮಂಗಲ
9663845894

ಬೇಕಾಗಿದ್ದಾರೆ
ಮೈಸೂರಿನ ಕಾಳಿದಾಸ ರಸ್ತೆ – ಜಯಲಕ್ಷ್ಮೀಪುರಂನಲ್ಲಿ ಇರುವ ಶುದ್ಧ ಸಸ್ಯಾಹಾರಿ ರೆಸ್ಟೋರೆಂಟ್ ಗೆ ಅನುಭವವುಳ್ಳ (1) –Assitant Cook ಸಹಾಯಕ ಹೆಲ್ಪರ್ ಕುಕ್ (2) ಕೌಂಟರ್ ಪಾರ್ಸಲ್ I Counter Parcle Packing (3) ಕ್ಲೀನಿಂಗ್ (ಪಾತ್ರೆ ತೊಳೆಯುವ) 2 PM to 11 PM) (4) Supplier with Tea/ Coffee ಮಾಡುವ ಕೆಲಸಕ್ಕೆ ಬೇಕಾಗಿದ್ದಾರೆ ಆಕರ್ಷಕ ಸಂಬಳ, ವಸತಿ ಹಾಗು ಉತ್ತಮ ಸೌಲಭ್ಯಗಳನ್ನೂ ನೀಡಲಾಗುತ್ತದೆ – ಸಂಪರ್ಕಿಸಿ
7899028086

Experienced Tellecallers Needed
PUC/Graduation/ Masters
Fluency in English, Kannada, Salary with attractive incentives
Location: Gangothri Layout
6363268724

VK GOLD
ಯುವಕ ಮತ್ತು ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ.
ಸಂಬಳ: 12000+ Incentive
8147714259

ACTIVE HONDA ಬೇಕಾಗಿದೆ
2017–18ರ ಮಾಡಲ್ ಬಿಳಿ ಮತ್ತು ಕಪ್ಪು ಬಣ್ಣ ಬಿಟ್ಟು, 40 ಸಾವಿರದ ಒಳಗೆ
9901751957

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 11 ರಲ್ಲಿ

ಮೈಸೂರು ಮಿತ್ರ ಗುರುವಾರ 8 ಆಗಸ್ಟ್ 2024

3 ಕೋಟಿ ರೂ.ಗಳ ಅಭಿವೃದ್ಧಿ ಕಾಮಗಾರಿಗೆ ಚಾಲನೆ



3 ಕೋಟಿ ವೆಚ್ಚದ ಅಭಿವೃದ್ಧಿಗೆ ಶಾಸಕ ದರ್ಶನ್ ಗುದ್ದಲಿ ಪೂಜೆ ನೆರವೇರಿಸಿದರು.

ನಂಜನಗೂಡು, ಆ.7– ನಗರದ ಎಪಿಎಂಸಿ ಮಾರುಕಟ್ಟೆಗೆ ಮೂಲ ಸೌಕರ್ಯ ಕಲ್ಪಿಸಿ ರೈತರ ವ್ಯಾಪಾರ ವಹಿವಾಟು ಉತ್ತೇಜಿಸುವ ಸಲುವಾಗಿ 3 ಕೋಟಿ ರೂ.ಗಳ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ ಎಂದು ಶಾಸಕ ದರ್ಶನ್ ತಿಳಿಸಿದರು.

ನಗರದ ಎಪಿಎಂಸಿ ಮಾರುಕಟ್ಟೆ ಆವರಣದಲ್ಲಿ 2023–24ನೇ ಸಾಲಿನ ಆರ್‌ಐಡಿಎಫ್–29ರ ಯೋಜನೆ ಅನುದಾನದಡಿ 3 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಎಪಿಎಂಸಿ ಮಾರುಕಟ್ಟೆಯಲ್ಲಿ ಸಕಲ ಸೌಕರ್ಯಗಳಿದ್ದರೆ ವ್ಯಾಪಾರ ವಹಿವಾಟು ದ್ವಿಗುಣಗೊಂಡು ರೈತರಿಗೆ ಅನುಕೂಲವಾಗಲಿದೆ. ಆ ನಿಟ್ಟಿನಲ್ಲಿ ನಾನು ಶಾಸಕನಾದ ಬಳಿಕ ಮೊದಲ ಬಾರಿಗೆ 3 ಕೋಟಿ ಅನುದಾನ ಬಿಡುಗಡೆಗೆ ಬೇಡಿಕೆ ಇಟ್ಟಿದ್ದೆ. ಅದರಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ಅವರು ಬಿಡುಗಡೆಗೊಳಿಸಿದ್ದು, ಅವರಿಗೆ ಧನ್ಯವಾದ ಅರ್ಪಿಸುತ್ತೇನೆ ಎಂದರು.

ಎಪಿಎಂಸಿ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಮುಚ್ಚಿದ ಹರಾಜು ಕಟ್ಟೆ, ಕಾಂಕ್ರೀಟ್ ರಸ್ತೆ, ಚರಂಡಿ ನಿರ್ಮಾಣ ಹಾಗೂ ಜಾನುವಾರು ಮಾರುಕಟ್ಟೆ ಉಪ ಪ್ರಾಂಗಣದಲ್ಲಿ ಮುಚ್ಚಿದ ಹರಾಜು ಮಾರುಕಟ್ಟೆ ನಿರ್ಮಾಣ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ಕಾಮಗಾರಿಯಲ್ಲಿ ಗುಣಮಟ್ಟ ಕಾಯ್ದುಕೊಂಡು, ನಿಗದಿತ ಸಮಯದಲ್ಲಿ ಮುಕ್ತಾಯಗೊಳಿಸಿ ರೈತರಿಗೆ ಅನುಕೂಲ ಮಾಡಿಕೊಡುವಂತೆ ಸೂಚನೆ ನೀಡಲಾಗಿದೆ ಎಂದರು. ಮಾಜಿ ಶಾಸಕ ಕೇಶವಮೂರ್ತಿ ಮಾತನಾಡಿದರು. ಈ ವೇಳೆ ಎಪಿಎಂಸಿ ಆಡಳಿತಾಧಿಕಾರಿ ಶಿವಕುಮಾರ್ ಕಾಸ್ನೂರು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ಮುದ್ದುಮಾದಶೆಟ್ಟಿ, ಎಂ.ಮಾದಪ್ಪ, ಮಾಜಿ ಉಪಾಧ್ಯಕ್ಷ ಕೆಂಡಗಣ್ಣಪ್ಪ, ನಗರಸಭಾ ಸದಸ್ಯರಾದ ಗಂಗಾಧರ್, ಎಸ್.ಪಿ.ಮಹೇಶ್, ಗಾಯತ್ರಿ ಶ್ರೀಕಂಠಸ್ವಾಮಿ, ಎಪಿಎಂಸಿ ಕಾರ್ಯದರ್ಶಿ ಮಹೇಶ್, ಅಧಿಕಾರಿ ಸೋಮಶೇಖರ್ ಸೇರಿದಂತೆ ಹಲವರಿದ್ದರು.

ಮಾರುಕಟ್ಟೆಗೆ ರಜೆ ಇಲ್ಲ

ರೈತರಿಗೆ ಒಂದು ದಿನ ರಜೆ ಕೊಡಬೇಕೆಂಬ ಹಿತದೃಷ್ಟಿಯಿಂದ ಪ್ರತಿ ಸೋಮವಾರ ಮಾರುಕಟ್ಟೆಗೆ ರಜೆ ಘೋಷಣೆ ಮಾಡಲಾಗಿತ್ತು. ಆದರೆ ಹಲವು ರೈತರು ನಮಗೆ ರಜೆ ಬೇಡ ಪ್ರತಿದಿನ ಮಾರುಕಟ್ಟೆ ತೆರೆಯಿರಿ ಎಂದು ಅಭಿಪ್ರಾಯ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ರಜೆ ರದ್ದುಗೊಳಿಸಲಾಗಿದೆ ಎಂದು ಶಾಸಕ ದರ್ಶನ್ ತಿಳಿಸಿದರು.

ಕೇಂದ್ರದಿಂದ ರಾಜ್ಯ ಸರ್ಕಾರ ಕೆಡವಲು ಕುತಂತ್ರ

ಜನಾಂದೋಲನಾ ಸಮಾವೇಶ ಪೂರ್ವಭಾವಿ ಸಭೆಯಲ್ಲಿ ಸಂಸದ ಸುನೀಲ್ ಬೋಸ್



ಜನಾಂದೋಲನ ಸಮಾವೇಶದ ಪೂರ್ವಭಾವಿ ಸಭೆಯಲ್ಲಿ ಸಂಸದ ಸುನೀಲ್ ಬೋಸ್ ಮಾತನಾಡಿದರು.

ತಿ.ನರಸೀಪುರ, ಆ.7– ಕೇಂದ್ರ ಬಿಜೆಪಿ ಸರ್ಕಾರ ಅಧಿಕಾರ ದುರ್ಬಳಕೆ ಮಾಡಿಕೊಂಡು ರಾಜ್ಯದಲ್ಲಿ ಸ್ಪಷ್ಟ ಜನಾದೇಶದಿಂದ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಸರ್ಕಾರ ಕೆಡವಲು ಕುತಂತ್ರ ರೂಪಿಸುತ್ತಿದೆ. ಬಿಜೆಪಿ, ಜೆಡಿಎಸ್ ನಾಯಕರು ನಾಡಿನ ಜನಾದೇಶದ ವಿರುದ್ಧ ನಡೆದುಕೊಳ್ಳುತ್ತಿದ್ದಾರೆ ಎಂದು ಸಂಸದ ಸುನೀಲ್ ಬೋಸ್ ಟೀಕಿಸಿದರು.

ಆ.9ರಂದು ಮೈಸೂರಲ್ಲಿ ನಡೆಯುವ ಜನಾಂದೋಲನ ಸಮಾವೇಶದ ಹಿನ್ನೆಲೆಯಲ್ಲಿ ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಮುಡಾ ಮತ್ತು ವಾಲ್ಮೀಕಿ ನಿಗಮದ ಭ್ರಷ್ಟಾಚಾರದಲ್ಲಿ ಸಿಎಂ ಸಿದ್ದರಾಮಯ್ಯ ಅವರ ಪಾತ್ರವಿಲ್ಲದಿದ್ದರೂ ವಿಪಕ್ಷಗಳು ವಿನಾಕಾರಣ ಮುಖ್ಯಮಂತ್ರಿಯನ್ನು ಅಧಿಕಾರದಿಂದ ಕೆಳಗಿಳಿಸುವ ಬಿಜೆಪಿಯವರ ಪ್ರವೃತ್ತಿಗೆ ಕಡಿವಾಣ ಹಾಕುವ ಜನಾದೇಶದ ಸಂದೇಶ ಮೈಸೂರಿನಿಂದಲೇ ಹೋಗಬೇಕು. ಹೀಗಾಗಿ ಶುಕ್ರವಾರದ ಜನಾಂದೋಲನವನ್ನು ಐತಿಹಾಸಿಕವಾಗಿಸಲು ಕಾರ್ಯ ಪ್ರವೃತ್ತರಾಗಬೇಕು ಎಂದು ಕಾರ್ಯಕರ್ತರಿಗೆ ಕರೆ ನೀಡಿದರು.

ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಸಿಎಂ ಸಿದ್ದರಾಮಯ್ಯ ಅವರು ಯಾವುದೇ ತಪ್ಪು ಮಾಡಿಲ್ಲ ಎಂಬುದು ಇಡೀ ರಾಜ್ಯದ ಜನತೆಗೆ ತಿಳಿದಿದೆ. ಸ್ವಚ್ಛ ಹಾಗೂ ಪ್ರಾಮಾಣಿಕ ರಾಜಕಾರಣ ಮಾಡಿಕೊಂಡು ಬಂದಿರುವ ಅವರ ವ್ಯಕ್ತಿತ್ವಕ್ಕೆ ಮಸಿ ಬಳಿಯುವ ಏಕೈಕ ಉದ್ದೇಶದಿಂದ ಬಿಜೆಪಿ ಹಾಗೂ ಜೆಡಿಎಸ್ ಮುಖಂಡರು ಪಾದಯಾತ್ರೆ ಮಾಡುತ್ತಿದ್ದಾರೆ ಎಂದರು. ಬಿಜೆಪಿ ಆಡಳಿತದ ಹೊರತಾದ ಯಾವುದೇ ರಾಜ್ಯದ ಮುಖ್ಯಮಂತ್ರಿಗಳನ್ನೂ ಬಿಜೆಪಿ ಸುಮ್ಮನೆ ಬಿಟ್ಟಿಲ್ಲ. ಅವರ ಸರ್ವಾಧಿಕಾರ ಧೋರಣೆಗೆ ಮೈಸೂರಿನಿಂದಲೇ ಉತ್ತರ ನೀಡಬೇಕು. ಒಕ್ಕೂಟದ ವ್ಯವಸ್ಥೆಯಲ್ಲಿ ಯಾವುದೇ ರಾಜ್ಯದ ಸಿಎಂ ವಿರುದ್ಧ ಕ್ರಮಕ್ಕೆ ಮುಂದಾಗುವ ಮುನ್ನ ಅವರಿಗೆ ರಾಜ್ಯದ ನೆನಪಾಗುವಂತೆ ಕಾಂಗ್ರೆಸ್ ಕಾರ್ಯಕರ್ತರು ಸಮಾವೇಶ ಯಶಸ್ವಿಗೊಳಿಸಬೇಕು ಎಂದರು.

> ಮುಡಾ ನಿವೇಶನ ಹಗರಣ ನಡೆದಿರುವುದು ಬಿಜೆಪಿ ಅವಧಿಯಲ್ಲಿ. ವಾಲ್ಮೀಕಿ ನಿಗಮದ ಅಕ್ರಮ ಹಣ ವರ್ಗಾವಣೆಗೂ ತಮಗೂ ಸಂಬಂಧವಿಲ್ಲ ಎಂದು ಸಿಎಂ ಅವರೇ ಸ್ಪಷ್ಟಪಡಿಸಿ, ತನಿಖೆಗೆ ಆದೇಶಿಸಿದ್ದರೂ ವಿನಾಕಾರಣ ಸಿದ್ದರಾಮಯ್ಯ ಹಾಗೂ ಅವರ ಪತ್ನಿ ಮೇಲೆ ಆರೋಪ ಹೊರಿಸುತ್ತಿದ್ದಾರೆ. ಅವರ ಈ ಆರೋಪಕ್ಕೆ ಜನಾಂದೋಲನ ಸಮಾವೇಶದ ಮೂಲಕ ತಕ್ಕ ಉತ್ತರ ಮೈಸೂರಿನಿಂದಲೇ ನೀಡಬೇಕು.
> – ಸುನೀಲ್ ಬೋಸ್, ಸಂಸದ.

ಸಭೆಯಲ್ಲಿ ಹಾಸ್ಯನಟ ಸಾಧು ಕೋಕಿಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು, ಚನ್ನಕೇಶವ, ಜಿಪಂ ಮಾಜಿ ಸದಸ್ಯೆ ಎಂ.ಸುಧಾ, ಲಕ್ಷ್ಮೀನಾರಾಯಣ, ತಾಪಂ ಮಾಜಿ ಅಧ್ಯಕ್ಷರಾದ ಎಂ.ಮಲ್ಲಿಕಾರ್ಜುನಸ್ವಾಮಿ, ಹೆಚ್.ಎನ್.ಉಮೇಶ್, ಮಾಜಿ ಸದಸ್ಯರಾದ ಗಣೇಶ್, ರಾಮಲಿಂಗಯ್ಯ, ನರಸಿಂಹ ಮಾದನಾಯಕ, ಎಪಿಎಂಸಿ ಮಾಜಿ ನಿರ್ದೇಶಕ ಬಸವಣ್ಣ, ಕೆಪಿಸಿಸಿ ಸದಸ್ಯ ಸುಂದರ ನಾಯಕ, ಸಿದ್ದರಾಜು, ಮೃಗಾಲಯ ಪ್ರಾಧಿಕಾರದ ಮಾಜಿ ನಿರ್ದೇಶಕ ಲತಾ, ಪುರಸಭೆ ಸದಸ್ಯರಾದ ಬಾದಾಮಿ ಮಂಜು, ಪ್ರಕಾಶ್, ಯುವ ಬ್ರಿಗೇಡ್ ಸಂಚಾಲಕ ಕುಮಾರ್ ರಾಮೇಗೌಡ, ಸೋಸಲೆ ಪಿಎಸಿಎಸ್ ಅಧ್ಯಕ್ಷ ಎಂ.ಪರಶಿವಮೂರ್ತಿ, ಕೊಳತ್ತೂರು ಡೈರಿ ಅಧ್ಯಕ್ಷ ಕೆಎನ್.ಕುಮಾರ, ಎಸ್‌ಸಿ, ಎಸ್‌ಟಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆ.ಮಲ್ಲು, ಸಿ.ಮಂಜು, ಮುಖಂಡರಾದ ಶೇಷಾದ್ರಿ, ಸೋಮಣ್ಣ ಪ್ರಭುಸ್ವಾಮಿ, ಸಿದ್ದಶೆಟ್ಟಿ ಲಕ್ಷ್ಮಣ, ಕೋಕಿಲ, ನಾಗರಾಜು ಇನ್ನಿತರರಿದ್ದರು.

ಸಿಎಂ ವಿರುದ್ಧ ವಿಪಕ್ಷಗಳ ಆರೋಪ ಪ್ರಜಾಪ್ರಭುತ್ವಕ್ಕೆ ಮಾಡಿದ ಅಪಮಾನ

ಶಾಸಕ ಡಿ.ರವಿಶಂಕರ್



ಜನಾಂದೋಲನಾ ಸಮಾವೇಶ ಪೂರ್ವಭಾವಿ ಸಭೆಯಲ್ಲಿ ಶಾಸಕ ಡಿ.ರವಿಶಂಕರ್ ಮಾತನಾಡಿದರು.

ಕೆ.ಆರ್.ನಗರ, ಆ.7– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಮಾಡುತ್ತಿರುವ ಆರೋಪ ಪ್ರಜಾಪ್ರಭುತ್ವಕ್ಕೆ ಮಾಡುತ್ತಿರುವ ಅಪಮಾನ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಪಟ್ಟಣದ ಸಂಗೊಳ್ಳಿ ರಾಯಣ್ಣ ಸಮುದಾಯ ಭವನದಲ್ಲಿ ನಡೆದ ಜನಾಂದೋಲನಾ ಸಮಾವೇಶದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ವಿಪಕ್ಷಗಳ ಈ ವರ್ತನೆ ನಾವು ಖಂಡಿಸಬೇಕಲ್ಲದೆ ಮೈಸೂರಿನಲ್ಲಿ ಆ.9 ರಂದು ನಡೆಯುವ ಸಮಾವೇಶದಲ್ಲಿ ಸಾವಿರಾರು ಮಂದಿ ಭಾಗವಹಿಸುವ ಮೂಲಕ ತಕ್ಕ ಉತ್ತರ ನೀಡಬೇಕು ಎಂದರು.

ಸಿದ್ದರಾಮಯ್ಯ ಜನಪ್ರಿಯತೆ ಸಹಿಸದ ವಿಪಕ್ಷ ನಾಯಕರು ಕುತಂತ್ರ ರಾಜಕಾರಣ ಮಾಡುತ್ತಿದ್ದಾರೆ. ರಾಜ್ಯದ ಜನತೆ ಇಂತಹ ಕೀಳು ಮಟ್ಟದ ವರ್ತನೆಯನ್ನು ಗಂಭೀರವಾಗಿ ಗಮನಿಸುತ್ತಿದ್ದು, ಮುಂದೆ ನಡೆಯುವ ಚುನಾವಣೆಗಳಲ್ಲಿ ಎರಡೂ ಪಕ್ಷದವರಿಗೂ ಬುದ್ಧಿ ಕಲಿಸಲಿದ್ದಾರೆ ಎಂದು ಎಚ್ಚರಿಕೆ ನೀಡಿದರು.

ಜನಾಂದೋಲನ ಸಮಾವೇಶದಲ್ಲಿ ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕಿನಿಂದ 30 ಸಾವಿರಕ್ಕೂ ಅಧಿಕ ಮಂದಿ ಭಾಗವಹಿಸಬೇಕು ಎಂದು ಮನವಿ ಮಾಡಿದ ಅವರು ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಪ್ರತಿ ಗ್ರಾಮಗಳಿಗೆ ತೆರಳಿ ಆಹ್ವಾನ ನೀಡಬೇಕೆಂದು ಕೋರಿದರು.

ನಮ್ಮ ಒಗ್ಗಟ್ಟು ಮತ್ತು ಶಕ್ತಿ ಪ್ರದರ್ಶನ ಮಾಡುವ ಮೂಲಕ ಜನಾಂದೋಲನ ಸಮಾವೇಶದಲ್ಲಿ ವಿಪಕ್ಷಗಳಿಗೆ ಬಿಸಿ ಮುಟ್ಟಿಸಿ ಸುಳ್ಳು ಪ್ರಚಾರದಲ್ಲಿ ತೊಡಗಿರುವ ಅವರ ಹಗರಣಗಳನ್ನು ಬಯಲಿಗೆಳೆಯಲು ಸಹಕಾರ ನೀಡಬೇಕು ಎಂದರು. ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ ಮಾತನಾಡಿ, ತಮ್ಮ ರಾಜಕೀಯ ಜೀವನದ ಉದ್ದಕ್ಕೂ ಕಳಂಕರಹಿತ ರಾಜಕಾರಣ ಮಾಡಿಕೊಂಡು ಬಂದಿರುವ ದಕ್ಷ ಮತ್ತು ಪ್ರಾಮಾಣಿಕ ಜನ ನಾಯಕ ಸಿದ್ದರಾಮಯ್ಯನವರ ವಿರುದ್ಧ ವಿಪಕ್ಷಗಳು ಹೊಟ್ಟೆ ಕಿಚ್ಚಿನ ಕೆಟ್ಟ ರಾಜಕಾರಣ ಮಾಡುತ್ತಿದ್ದು ಇದಕ್ಕೆ ನಾವು ಸೊಪ್ಪು ಹಾಕುವುದಿಲ್ಲ ಎಂದರು.

ರಾಜ್ಯ ಕಾಂಗ್ರೆಸ್ ಎಸ್‌ಟಿ ವಿಭಾಗದ ಉಪಾಧ್ಯಕ್ಷ ಶ್ರೀನಿವಾಸ್, ಕೆಪಿಸಿಸಿ ಸದಸ್ಯ ಸಿ.ಪಿ.ರಮೇಶ್, ಜಿಪಂ ಮಾಜಿ ಸದಸ್ಯರಾದ ಶಿವರಾಂ, ಜಿ.ಆರ್.ರಾಮೇಗೌಡ, ತಾಪಂ ಮಾಜಿ ಸದಸ್ಯ ಎ.ಟಿ.ಗೋವಿಂದೇಗೌಡ ಮಾತನಾಡಿದರು.

ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಮಹೇಶ್, ಮಾಜಿ ಅಧ್ಯಕ್ಷ ವೈ.ಎಸ್.ಕುಮಾರ್, ನಿರ್ದೇಶಕರಾದ ಸೈಯದ್ ಜಾಬೀರ್, ಸರಿತಾ, ಜಿಪಂ ಮಾಜಿ ಸದಸ್ಯ ಸಿದ್ದಪ್ಪ, ತಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಪುರಸಭೆ ಮಾಜಿ ಅಧ್ಯಕ್ಷ ನರಸಿಂಹರಾಜು, ಸದಸ್ಯರಾದ ಶಿವುನಾಯಕ್, ನಟರಾಜು, ಪ್ರಕಾಶ್, ಶಂಕರ್ ಸ್ವಾಮಿ, ಮಾಜಿ ಸದಸ್ಯ ಕೆ.ವಿನಯ್, ಜಿಲ್ಲಾ ಯುವ ಕಾಂಗ್ರೆಸ್ ಮುಖಂಡ ಜಿ.ಎಸ್.ವೆಂಕಟೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ಎಂ.ರಮೇಶ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಶಿವಣ್ಣ, ಆರೋಗ್ಯ ರಕ್ಷಾ ಸಮಿತಿ ಸದಸ್ಯ ಹೆಚ್.ಹೆಚ್.ನಾಗೇಂದ್ರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂ.ಎಸ್.ಮಹದೇವ್, ಉದಯಶಂಕರ್, ನಗರಾಧ್ಯಕ್ಷ ಎಂ.ಜೆ.ರಮೇಶ್, ಮಹಿಳಾ ಘಟಕದ ಅಧ್ಯಕ್ಷೆ ಲತಾ, ರಾಣಿ ಸೇರಿದಂತೆ ಹಲವರಿದ್ದರು.

ನಿವೃತ್ತ ಯೋಧನಿಗೆ ಅದ್ದೂರಿ ಸ್ವಾಗತ



ಬೆಟ್ಟದಪುರದ ನಾಗರಿಕ ವೇದಿಕೆ, ಜಯ ಕರ್ನಾಟಕ ಸಂಘಟನೆ, ಹಸಿರು ಸೇನೆ, ರೈತ ಸಂಘ, ಬೆಟ್ಟದಪುರ ಮೆಕಾನಿಕ್ ಸಂಘ ಸೇರಿದಂತೆ ವಿವಿಧ ಸಂಘಟನೆಗಳ ವತಿಯಿಂದ ಭಾರತೀಯ ಸೇನೆಯಲ್ಲಿ 32 ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾದ ಸುಬ್ರಹ್ಮಣ್ಯ ನಾಯಕ ಅವರನ್ನು ಬೆಟ್ಟದಪುರದಲ್ಲಿ ತೆರೆದ ವಾಹನದಲ್ಲಿ ಮೆರವಣಿಗೆ ಮಾಡಲಾಯಿತು.

ನಾಳೆ ವಿದ್ಯುತ್ ವ್ಯತ್ಯಯ

ಭೇರ್ಯ, ಆ.7– ಸಾಲಿಗ್ರಾಮ ಉಪವಿಭಾಗ ವ್ಯಾಪ್ತಿಯ ಭೇರ್ಯ ವಿದ್ಯುತ್ ವಿತರಣಾ ಉಪಕೇಂದ್ರದಲ್ಲಿ ತುರ್ತು ಕಾರ್ಯ ಹಮ್ಮಿಕೊಂಡಿರುವುದರಿಂದ ಆ.9 ರಂದು ಬೆಳಗ್ಗೆ 10 ರಿಂದ ಸಂಜೆ 5 ರವರೆಗೆ ಭೇರ್ಯ, ಹೊಸ ಅಗ್ರಹಾರ, ಮುಂಜನಹಳ್ಳಿ ಹಾಗೂ ಮೇಲೂರು ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಸರಸ್ವತಿ ಕೊಳತ್ತೂರು ಗ್ರಾಪಂ ಉಪಾಧ್ಯಕ್ಷೆ



ಕೊಳತ್ತೂರು ಗ್ರಾಪಂ ಉಪಾಧ್ಯಕ್ಷೆಯಾಗಿ ಸರಸ್ವತಿ ಅವಿರೋಧವಾಗಿ ಆಯ್ಕೆಯಾದರು.

ತಿ.ನರಸೀಪುರ, ಆ.7– ತಾಲೂಕಿನ ಕೊಳತ್ತೂರು ಗ್ರಾಪಂ ಉಪಾಧ್ಯಕ್ಷೆಯಾಗಿ ಸರಸ್ವತಿ ಮರಿಸ್ವಾಮಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಆಂತರಿಕ ಒಪ್ಪಂದದಂತೆ 10 ತಿಂಗಳ ಅಧಿಕಾರವಧಿ ಪೂರೈಸಿ ಸಿ.ಎಂ.ಯಶೋಧ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ ಹಿನ್ನೆಲೆಯಲ್ಲಿ ಅವರಿಂದ ತೆರವಾದ ಉಪಾಧ್ಯಕ್ಷ ಸ್ಥಾನಕ್ಕೆ ಗ್ರಾಪಂ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಸರಸ್ವತಿ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸಿಡಿಪಿಓ ಗೋವಿಂದ್ ಘೋಷಿಸಿದರು. ನೂತನ ಉಪಾಧ್ಯಕ್ಷೆ ಆಯ್ಕೆಯಾಗುತ್ತಿದ್ದಂತೆ ಗ್ರಾಪಂ ಮುಂದೆ ಜಮಾಯಿಸಿದ್ದ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ಚುನಾವಣೆ ಸಭೆಯಲ್ಲಿ ಅಧ್ಯಕ್ಷ ಕೆ.ಪಿ.ರವಿಪ್ರಸಾದ್, ನಿಕಟಪೂರ್ವ ಉಪಾಧ್ಯಕ್ಷೆ ಯಶೋಧ, ಸದಸ್ಯರಾದ ಗೀತಾ, ಕೆ.ಟಿ.ನಂಜುಂಡಸ್ವಾಮಿ, ಮಹದೇವಮ್ಮ, ಮಹೇಶ್, ನಂಜುಂಡೇಗೌಡ, ಸಿದ್ದಮ್ಮ, ಶಾಂತರಾಜು, ಎಂ.ಕುಮಾರಸ್ವಾಮಿ, ಲಕ್ಷ್ಮಮ್ಮ ಹೆಚ್.ಬಿ.ಶೀಲಾ, ನಾಗೇಶ್, ಮೀನಾಕ್ಷಿ ಹಾಜರಿದ್ದು ಉಪಾಧ್ಯಕ್ಷರ ಆಯ್ಕೆಗೆ ಸಮ್ಮತಿ ಸೂಚಿಸಿದರೆ, ಆರ್.ಎಸ್.ರೂಪ, ಮಂಗಳಮ್ಮ ಗೈರಾಗಿದ್ದರು.

ಡೈರಿ ಅಧ್ಯಕ್ಷ ಕೆ.ಎನ್.ಕುಮಾರ್, ಗ್ರಾಪಂ ಮಾಜಿ ಅಧ್ಯಕ್ಷ ಸೋಮಣ್ಣ, ಮಹದೇವ ಸ್ವಾಮಿ, ಮಾಜಿ ಸದಸ್ಯೆ ಶಿವಮ್ಮ, ಆರ್.ಶಂಕರ್, ರಾಜೇಂದ್ರ, ಶಿವಮೂರ್ತಿ, ಮಹದೇವಯ್ಯ, ಕೆ.ಎಂ.ಮಹದೇವಸ್ವಾಮಿ, ಹೋಟೆಲ್ ರವಿ, ಪಿ.ಮಹದೇವಸ್ವಾಮಿ, ನಾಗೇಶ್ ದಾಳ, ಮಂಟೇಸ್ವಾಮಿ, ಗೂಳಿ ಮಹದೇವ, ಸಿದ್ದರಾಜು, ಚಿಕ್ಕರಾಚ, ಮಾಧು, ರಾಜಮಣಿ, ಪಿಡಿಓ ಶ್ರೀನಿವಾಸಮೂರ್ತಿ, ಡೈರಿ ಗುರುಮೂರ್ತಿ ಹಾಜರಿದ್ದರು.

ನಾಳೆ ದಾವಣಗೆರೆಯಲ್ಲಿ ವಿಶ್ವ ಆದಿವಾಸಿ ದಿನಾಚರಣೆ



ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ಆದಿವಾಸಿ ರಕ್ಷಣಾ ಪರಿಷತ್ ಜಿಲ್ಲಾಧ್ಯಕ್ಷ ಜಿ.ಸ್ವಾಮಿ ಮಾತನಾಡಿದರು.

ಹೆಚ್.ಡಿ.ಕೋಟೆ, ಆ.7– ಕರ್ನಾಟಕ ಆದಿವಾಸಿ ರಕ್ಷಣಾ ಪರಿಷತ್ ವತಿಯಿಂದ ಆ.9ರಂದು ದಾವಣಗೆರೆಯಲ್ಲಿ 30ನೇ ವಿಶ್ವ ಆದಿವಾಸಿ ದಿನಾಚರಣೆ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಆದಿವಾಸಿ ರಕ್ಷಣಾ ಪರಿಷತ್ ಜಿಲ್ಲಾಧ್ಯಕ್ಷ ಜಿ.ಸ್ವಾಮಿ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಶ್ವ ಆದಿವಾಸಿ ದಿನಾಚರಣೆ ದಾವಣಗೆರೆಯ ಮಲ್ಲಿಕಾರ್ಜುನ ಕಲ್ಯಾಣ ಮಂಟಪದಲ್ಲಿ ನಡೆಯಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ತಾಲೂಕಿನ ಹಾಗೂ ಜಿಲ್ಲೆಯ ಆದಿವಾಸಿಗಳು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ರಾಯಚೂರು ದೇವದುರ್ಗ ತಾಲೂಕಿನ ಕಾಗಿನೆಲೆ ಮಹಾಸಂಸ್ಥಾನ ಕನಕಗುರು ಪೀಠದ ಶ್ರೀಸಿದ್ದರಾಮ ಸ್ವಾಮೀಜಿ, ಚಿತ್ರದುರ್ಗದ ಮೇದ ಕೇತೇಶ್ವರ ಗುರು ಪೀಠದ ಪೀಠಾಧ್ಯಕ್ಷ ಇಮ್ಮಡಿ ಬಸವ ಮೇದಾರ ಕೇತೇಶ್ವರ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದು, ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಶಾಸಕ ಶಾಮನೂರು ಶಿವಶಂಕರಪ್ಪ ಸಂಸದೆ ಡಾ:ಪ್ರಭ, ಎಂಎಲ್‌ಸಿ ಶಾಂತರಾಮ ಸಿದ್ದಿ ಸೇರಿದಂತೆ ಇನ್ನಿತರರು ಭಾಗವಹಿಸಲಿದ್ದಾರೆ.

ಇದೇ ವೇಳೆ ಪಿ.ಎಚ್‌ಡಿ ಪಡೆದ 24 ಮಂದಿ ಆದಿ ವಾಸಿಗಳಿಗೆ ಆದಿವಾಸಿ ಸಿರಿ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಪದ್ಮಶ್ರೀ ಪುರಸ್ಕೃತ ಮೊತ್ತ ಹಾಡಿಯ ಸೋಮಣ್ಣ, ವಕೀಲ ಡಾ.ಜೆ.ಎಸ್. ಮಧು ಕುಮಾರ್, ಹಂಪಿ ವಿಶ್ವ ವಿದ್ಯಾನಿಲಯದ ಬುಡಕಟ್ಟು ಸಂಶೋಧನಾ ಮುಖ್ಯಸ್ಥ ಡಾ.ಕೆ.ಎನ್.ಮೇಸ್ತ್ರಿ ಅವರನ್ನು ಅಭಿನಂದಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ಆದಿವಾಸಿ ರಕ್ಷಣಾ ಪರಿಷತ್ ರಾಜ್ಯ ಸಂಘಟನಾ ಕಾರ್ಯದರ್ಶಿ ಶಿವರಾಜು, ತಾಲ್ಲೂಕು ಅಧ್ಯಕ್ಷ ಕಾಳಪ್ಪ, ಮಹಿಳಾ ಘಟಕದ ತಾಲೂಕು ಅಧ್ಯಕ್ಷೆ ನಿಂಗಮ್ಮ, ನಿರ್ದೇಶಕ ಬಸವರಾಜು ಇನ್ನಿತರರಿದ್ದರು.

ಆಲನಹಳ್ಳಿಯಲ್ಲಿ 2 ಮೇಕೆಗಳು ಕಳವು

ಬೈಲಕುಪ್ಪೆ, ಆ.7– ಎರಡು ಮೇಕೆಗಳನ್ನು ಕಳ್ಳತನ ಮಾಡಿರುವ ಘಟನೆ ಪಿರಿಯಾಪಟ್ಟಣ ತಾಲೂಕಿನ ಆಲನಹಳ್ಳಿಯಲ್ಲಿ ನಡೆದಿದೆ.

ದೇವರಿಗೆ ಸಮರ್ಪಿಸಲೆಂದು ಕಳೆದ 3 ವರ್ಷಗಳಿಂದ ದೇವರ ಹೆಸರಿನಲ್ಲಿ ಮೇಕೆಗಳನ್ನು ಬಿಡಲಾಗಿತ್ತು. ಆದರೆ ಕಳ್ಳರು ಮೇಕೆಗಳನ್ನು ಕದ್ದೊಯ್ದಿದ್ದಾರೆ ಎಂದು ಆಲನಹಳ್ಳಿ ಗ್ರಾಮಸ್ಥರು ಬೈಲಕುಪ್ಪೆ ಠಾಣೆಗೆ ದೂರು ನೀಡಿದ್ದಾರೆ.

ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜುಗೆ ಅಭಿನಂದನೆ



ಮೈಮುಲ್ ನೂತನ ಅಧ್ಯಕ್ಷ ಆರ್.ಚೆಲುವರಾಜು ಅವರನ್ನು ಹಳೆ ಕೆಂಪಯ್ಯನಹುಂಡಿ ಬಿಜೆಪಿ ಯುವ ಮುಖಂಡ ಅಂದಾನಿಗೌಡ ಅಭಿನಂದಿಸಿದರು. ಈ ವೇಳೆ ಮುಖಂಡರಾದ ರವಿ, ಕೀರ್ತಿ, ಶಿವು, ಹರ್ಷ, ವಿನೋದ ಇತರರಿದ್ದರು.

ಒಳ ಮೀಸಲಾತಿ ಸಂಬಂಧ ಸುಪ್ರೀಂ ತೀರ್ಪು ಸ್ವಾಗತಾರ್ಹ



ಸುದ್ದಿಗೋಷ್ಠಿಯಲ್ಲಿ ಸಿ.ಜಿ.ರವಿ ಮಾತನಾಡಿದರು.

ಪಿರಿಯಾಪಟ್ಟಣ, ಆ.7– ಪರಿಶಿಷ್ಟ ಜಾತಿ ಮತ್ತು ವರ್ಗಗಳ ಒಳ ಮೀಸಲಾತಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ತೀರ್ಪು ಸ್ವಾಗತಾರ್ಹ ಎಂದು ಆದಿ ಜಾಂಬವ ಮಾದಿಗ ಕ್ಷೇಮಾಭಿವೃದ್ಧಿ ಸಮಿತಿ ತಾಲೂಕು ಅಧ್ಯಕ್ಷ ಸಿ.ಜಿ.ರವಿ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಪ್ರೀಂ ಕೋರ್ಟ್‌ನ 7 ಸದಸ್ಯರ ಪೀಠವು ಒಳ ಮೀಸಲಾತಿ ನೀಡುವಂತೆ ಐತಿಹಾಸಿಕ ತೀರ್ಪು ನೀಡಿರುವುದು ಸ್ವಾಗತಾರ್ಹ. ಹೀಗಾಗಿ ಸರ್ಕಾರ ಶೀಘ್ರ ಪರಿಶಿಷ್ಟ ಜಾತಿ ಮತ್ತು ವರ್ಗಗಳಿಗೆ ಒಳ ಮೀಸಲಾತಿ ಜಾರಿಗೊಳಿಸಬೇಕು ಎಂದು ಮನವಿ ಮಾಡಿದರು.

ಸಂಘದ ಗೌರವಾಧ್ಯಕ್ಷ ಶಿವಣ್ಣ ಮಾತನಾಡಿ, ಮಾಜಿ ಸಿಎಂ ಎಸ್.ಎಂ.ಕೃಷ್ಣ ಅವರು ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗ ರಚಿಸಿದ್ದರು. ನಂತರ ಬಂದ ಮುಖ್ಯಮಂತ್ರಿಗಳು ಈ ಆಯೋಗದ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದರು. ಅದರಂತೆ ಇಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ಒಳ ಮೀಸಲಾತಿ ವರ್ಗೀಕರಣಕ್ಕೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದರು. ಇದರೊಂದಿಗೆ ಮಾದಿಗ ಸಮುದಾಯದ ಸತತ ಹೋರಾಟದ ಫಲವಾಗಿ ಸುಪ್ರೀಂಕೋರ್ಟ್ ಇಂದು ಒಳ ಮೀಸಲಾತಿ ನೀಡಬಹುದು ಎಂದು ಆದೇಶ ನೀಡಿದೆ. ರಾಜ್ಯ ಸರ್ಕಾರ ಕೂಟಲೇ ಮೀಸಲಾತಿ ವರ್ಗೀಕರಣ ಮಾಡಿ ನೈಜ ಸಮಾನತೆ ಕಾಪಾಡಬೇಕು ಎಂದು ಒತ್ತಾಯಿಸಿದರು.

ತಾಪಂ ಮಾಜಿ ಸದಸ್ಯ ಆರ್.ಸಿ. ಚಂದ್ರ ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಸಂಘದ ಕಾನೂನು ಸಲಹೆಗಾರ ರಾಜಣ್ಣ, ಉಪಾಧ್ಯಕ್ಷ ಕುಮಾರ್, ಕಾರ್ಯದರ್ಶಿ ರಮೇಶ್, ಖಜಾಂಚಿ ಜಯಸ್ವಾಮಿ, ಮುಖಂಡರಾದ ನಾರಾಯಣ, ವಿಷ್ಣು, ಲೋಕೇಶ್, ಸೋಮಣ್ಣ ಹಾಜರಿದ್ದರು.

ಬಿಜೆಪಿ, ಜೆಡಿಎಸ್‌ನವರು ತಮ್ಮ ಹಗರಣಗಳ ಬಗ್ಗೆ ಮಾತನಾಡಲಿ



ಸಭೆಯಲ್ಲಿ ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಮಾತನಾಡಿದರು.

ತಿ.ನರಸೀಪುರ, ಆ.7– ಸಿಎಂ ಸಿದ್ದರಾಮಯ್ಯ ಮೇಲೆ ಬಿಜೆಪಿ ಹಾಗೂ ಜೆಡಿಎಸ್ ಮಾಡುತ್ತಿರುವ ಆರೋಪಗಳು ನಿರಾಧಾರಾವಾಗಿದ್ದು, ಬಿಜೆಪಿ, ಜೆಡಿಎಸ್ ನಾಯಕರು ತಮ್ಮ ಕುಟುಂಬದ ಮೇಲಿರುವ ಹಗರಣಗಳ ಬಗ್ಗೆ ಮಾತನಾಡಲಿ ಎಂದು ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ತಿಳಿಸಿದರು.

ಮೈಸೂರಿನಲ್ಲಿ ಆ.9ರಂದು ಹಮ್ಮಿಕೊಳ್ಳಲಾಗಿರುವ ಸಿದ್ದರಾಮೋತ್ಸವದ ಹಿನ್ನೆಲೆಯಲ್ಲಿ ಪಟ್ಟಣದ ಲೋಕೋಪಯೋಗಿ ಅತಿಥಿ ಗೃಹದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಸಹೋದರ ಹೆಚ್.ಡಿ.ರೇವಣ್ಣ ಅವರ ಇಡೀ ಕುಟುಂಬದವರ ಮೇಲೆ ಹಲವು ಗಂಭೀರ ಪ್ರಕರಣ ದಾಖಲಾಗಿ ಎಲ್ಲರೂ ಜೈಲಿಗೆ ಹೋಗಿ ಬಂದಿದ್ದಾರೆ. ಹಾಗಿದ್ದರೂ ಅವರು ಯಾವುದೇ ಅವ್ಯವಹಾರ ನಡೆಸದೇ ಪಾರದರ್ಶಕ ಆಡಳಿತ ನಡೆಸುತ್ತಿರುವ ಸಿದ್ದರಾಮಯ್ಯ ಮೇಲೆ ದ್ವೇಷದ ರಾಜಕಾರಣಕ್ಕೆ ಮುಂದಾಗಿರುವುದು ಸರಿಯಲ್ಲ. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ವೇಳೆ ಮೈಸೂರು ಮುಡಾದಲ್ಲಿ ನೂರಾರು ಕೋಟಿ ಆಸ್ತಿ ಲೂಟಿ ಮಾಡಲಾಗಿದೆ. ಅದನ್ನೆಲ್ಲಾ ಬೆಳಕಿಗೆ ತರದೇ ಕಾನೂನಾತ್ಮವಾಗಿ ತಮ್ಮ ನಿವೇಶನಕ್ಕೆ ಬದಲಿ ನಿವೇಶನ ಪಡೆದ ಸಿದ್ದರಾಮಯ್ಯರ ಪತ್ನಿ ಮೇಲೆ ಆರೋಪ ಮಾಡುತ್ತಿರುವುದು ಹಾಸ್ಯಾಸ್ಪದ ಎಂದು ವ್ಯಂಗ್ಯವಾಡಿದರು.

ಆ.9ರಂದು ಮೈಸೂರಿನಲ್ಲಿ ಸಿದ್ದರಾಮೋತ್ಸವ ನಡೆಯಲಿದ್ದು, ವರುಣ ಹಾಗೂ ತಿ.ನರಸೀಪುರದಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು, ಅಭಿಮಾನಿಗಳು ಭಾಗವಹಿಸುವ ಮೂಲಕ ಸಿದ್ದರಾಮಯ್ಯರಿಗೆ ನೈತಿಕ ಬೆಂಬಲ ಕೊಡುವಂತೆ ಅವರು ಮನವಿ ಮಾಡಿದರು. ಪುರಸಭೆ ಮಾಜಿ ಅಧ್ಯಕ್ಷ ಎನ್.ಸೋಮು ಮಾತನಾಡಿ, ಬಿಜೆಪಿ ರಾಜ್ಯವನ್ನು ಕೊಳ್ಳೆ ಹೊಡೆದಿದ್ದಕ್ಕೆ ಇಂದು ಜನ ನಿಮ್ಮನ್ನು ಮನೆಯಲ್ಲಿ ಕೂರಿಸಿ, ಕಾಂಗ್ರೆಸ್‌ಗೆ ಅಧಿಕಾರ ಕೊಟ್ಟಿದ್ದಾರೆ. ಸಿಎಂ ಸಿದ್ದರಾಮಯ್ಯ ಅವರ ಪತ್ನಿಗೆ ಸೇರಿದ ಜಾಗವನ್ನು ಮುಡಾದವರೆ ಭೂಸ್ವಾಧೀನ ಮಾಡಿಕೊಂಡಿದ್ದಾರೆ. ಆದರೂ ವಿನಾಕಾರಣ ಸಿಎಂ ಹೆಸರನ್ನು ಈ ಪ್ರಕರಣದಲ್ಲಿ ತರಲಾಗುತ್ತಿದೆ. ರಾಜಭವನವನ್ನು ಬಿಜೆಪಿಗರು ಬಿಜೆಪಿ ಕಚೇರಿ ಮಾಡಿಕೊಂಡಿದ್ದಾರೆ. ಸಿದ್ದರಾಮಯ್ಯ ವಿರುದ್ಧ ಹುನ್ನಾರ ಮಾಡಿ ಅವರನ್ನು ಸಿಎಂ ಸ್ಥಾನದಿಂದ ಕೆಳಗಿಳಿಸಬೇಕು ಎಂದುಕೊಂಡಿದ್ದಾರೆ. ಅದಕ್ಕಾಗಿಯೇ ಈ ದೊಂಬರಾಟ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

> ಸಿಎಂ ಸಿದ್ದರಾಮಯ್ಯ ಸರ್ಕಾರಕ್ಕೆ ಕೆಟ್ಟ ಹೆಸರು ತರಬೇಕೆಂಬ ಹುನ್ನಾರ ಜೆಡಿಎಸ್, ಬಿಜೆಪಿ ನಾಯಕರಲ್ಲಿದೆ. ವಾಲ್ಮೀಕಿ ನಿಗಮದ ಹಗರಣದಲ್ಲಿ ಅಧಿಕಾರಿಗಳ ತಪ್ಪಿದೆ ಎಂದು ಅವರಿಗೆ ಗೊತ್ತಿದೆ. ಈಗ ಸುಮ್ಮನೆ ಮುಡಾ ವಿಚಾರದಲ್ಲಿ ಬಿಜೆಪಿ ಪಾದಯಾತ್ರೆ ಮಾಡುತ್ತಿದೆ. ಸಿಎಂ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಲು ಯಾರಿಂದಲೂ ಸಾಧ್ಯವಿಲ್ಲ. ಅವರೇ ಮತ್ತೊಂದು ಅವಧಿಗೆ ಸಿಎಂ ಆಗಿರುತ್ತಾರೆ.
> – ಎಸ್.ಮದನ್‌ರಾಜ್, ಪುರಸಭೆ ಮಾಜಿ ಅಧ್ಯಕ್ಷ.

ಈ ವೇಳೆ ಸಭೆಯಲ್ಲಿ ಪುರಸಭಾ ಮಾಜಿ ಅಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ, ಸದಸ್ಯರಾದ ತುಂಬಲ ಪ್ರಕಾಶ್, ಬಾದಾಮಿ ಮಂಜು, ಎಲ್. ಮಂಜುನಾಥ್, ಸಿದ್ದು, ಭೈರಾಪುರ ಗ್ರಾಪಂ ಮಾಜಿ ಅಧ್ಯಕ್ಷ ಕರಿಯಪ್ಪ, ಮಾಜಿ ಉಪಾಧ್ಯಕ್ಷ ಪುಟ್ಟು, ಸದಸ್ಯ ಕುಮಾರ್, ಹೇಮಂತ್ ಕುಮಾರ್, ಯಜಮಾನ ಕೃಷ್ಣನಾಯಕ, ಆಲ ಗೂಡು ನಾಗರಾಜು, ಘಟಕ ಮಹದೇವ, ಪುರಸಭೆ ಮಾಜಿ ಸದಸ್ಯರಾದ ರಾಘವೇಂದ್ರ, ಮಹದೇವ, ಗುರುಸ್ವಾಮಿ, ಲಿಂಗರಾಜು, ಮುಖಂಡರಾದ ಸ್ವಾಮಿ, ಶ್ರೀಕಂಠ, ಮಾದೇಶ್, ಕುಮಾರ, ಕೂಸಪ್ಪ ಮತ್ತಿತರರಿದ್ದರು.

ಪೌಷ್ಟಿಕ ಆಹಾರದಿಂದ ತಾಯಿ, ಮಗುವಿನ ಆರೋಗ್ಯ ವೃದ್ಧಿ

ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞ ಡಾ.ಶಂಕರ್



ವಿಶ್ವ ಸ್ತನ್ಯಪಾನ ಸಪ್ತಾಹದಲ್ಲಿ ಮಕ್ಕಳ ತಜ್ಞ ಡಾ.ಅರುಣ್ ಕುಮಾರ್ ಮಾತನಾಡಿದರು.

ಸರಗೂರು, ಆ.7– ಪೌಷ್ಟಿಕ ಆಹಾರದಿಂದ ತಾಯಿ ಮತ್ತು ಮಗುವಿನ ಆರೋಗ್ಯ ವೃದ್ಧಿಯಾಗಲಿದೆ ಎಂದು ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞ ಡಾ.ಹೆಚ್.ಕೆ.ಶಂಕರ್ ತಿಳಿಸಿದರು.

ಪಟ್ಟಣದ ವಿವೇಕಾನಂದ ಸ್ಮಾರಕ ಆಸ್ಪತ್ರೆಯಲ್ಲಿ ನಡೆದ ವಿಶ್ವ ಸ್ತನ್ಯಪಾನ ಸಪ್ತಾಹದಲ್ಲಿ ಮಾತನಾಡಿದ ಅವರು, ಎದೆ ಹಾಲಿನ ಮಹತ್ವದ ಕುರಿತು ವಿವೇಕಾನಂದ ಸ್ಮಾರಕ ಆಸ್ಪತ್ರೆಯು ಸಮುದಾಯ ಆಧಾರಿತ ಹತ್ತು ಹಲವು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ಆರೋಗ್ಯವಂತ ಸಮಾಜ ನಿರ್ಮಿಸಲು ಶ್ರಮಿಸುತ್ತಿದೆ. ಗುಣಮಟ್ಟದ ಪೌಷ್ಟಿಕ ಆಹಾರ ಸೇವಿಸುವುದರಿಂದ ತಾಯಿಯಲ್ಲಿ ಹಾಲಿನ ಉತ್ಪಾದನೆ ಹೆಚ್ಚುತ್ತದೆ. ಹುಟ್ಟಿದ ಅರ್ಧಗಂಟೆಯೊಳಗೆ ಮಗುವಿಗೆ ಹಾಲುಣಿಸುವುದು ಗಿಣ್ಣಾಲು ಮಗುವಿಗೆ ದೊರೆತಂತಾಗುತ್ತದೆ. ಕನಿಷ್ಟ 6 ತಿಂಗಳವರೆಗೆ ತಾಯಿ ಮಗುವಿಗೆ ಎದೆ ಹಾಲನ್ನು ಕುಡಿಸಿದರೆ ತಾಯಿ ಮತ್ತು ಮಗುವಿನ ಬಾಂಧವ್ಯ ವೃದ್ಧಿಯಾಗಲಿದೆ ಎಂದರು.

ಮಕ್ಕಳ ತಜ್ಞ ಡಾ.ಅರುಣ್ ಕುಮಾರ್ ಮಾತನಾಡಿ, ಮಗುವಿಗೆ ಎದೆ ಹಾಲುಣಿಸುವಂತೆ ತಾಯಿಗೆ ಅವರ ಪೋಷಕರೆ ಪ್ರೇರಣೆ ನೀಡಬೇಕು. ಇದು ಎಲ್ಲರ ಹೊಣೆಯಾಗಬೇಕು. ಮಗುವಿಗೆ ಹಾಲುಣಿಸುವುದು ಆಯ್ಕೆಯಲ್ಲ ಜವಾಬ್ದಾರಿ ಎಂಬುದು ತಾಯಿಗೆ ಅರಿವಾಗಬೇಕು. ತಾಯಿ ಎದೆ ಹಾಲು ಕುಡಿಸುವುದರಿಂದ ಮಗುವಿನ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ ಎಂದರು.

ಇದೇ ವೇಳೆ ಆಸ್ಪತ್ರೆ ವತಿಯಿಂದ ಬೇಬಿ ಕಿಟ್ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಸಮುದಾಯದ ತಾಯಂದಿರ ಪ್ರತಿನಿಧಿಯಾದ ಅನುಷ, ಆಸ್ಪತ್ರೆಯ ವ್ಯವಸ್ಥಾಪಕ ಸಂಧ್ಯಾ, ಬಂಗಾರಶೆಟ್ಟಿ, ಗೋಪಾಲ ಕೃಷ್ಣ, ಪ್ರತಾಪ್, ಪುಟ್ಟಮ್ಮ, ಸುಧಾರಾಣಿ, ಪ್ರಮೋದ್, ಮಂಜುಳ, ಪದ್ಮ, ಯೋಗೇಶ್ವರಿ, ಕೃಷ್ಣಕುಮಾರ್, ಲತಾ, ವಸಂತಬಾಯಿ, ಶುಭಾ ಭಾಗವಹಿಸಿದ್ದರು.

ದೊಡ್ಡಹಾಲೇಗೌಡ ನಿಧನ



ಸರಗೂರು, ಆ.7– ಮೈಸೂರು ಜಿಲ್ಲಾ ಕುರುಬರ ಸಂಘದ ನಿರ್ದೇಶಕ ಶಿವರಾಜು ಅವರ ದೊಡ್ಡಪ್ಪ ದೊಡ್ಡಹಾಲೇಗೌಡ (75) ಮಂಗಳವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಕುಂದೂರು ದಡದಹಳ್ಳಿ ಗ್ರಾಮದ ಮೃತರ ಜಮೀನಿನಲ್ಲಿ ಬುಧವಾರ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಮುಲ್ ಅಧ್ಯಕ್ಷರಾಗಿ ಆರ್.ಚೆಲುವರಾಜು ಅವಿರೋಧ ಆಯ್ಕೆ

ಮೈಸೂರು,ಆ.7(ಪಿಎಂ)– ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ (ಮೈಮುಲ್) ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಆರ್.ಚೆಲುವರಾಜು ಅವಿರೋಧವಾಗಿ ಆಯ್ಕೆಯಾಗಿದ್ದು, ಜೆಡಿಎಸ್ ತೆಕ್ಕೆಯಲ್ಲಿದ್ದ ಮೈಮುಲ್ ಅಧಿಕಾರದ ಚುಕ್ಕಾಣಿ ಈಗ ಕಾಂಗ್ರೆಸ್ ಮಡಿಲು ಸೇರಿದೆ.

ಪಿ.ಎಂ.ಪ್ರಸನ್ನ ಅವರ ರಾಜೀನಾಮೆಯಿಂದ ಅಧ್ಯಕ್ಷ ಸ್ಥಾನ ತೆರವಾಗಿತ್ತು. ಮೈಸೂರಿನ ಬನ್ನೂರು ರಸ್ತೆಯಲ್ಲಿರುವ ಮೈಮುಲ್‌ನ ಮೆಗಾ ಡೈರಿ ಆವರಣದಲ್ಲಿ ಬುಧವಾರ ಅಧ್ಯಕ್ಷ ಸ್ಥಾನಕ್ಕಾಗಿ ಚುನಾವಣೆ ನಿಗದಿಯಾಗಿತ್ತು. ಅಂತೆಯೇ ಬೆಳಗ್ಗೆ 10ರಿಂದ ಮಧ್ಯಾಹ್ನ 12ರವರೆಗೆ ನಾಮಪತ್ರ ಸಲ್ಲಿಕೆಗೆ ಅವಕಾಶ ಕಲ್ಪಿಸಲಾಗಿತ್ತು.

ಆದರೆ ಮೈಸೂರು ಉಪವಿಭಾಗದ ಟಿ.ನರಸೀಪುರ ಮತ ಕ್ಷೇತ್ರದಿಂದ ಮೈಮುಲ್ ನಿರ್ದೇಶಕರಾಗಿ ಆಯ್ಕೆಯಾಗಿರುವ ಆರ್.ಚೆಲುವರಾಜು ಹೊರತಾಗಿ ಉಳಿದ ಯಾವುದೇ ನಿರ್ದೇಶಕರು ನಾಮಪತ್ರ ಸಲ್ಲಿಸಲಿಲ್ಲ. ಈ ಹಿನ್ನೆಲೆಯಲ್ಲಿ ಚೆಲುವರಾಜು ಅವರ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿಯಾಗಿದ್ದ ಮೈಸೂರು ಉಪವಿಭಾಗಾಧಿಕಾರಿ ಕೆ.ಆರ್.ರಕ್ಷಿತ್ ಅವರು ಘೋಷಣೆ ಮಾಡಿದರು. ನೂತನ ಅಧ್ಯಕ್ಷರ ಅಧಿಕಾರಾವಧಿ ಇನ್ನು 22 ತಿಂಗಳು ಇರಲಿದೆ.

ಹುಣಸೂರು ಉಪ ವಿಭಾಗದ ಪಿರಿಯಾಪಟ್ಟಣ ಮತ ಕ್ಷೇತ್ರದಿಂದ ನಿರ್ದೇಶಕರಾಗಿ ಆಯ್ಕೆಯಾಗಿದ್ದ ಪಿ.ಎಂ. ಪ್ರಸನ್ನ ಮೈಮುಲ್ ಅಧ್ಯಕ್ಷರಾಗಿ ಅವಿರೋಧ ಆಯ್ಕೆಯಾಗಿದ್ದರು. ಆದರೆ ಪಶುಸಂಗೋಪನಾ ಸಚಿವ ಕೆ. ವೆಂಕಟೇಶ್ ಅವರು ಕೆಲಸ ಮಾಡಲು ಅವಕಾಶ ನೀಡುತ್ತಿಲ್ಲವೆಂದು ಆರೋಪಿಸಿ ಕಳೆದ ಜುಲೈನಲ್ಲಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು.



ಮೈಮುಲ್ ಅಧ್ಯಕ್ಷರಾಗಿ ಅವಿರೋಧ ಆಯ್ಕೆಯಾದ ಆರ್.ಚೆಲುವರಾಜು ಅವರಿಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಸುರೇಶ್ ನಾಯಕ್ ಹೂಗುಚ್ಛ ನೀಡಿ ಅಭಿನಂದಿಸಿದರು. ಮೈಮುಲ್ ನಿರ್ದೇಶಕರಾದ ಮಲ್ಲಿಕಾ ರವಿಕುಮಾರ್, ನೀಲಾಂಬಿಕೆ ಮಹೇಶ್, ಆಡಳಿತ ಮತ್ತು ಖರೀದಿ ಘಟಕದ ವ್ಯವಸ್ಥಾಪಕ ಜಗದೀಶ್ ಮತ್ತಿತರರು ಚಿತ್ರದಲ್ಲಿದ್ದಾರೆ.

ಪ್ರಸ್ತುತ ಕಾಂಗ್ರೆಸ್ ಬೆಂಬಲಿತ ನಿರ್ದೇಶಕರಾದ ಈರೇಗೌಡ, ಗುರುಸ್ವಾಮಿ (ನಾಮನಿರ್ದೇಶಿತ ನಿರ್ದೇಶಕರು) ಸಹ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿದ್ದರು. ಆದರೆ ವರಿಷ್ಠರ ನಿರ್ದೇಶನದಂತೆ ಕಣದಿಂದ ಹಿಂದೆ ಸರಿದರು ಎನ್ನಲಾಗಿದೆ.

ಮೈಸೂರಿನಲ್ಲೇ ಇದ್ದ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಮೈಮುಲ್ ಅಧ್ಯಕ್ಷ ಸ್ಥಾನದ ಚುನಾವಣೆ ಸಂಬಂಧ ಮಂಗಳವಾರ ರಾತ್ರಿ ಮೂವರು ಆಕಾಂಕ್ಷಿಗಳೂ ಸೇರಿದಂತೆ ಉಳಿದ ಮೈಮುಲ್ ನಿರ್ದೇಶಕರು, ಶಾಸಕರು, ಮಾಜಿ ಶಾಸಕರು ಮತ್ತು ಪಕ್ಷದ ಮುಖಂಡರೊಂದಿಗೆ ಸಭೆ ನಡೆಸಿದ್ದರು ಎನ್ನಲಾಗಿದೆ.

ಈ ವೇಳೆ ಮೂವರು ಆಕಾಂಕ್ಷಿಗಳೂ ಅಧ್ಯಕ್ಷ ಸ್ಥಾನಕ್ಕೆ ಅವಕಾಶ ಕಲ್ಪಿಸುವಂತೆ ಮನವಿ ಮಾಡಿದ್ದರು ಎಂದು ಹೇಳಲಾಗಿದೆ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಚೆಲುವರಾಜು ಅವರ ಹೆಸರನ್ನೆ ಅಂತಿಮಗೊಳಿಸಿದ ಕಾರಣ ಉಳಿದಿಬ್ಬರು ಕಣದಿಂದ ಹಿಂದೆ ಸರಿದು ಚೆಲುವರಾಜು ಅವರ ಅವಿರೋಧ ಆಯ್ಕೆಗೆ ಸಹಕರಿಸಿದರು ಎಂದು ಹೇಳಲಾಗಿದೆ.

ಮೈಮುಲ್ ಆಡಳಿತ ಮಂಡಳಿಯಲ್ಲಿ 15 ಮಂದಿ ಚುನಾಯಿತ ನಿರ್ದೇಶಕರಿದ್ದಾರೆ. ಬದಲಾದ ರಾಜಕೀಯ ಸನ್ನಿವೇಶದ ಹಿನ್ನೆಲೆಯಲ್ಲಿ ಈ ಪೈಕಿ ಯಾರು ಯಾವ ಪಕ್ಷದಲ್ಲಿ ಪ್ರಸ್ತುತ ಗುರುತಿಸಿಕೊಂಡಿದ್ದಾರೆ ಎಂಬುದು ಗೊಂದಲಕಾರಿ ಎಂದು ಹೇಳಲಾಗಿದೆ.

'ಮೈಮುಲ್ ಅಧ್ಯಕ್ಷನಾಗಲು ಅವಕಾಶ ಮಾಡಿಕೊಟ್ಟ ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ, ಪಶು ಸಂಗೋಪಾಲನ ಸಚಿವ ಕೆ.ವೆಂಕಟೇಶ್, ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ, ಚಾಮರಾಜನಗರ ಸಂಸದ ಸುನೀಲ್ ಬೋಸ್ ಸೇರಿದಂತೆ ಇಡೀ ಮೈಸೂರು ಜಿಲ್ಲೆಯ ಪಕ್ಷದ ಶಾಸಕರು ಹಾಗೂ ಮಾಜಿ ಶಾಸಕರಿಗೆ ಧನ್ಯವಾದ ಅರ್ಪಿಸುತ್ತೇನೆ. ಅವಿರೋಧ ಆಯ್ಕೆಗೆ ಸಹಕರಿಸಿದ ಜೆಡಿಎಸ್ ಮತ್ತು ಬಿಜೆಪಿಯ ಪಕ್ಷಗಳ ಬೆಂಬಲಿತ ನಿರ್ದೇಶಕರಿಗೂ ಕೃತಜ್ಞತೆ ಸಲ್ಲಿಸಬಯಸುತ್ತೇನೆ' ಎಂದು ಮೈಮುಲ್ ನೂತನ ಅಧ್ಯಕ್ಷ ಆರ್. ಚೆಲುವರಾಜು ತಿಳಿಸಿದ್ದಾರೆ.

> "ಮೈಮುಲ್ ರೈತರ ಸಂಸ್ಥೆಯಾಗಿದ್ದು, ಇಲ್ಲಿ ಎಲ್ಲಿಯೂ ಒಂದು ರೂಪಾಯಿ ಕೂಡ ಪೋಲಾಗದಂತೆ ನೋಡಿಕೊಳ್ಳಲಾಗುವುದು. ಸಂಸ್ಥೆಯ ಪ್ರಗತಿಗೆ ಹಾಗೂ ಹೈನುಗಾರಿಕೆ ನಂಬಿರುವ ರೈತರ ಶ್ರೇಯೋಭಿವೃದ್ಧಿಗೆ ಅನುಕೂಲವಾಗುವಂತಹ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಒಕ್ಕೂಟವನ್ನು ಇಡೀ ಕರ್ನಾಟಕದಲ್ಲಿ ಮಾದರಿಯಾಗಿಸುವ ಗುರಿ ಹೊಂದಿದ್ದೇನೆ.
>
> –ಆರ್.ಚೆಲುವರಾಜು, ಅಧ್ಯಕ್ಷರು, ಮೈಮುಲ್

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಪೇಚಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ರಾಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಔರಾನ್ ಮೇ ಕಹಾನ್ ದಮ್ ಥಾ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಕಲ್ಕಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಫ್ಯಾಮಿಲಿ ಡ್ರಾಮಾ (ಕ)	4 ಪ್ರದರ್ಶನಗಳು
ರಾಜಕಮಲ್	
ಬೋಟ್ (ತ)	4 ಪ್ರದರ್ಶನಗಳು
ಸಂಗಂ	
ಪೇಚಿ (ತ)	4 ಪ್ರದರ್ಶನಗಳು
ಲಿಡೋ	
ಹೆಬ್ಬುಲಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಪೇಚಿ (ತ)	4 ಪ್ರದರ್ಶನಗಳು
ಪ್ರಭಾ	
ಅಡವಿಕಟ್ಟೆ (ಕ)	2 ಪ್ರದರ್ಶನಗಳು
ಇಷ್ಕ್ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ರಾಯನ್ (ತ): ಬೆ.10.40ಕ್ಕೆ, ಮ.1.30ಕ್ಕೆ, ರಾ.10ಕ್ಕೆ, ಔರಾನ್ ಮೇ ಕಹಾನ್ ದಮ್ ಥಾ (ಹಿಂ): ಸಂ.4.20ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 2	ಮರ್ಫ್ಯು ಪಿಡಿಕಥಾ ಮನಿಥನ್ (ತ): ಮ.1ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಮ.3.35ಕ್ಕೆ, ಕಲ್ಕಿ 2898 ಎಡಿ (ಕ): ರಾ.7ಕ್ಕೆ, ಔರಾನ್ ಮೇ ಕಹಾನ್ ದಮ್ ಥಾ (ಹಿಂ): ಬೆ.10.25ಕ್ಕೆ.
ಸ್ಕ್ರೀನ್ 3	ಇಷ್ಕ್ (ಕ): ಬೆ.10.45ಕ್ಕೆ, ಹೆಬ್ಬುಲಿ (ಕ): ಮ.1.40ಕ್ಕೆ, ಬಡ್ಡಿ (ತೆ): ಸಂ.4.30ಕ್ಕೆ, ಶಿವಂ ಭಜೆ (ತೆ): ರಾ.7.20ಕ್ಕೆ, ರೂಪಾಂತರ (ಕ): ರಾ.9.55ಕ್ಕೆ.
ಸ್ಕ್ರೀನ್ 4	ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಬೆ.10.45ಕ್ಕೆ, ಮ.1.30ಕ್ಕೆ, ಸಂ.4.15ಕ್ಕೆ, ರಾ.7ಕ್ಕೆ, ರಾ.9.45ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರೂಪಾಂತರ (ಕ): ಬೆ.10.35ಕ್ಕೆ, ಲವ್ ಲಿ (ಕ): ಮ.1ಕ್ಕೆ, ಕೆಂಡ (ಕ): ಮ.3.50ಕ್ಕೆ, ಫ್ಯಾಮಿಲಿ ಡ್ರಾಮ (ಕ): ಸಂ.6.25ಕ್ಕೆ, ವಿದ್ಯಾರ್ಥಿ ವಿದ್ಯಾರ್ಥಿನಿಯರೆ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಬೆ.10.30ಕ್ಕೆ, ರಾ.7ಕ್ಕೆ, ರಾಯನ್ (ತ): ಮ.1.15ಕ್ಕೆ, ಸಂ.4.10ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಮ.1.25ಕ್ಕೆ, ಸಂ.4ಕ್ಕೆ, ರಾ.9.20ಕ್ಕೆ, ರಾಯನ್ (ತ): ಸಂ.6.30ಕ್ಕೆ.
ಸ್ಕ್ರೀನ್ 4	ರಾಯನ್ (ತ): ಬೆ.10.30ಕ್ಕೆ, ಕಲ್ಕಿ 2898 ಎಡಿ (ಕ): ಮ.1.15ಕ್ಕೆ, ರೂಪಾಂತರ (ಕ): ಸಂ.4.35ಕ್ಕೆ, ರಾ.9ಕ್ಕೆ, ರುದ್ರವೀಣ (ತೆ): ರಾ.7ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಅಧಿಕಾರಿಗಳು ಮೈಸೂರು ಅರಮನೆ ಜಾಗವನ್ನು ಬದಲಿಯಾಗಿ ಕೊಡ್ತಾರೆ, ಪಡೆದುಕೊಳ್ತೀರಾ...!

ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಟಾಂಗ್

ಮಂಡ್ಯ, ಆ.7(ಮೋಹನ್‌ರಾಜ್)– ತಮ್ಮ ಪತ್ನಿಗೆ ಮುಡಾ ಅಧಿಕಾರಿಗಳು ಬದಲಿ ನಿವೇಶನ ನೀಡಿದ್ದಾರೆ. ಅದನ್ನು ತೆಗೆದುಕೊಂಡಿದ್ದೇನೆ ಎನ್ನುವ ಸಿದ್ದರಾಮಯ್ಯನವರೇ ಹಾಗಾದರೆ ಅಧಿಕಾರಿಗಳು ಮೈಸೂರು ಅರಮನೆ ಜಾಗವನ್ನು ಬದಲಿಯಾಗಿ ಕೊಡ್ತಾರೆ, ಪಡೆದು ಕೊಳ್ತಿರಾ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಪ್ರಶ್ನಿಸಿದ್ದಾರೆ.



ಆರ್.ಅಶೋಕ್

ಬೆಂಗಳೂರಿನಿಂದ ಹೊರಟ ಮೈಸೂರು ಚಲೋ ಇಂದು ಇಲ್ಲಿನ ಜೆ.ಸಿ.ವೃತ್ತಕ್ಕೆ ಆಗಮಿಸಿತು. ಇಲ್ಲಿ ಬೃಹತ್ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯಗೆ 14 ನಿವೇಶನಗಳನ್ನು ನುಂಗುವ ದರಿದ್ರ ಏನು ಬಂದಿತ್ತು. ಈ ಬಗ್ಗೆ ಪ್ರಶ್ನೆ ಮಾಡಿದರೆ ನನ್ನ ಪತ್ನಿಗೆ ಅವರ ತವರು ಮನೆಯಿಂದ ಅರಿಶಿನ ಕುಂಕುಮಕ್ಕೆ ಜಮೀನು ಉಡುಗೊರೆ ಕೊಟ್ಟಿದ್ದರು. ಮುಡಾ ಅದನ್ನು ಬಳಸಿಕೊಂಡು ಪರ್ಯಾಯವಾಗಿ 14 ನಿವೇಶನ ಕೊಟ್ಟಿದೆ. ಅದನ್ನು ನಾನು ಪಡೆದುಕೊಂಡಿದ್ದೇನೆ ಎನ್ನುತ್ತಾರೆ. ಹಾಗಾದರೆ ಇನ್ನು ಕೆಲ ಅಧಿಕಾರಿಗಳು ಮೈಸೂರು ಅರಮನೆ ಜಾಗವನ್ನು ಬದಲಿಯಾಗಿ ಕೊಡುತ್ತಾರೆ ಪಡೆದುಕೊಳ್ಳುತ್ತೀರಾ ಎಂದು ವ್ಯಂಗ್ಯವಾಡಿದರು.

ಸಿದ್ದರಾಮಯ್ಯ ಪತ್ನಿ ಪಡೆದಿರುವ ಜಮೀನಿಗೆ 27 ಮಂದಿ ಹಕ್ಕುದಾರರಿದ್ದಾರೆ. ಅವರ ಸಹಿ ತೆಗೆದುಕೊಳ್ಳದೇ ಹೇಗೆ ಜಮೀನು ಪಡೆದಿದ್ದೀರಿ ಎಂದು ಪ್ರಶ್ನಿಸಿದ ಅವರು, ದಲಿತರಿಗೆ ಸೇರಿದ ಜಮೀನನ್ನು ಅಕ್ರಮವಾಗಿ ಪರಭಾರೆ ಮಾಡಿಕೊಂಡು ವಂಚನೆ ಎಸಗಲಾಗಿದೆ. ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ರಾಜ್ಯವನ್ನು ಲೂಟಿ ಹೊಡೆಯುತ್ತಿದ್ದಾರೆ ಎಂದು ಕಿಡಿಕಾರಿದರು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಹಗರಣಗಳು ನಡೆದಿವೆ. ಅವುಗಳನ್ನು ತನಿಖೆಗೊಳಪಡಿಸುತ್ತೇವೆ ಎನ್ನುವ ಸಿಎಂ ಸಿದ್ದರಾಮಯ್ಯ ಅವರೇ, ನಮ್ಮ ಸರ್ಕಾರ ಆಡಳಿತ ನಡೆಸುವಾಗ ನಾವು ಭ್ರಷ್ಟಾಚಾರ ಮಾಡಿದ್ದರೆ ಯಾಕೆ ಧ್ವನಿ ಎತ್ತಲಿಲ್ಲ. ಇದೀಗ ಅವರ ಮೇಲೆ ಅಪವಾದ ಬಂದ ಮೇಲೆ ನಮ್ಮ ಅವಧಿಯಲ್ಲಿ ಅಕ್ರಮ ನಡೆದಿದೆ. ಅವುಗಳನ್ನು ತನಿಖೆಗೊಳಪಡಿಸುತ್ತೇವೆ ಎಂದು ಜನರ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಸಿದ್ದರಾಮಯ್ಯ ರಾಜೀನಾಮೆಗಾಗಿ ನಮ್ಮ ಹೋರಾಟ ನಿರಂತರವಾಗಿರುತ್ತದೆ ಎಂದರು.

ಅಹಿಂದ ಹೆಸರಲ್ಲಿ ಅಧಿಕಾರಕ್ಕೆ: ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಮಾತನಾಡಿ, ಅಹಿಂದ ಹೆಸರೇಳಿಕೊಂಡು ಅಧಿಕಾರದ ಚುಕ್ಕಾಣಿ ಹಿಡಿದ ರಾಜ್ಯ ಕಾಂಗ್ರೆಸ್ ಸರ್ಕಾರ ವಾಲ್ಮೀಕಿ ನಿಗಮ ಹಾಗೂ ಮೈಸೂರು ಮುಡಾದಲ್ಲಿ ಕೋಟ್ಯಾಂತರ ರೂ. ಭ್ರಷ್ಟಾಚಾರ ಮಾಡಿ ಜನರಿಗೆ ವಂಚಿಸಿದೆ. ಸ್ವತಃ ಮುಖ್ಯಮಂತ್ರಿಗಳೇ ಹಗರಣದಲ್ಲಿ ಭಾಗಿಯಾಗಿರುವುದರಿಂದ ಈ ಕೂಡಲೇ ಅವರು ರಾಜೀನಾಮೆ ಕೊಡಬೇಕೆಂದು ಆಗ್ರಹಿಸಿದರು. ಈ ಭಂಡ ಸರ್ಕಾರದಿಂದ ಜನರಿಗೆ ಒಳಿತಾಗುವುದಿಲ್ಲ. ಹಗರಣಗಳನ್ನು ಮುಚ್ಚಿ ಹಾಕಲು ರಾಜ್ಯ ಸರ್ಕಾರ ಹುನ್ನಾರ ನಡೆಸುತ್ತಿದೆ. ಪೊಲೀಸರ ಮೇಲೆ ನಮಗೆ ನಂಬಿಕೆ ಇದೆಯೇ ಹೊರತು ಸರ್ಕಾರದ ಮೇಲೆ ನಂಬಿಕೆ ಇಲ್ಲ. ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಬೇಕೆಂಬ ಉದ್ದೇಶದಿಂದಲೇ ಈ ಪಾದಯಾತ್ರೆ ನಡೆಸುತ್ತಿದ್ದು, ಸಿದ್ದರಾಮಯ್ಯ ಅಧಿಕಾರದಿಂದ ಕೆಳಗೆ ಇಳಿಯುವವರೆಗೂ ಈ ಹೋರಾಟ ಮುಂದುವರೆಯಲಿದೆ ಎಂದು ಹೇಳಿದರು.

ದಲಿತರ ಹಣ ಲೂಟಿ: ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ಕಾಂಗ್ರೆಸ್ಸಿಗರು ಮಾತೆತ್ತಿದರೆ ದಲಿತರ ಪರ. ಬಿಜೆಪಿಯವರು ಸಂವಿಧಾನ ವಿರೋಧಿಗಳು ಎನ್ನುತ್ತಾರೆ. ಆದರೆ ಬಡ ದಲಿತರಿಗೆ ಮೀಸಲಿಟ್ಟ ವಾಲ್ಮೀಕಿ ನಿಗಮದ ಹಣವನ್ನು ಲೂಟಿ ಹೊಡೆದವರು ಯಾರು? ಯಾದಗಿರಿಯಲ್ಲಿ ದಲಿತ ಸಮುದಾಯಕ್ಕೆ ಸೇರಿದ ಪಿಎಸ್‌ಐ ಅನುಮಾನಾಸ್ಪದ ಸಾವಿಗೆ ಕಾರಣರಾಗಿರುವವರ್ಯಾರು? ಪಿಎಸ್‌ಐಯಿಂದ ವರ್ಗಾವಣೆಗೆ 30 ಲಕ್ಷ ಹಣ ಕೇಳಿದ್ದರಿಂದ ಅವರು ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹೀಗೆ ದಲಿತರನ್ನು ಹಿಂಸಿಸುತ್ತಿರುವ ರಾಜ್ಯ ಸರ್ಕಾರ ದಲಿತ ಪರ ಇದೆಯೇ ಎಂದು ಪ್ರಶ್ನಿಸಿದರು.

ರ್‍ಯಾಲಿಯಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥ್ ನಾರಾಯಣ್, ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಅರವಿಂದ್ ಬೆಲ್ಲದ್, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್‌ಬಾಬು, ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು, ಬಿ.ಶ್ರೀರಾಮುಲು, ಸಿ.ಟಿ.ರವಿ, ಕೆ.ಗೋಪಾಲಯ್ಯ, ಕೆ.ಸಿ.ನಾರಾಯಣಗೌಡ, ಶಾಸಕರಾದ ಜಿ.ಡಿ.ಹರೀಶ್‌ಗೌಡ, ಹೆಚ್.ಟಿ.ಮಂಜು, ಸ್ವರೂಪ್ ಪ್ರಕಾಶ್, ಶೈಲೇಂದ್ರ ಬೆಲ್ದಾಳೆ, ಎಸ್.ಎಲ್.ಭೋಜೇಗೌಡ ಮಾಜಿ ಶಾಸಕರಾದ ಕೆ.ಸುರೇಶ್‌ಗೌಡ, ಡಾ.ಕೆ.ಅನ್ನದಾನಿ, ಪಿ.ರಾಜೀವ್, ರಮೇಶ್ ಗೌಡ, ಕೆ.ಟಿ.ಶ್ರೀಕಂಠೇಗೌಡ, ಮಾಗಡಿ ಮಂಜು, ಮಾಜಿ ಸಂಸದ ಮುನಿಸ್ವಾಮಿ, ಮುಖಂಡರಾದ ಬಿ.ಆರ್.ರಾಮಚಂದ್ರು, ಡಾ.ಇಂದ್ರೇಶ್, ಡಿ.ರಮೇಶ್, ಡಾ.ಸಿದ್ದರಾಮಯ್ಯ, ಬಿ.ಸ್ವಾಮಿ, ಸಚ್ಚಿದಾನಂದ, ಮುನಿರಾಜು ಸೇರಿದಂತೆ ಹಲವು ಮಂದಿ ಭಾಗವಹಿಸಿದ್ದರು.

ಮಾನವೀಯ ಮೌಲ್ಯಗಳು, ಅನನ್ಯತೆ ಸಾರಿದ ಮಹಾನ್ ವ್ಯಕ್ತಿ ಶ್ರೀ ರಾಮಾನುಜಾಚಾರ್ಯ

ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಬಣ್ಣನೆ



'ವಿಶಿಷ್ಟಾದ್ವೈತದ–ನಯಚಿಂತನಮ್' ವಿಷಯ ಕುರಿತ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಮೈಸೂರು ವಿವಿ ಕುಲಪತಿ ಪ್ರೊ ಎನ್.ಕೆ. ಲೋಕನಾಥ್ ಉದ್ಘಾಟಿಸಿದರು.

ಮೈಸೂರು, ಆ. 7(ಆರ್‌ಕೆ)– ಆಧ್ಯಾತ್ಮ ಮಾನವೀಯ ಮೌಲ್ಯಗಳು, ಸಮಾನತೆ, ವಿಶಿಷ್ಟಾದ್ವೈತದ ಅನನ್ಯತೆಯನ್ನು ಜನತೆಗೆ ಸಾರಿದ ಮಹಾನ್ ವ್ಯಕ್ತಿ ಶ್ರೀ ರಾಮಾನುಜಾಚಾರ್ಯರು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್ ಬಣ್ಣಿಸಿದ್ದಾರೆ.


ಮೇಲುಕೋಟೆಯ ಭಗವತ್ ರಾಮಾನುಜ ರಾಷ್ಟ್ರೀಯ ಸಂಶೋಧನಾ ಸಂಸತ್ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯ ವಿದ್ಯಾಸಂಶೋಧನಾಲಯದ ವತಿಯಿಂದ ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಆಯೋಜಿಸಿದ್ದ 'ವಿಶಿಷ್ಟಾದ್ವೈತದ–ನಯಚಿಂತನಮ್' ವಿಷಯ ಕುರಿತ ರಾಜ್ಯ ಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ರಾಮಾನುಜಾಚಾರ್ಯರು, ಮಧ್ವಾಚಾರ್ಯರು ಹಾಗೂ ಶಂಕರಾಚಾರ್ಯರು ತಮ್ಮ ವಿಚಾರ ಲಹರಿಗಳನ್ನು ಜನಸಾಮಾನ್ಯನಿಗೆ ಪಸರಿಸಿದ್ದಾರೆ ಎಂದರು.

ಶಸ್ತ್ರಾಭ್ಯಾಸಗಳನ್ನು ಅನುಸರಿಸಿ ರಾಮಾನುಜಾಚಾರ್ಯರು ವೈಷ್ಣವ ಭಕ್ತಿಯ ಬೀಜ ಬಿತ್ತಿದರು. ವಿಶಿಷ್ಟಾದ್ವೈತ ಸಿದ್ಧಾಂತ ಪ್ರವರ್ತಕರಾಗಿ, ಮಹಾ ವಿಷ್ಣುವಿನ ಧ್ಯಾನ ಮಾಡುವ ಮೂಲಕ ಸಂಸ್ಕೃತದ ಬಳಕೆಯನ್ನು ಸದೃಢಗೊಳಿಸುವ ಉದ್ದೇಶ ಹೊಂದಿದೆ ಎಂದರು.

ರಾಮಾನುಜರ ವ್ಯಕ್ತಿತ್ವ, ತೀಕ್ಷ್ಣಬುದ್ಧಿ, ಗ್ರಂಥ ರಚನಾ ಸಾಮರ್ಥ್ಯ, ಅಸದೃಶ ಪಾಂಡಿತ್ಯ, ಕಾರ್ಯತತ್ಪರತೆ, ಪರಿಶುದ್ಧ ಜೀವನ, ತೀರ್ಥಯಾತ್ರೆಗಳು ಅವರ ಸಿದ್ಧಾಂತ ಸ್ಥಾಪನೆ ಹಾಗೂ ಪ್ರಚಾರಕ್ಕೆ ನೆರವಾದವು ಎಂದ ಅವರು, ಈ ಸಂಪ್ರದಾಯವನ್ನು ಸಿದ್ಧಾಂತ ಮಟ್ಟಕ್ಕೇರಿಸಿ ಅದಕ್ಕೆ ವೈಷ್ಣವ ದರ್ಶನ ಸ್ಥಾನ ಸಂಪಾದಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದರು. ಆರಾಧಕರಾಗಿ, ವಿಶಿಷ್ಟಾದ್ವೈತ ಸಿದ್ಧಾಂತವನ್ನು ಹಿಮಾಲಯದೆತ್ತರಕ್ಕೆ ಬೆಳೆಸಿ ಭಕ್ತಿಪೂರ್ವಕವಾಗಿ ಪರಮಾತ್ಮನನ್ನು ಒಲಿಸಿಕೊಳ್ಳಬಹುದೆಂಬುದನ್ನು ರಾಮಾನುಜಾಚಾರ್ಯರು ತಿಳಿಸಿಕೊಟ್ಟಿದ್ದರು ಎಂದು ಅವರು ತಿಳಿಸಿದ್ದಾರೆ. ಅಧ್ಯಕ್ಷತೆ ವಹಿಸಿ ಮಾತನಾಡಿದ ಭಗವದ ರಾಮಾನುಜಾ ರಾಷ್ಟ್ರೀಯ ಸಂಶೋಧನಾ ಸಂಸತ್ ಕುಲಸಚಿವ ಡಾ.ಎಸ್.ಕುಮಾರ್ ಮಾತನಾಡಿ, ವಿದ್ವತ್ ಪರಂಪರೆಯಲ್ಲಿ ಬೆಳೆದ ಸಂಸತ್ 50ನೇ ವರ್ಷದ ಸಂಭ್ರಮಾಚರಣೆಯಲ್ಲಿದ್ದು, ಶ್ರೀ ಭಗವಾನ್ ರಾಮಾನುಜಾಚಾರ್ಯರ ಸಿದ್ಧಾಂತಗಳನ್ನು ಸಂಶೋಧನೆ ಪ್ರಾಚ್ಯವಿದ್ಯಾ ಸಂಶೋಧನಾಲಯದ ನಿರ್ದೇಶಕ ಡಾ.ಡಿ.ಪಿ. ಮಧುಸೂದನಾಚಾರ್ಯ, ಮೈಸೂರಿನ ಶ್ರೀಮನ್ಮಹಾರಾಜ ಸಂಸ್ಕೃತ ಪಾಠಶಾಲೆ ಪ್ರಾಂಶುಪಾಲ ಡಾ. ಬಿ. ಸತ್ಯನಾರಾಯಣ, ಪ್ರಾಚ್ಯವಿದ್ಯಾ ಸಂಶೋಧನಾಲಯದ ನಿವೃತ್ತ ಉಪ ನಿರ್ದೇಶಕ ವಿದ್ವಾನ್ ಡಾ. ಟಿ.ವಿ. ಸತ್ಯನಾರಾಯಣ ಹಾಗೂ ಇತರರು ವಿಚಾರ ಸಂಕಿರಣದಲ್ಲಿ ಪಾಲ್ಗೊಂಡಿದ್ದರು.

ಇಂದು ಮತ್ತೆ ಮೈಸೂರಿಗೆ ಸಿಎಂ ಸಿದ್ದರಾಮಯ್ಯ

ಮೈಸೂರು, ಆ.7(ಪಿಎಂ)– ಸಿಎಂ ಸಿದ್ದರಾಮಯ್ಯನವರು ಆ.8ರಂದು ಮತ್ತೆ ಮೈಸೂರಿಗೆ ಆಗಮಿಸುತ್ತಿದ್ದಾರೆ. ಮಧ್ಯಾಹ್ನ 12ಕ್ಕೆ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದ ಮೂಲಕ ನಿರ್ಗಮಿಸುವ ಮುಖ್ಯಮಂತ್ರಿಗಳು, ಮಧ್ಯಾಹ್ನ 12.25ಕ್ಕೆ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದಾರೆ.



ಬಳಿಕ ಸ್ಥಳೀಯ ಕಾರ್ಯಕ್ರಮಗಳಲ್ಲಿ ಅವರು ಪಾಲ್ಗೊಂಡು ರಾತ್ರಿ 7.30ಕ್ಕೆ ಮೈಸೂರಿನ ಕನಕದಾಸನಗರದ ಪಿಕೆವಿ ಆಚಾರ್ಯ ಸಭಾ ಭವನದಲ್ಲಿ ನಡೆಯಲಿರುವ ಕೆಪಿಸಿಸಿ ಸದಸ್ಯ ಎಂ.ಎಸ್. ಮಂಜೇಗೌಡ ಅವರ ಪುತ್ರ ಅನಿಲ್ ಕುಮಾರ್ ಅವರ ವಿವಾಹ ಆರತಕ್ಷತೆ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ಆ.6ರ ಸಂಜೆ ಮೈಸೂರಿಗೆ ಆಗಮಿಸಿದ್ದ ಸಿದ್ದರಾಮಯ್ಯನವರು, ಬೆಂಗಾವಲು ವಾಹನ, ಅಂಗರಕ್ಷಕರಿಲ್ಲದೆ, ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಕಾರಿನಲ್ಲಿ ಸಂಚರಿಸಿ ಸಾರ್ವಜನಿಕರ ಗಮನ ಸೆಳೆದಿದ್ದರು. ಬಳಿಕ ಮೈಸೂರಿನಲ್ಲಿ ವಾಸ್ತವ್ಯ ಹೂಡಿದ್ದ ಅವರು, ಬುಧವಾರ ಮಾಜಿ ಎಂಎಲ್ಸಿ ಸಂದೇಶ್‌ನಾಗರಾಜ್ ಅವರೊಂದಿಗೆ ಸಂಚರಿಸಿ, ನಂತರ ಬೆಂಗಳೂರಿಗೆ ತೆರಳಿದ್ದರು.

ಕರ್ನಾಟಕ ಕ್ಲೀನ್ ಆಗಲು ಮೊದಲು ಸಿದ್ದರಾಮಯ್ಯ ರಾಜೀನಾಮೆ ನೀಡಲಿ

ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಆಗ್ರಹ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಬುಧವಾರ ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಮೈಸೂರು, ಆ.7(ಬಿಎಲ್‌ಯು)– ಭ್ರಷ್ಟಾಚಾರ ಮುಕ್ತ ವಾತಾವರಣ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಕರ್ನಾಟಕ ಕ್ಲೀನ್ ಆಗಲು ಮೊದಲು ನೀವು ರಾಜೀನಾಮೆ ನೀಡಿ ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಗ್ರಹಿಸಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ತನಿಖೆ ಎದುರಿಸಿ. ಇಲ್ಲವೆಂದರೆ ನಿಷ್ಪಕ್ಷಪಾತ ತನಿಖೆ ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟರು.

ಮುಡಾ ಹಗರಣದಲ್ಲಿ ನಾನು ಯಾವುದೇ ತಪ್ಪು ಮಾಡಿಲ್ಲ ಎಂದು ಸಿದ್ದರಾಮಯ್ಯ ಹೇಳುತ್ತಾರೆ. ಹೀಗಿರುವಾಗ ಸಿದ್ದರಾಮಯ್ಯ ನೇಮಕ ಮಾಡಿರುವ ನ್ಯಾಯಮೂರ್ತಿ ದೇಸಾಯಿ ಆಯೋಗ ಇವರ ವಿರುದ್ಧವಾಗಿ ವರದಿ ನೀಡುವುದೇ ಎಂದು ಪ್ರಶ್ನಿಸಿದರು.

ಮುಡಾ ಹಾಗೂ ವಾಲ್ಮೀಕಿ ನಿಗಮದ ಹಗರಣವನ್ನು ಸಿಬಿಐ ಅಥವಾ ಹೈಕೋರ್ಟ್ ಇಲ್ಲವೇ ಸುಪ್ರೀಂಕೋರ್ಟ್‌ನ ಹಾಲಿ ನ್ಯಾಯಾಧೀಶರಿಂದ ತನಿಖೆ ನಡೆಸಿ. ತನಿಖೆ ವೇಳೆ ನಿಮ್ಮ ತಪ್ಪಿಲ್ಲದಿದ್ದರೆ ಆರೋಪ ಮುಕ್ತರಾಗುತ್ತೀರಾ ಎಂದು ಸಲಹೆ ನೀಡಿದ ಸಿ.ಟಿ.ರವಿ, ಭ್ರಷ್ಟಾಚಾರಿಯಾಗಿ ಇರುತ್ತೀರೊ ಅಥವಾ ಕ್ಲೀನ್ ಆಗಿರುತ್ತೀರೊ ಎಂಬುದು ನಿಮ್ಮ ವಿವೇಚನೆಗೆ ಬಿಟ್ಟದ್ದು ಎಂದು ಹೇಳಿದರು.

ಕರ್ನಾಟಕದಲ್ಲಿರುವ ಅಡ್ಜೆಸ್ಟ್‌ಮೆಂಟ್ ರಾಜಕಾರಣದ ಬಗ್ಗೆ ಪ್ರತಿಕ್ರಿಯೆ ನೀಡಿದ ಸಿ.ಟಿ.ರವಿ, ಅಡ್ಜೆಸ್ಟ್‌ಮೆಂಟ್ ರಾಜಕಾರಣ ಕರ್ನಾಟಕವನ್ನು ಹಾಳು ಮಾಡುತ್ತಿದೆ. ಇದಕ್ಕೆ ಫುಲ್‌ಸ್ಟಾಪ್ ಇಡಬೇಕಾಗಿದೆ ಎಂದರು.

ನನ್ನ ರಾಜಕೀಯ ಜೀವನದಲ್ಲಿ ಸಣ್ಣ ಕಪ್ಪುಚುಕ್ಕೆ ಇಲ್ಲ ಎಂದು ಸಿದ್ದರಾಮಯ್ಯ ಹೇಳುತ್ತಾರೆ. ಆದರೆ ಮುಡಾ ಹಗರಣ, ವಾಲ್ಮೀಕಿ ನಿಗಮದ ಹಗರಣ ನಿಮಗೆ ಕಳಂಕ ಅಲ್ಲವೆ?, 884 ಎಕರೆ ಭೂಮಿಯನ್ನು ರೀಡೂ ಹೆಸರಿನಲ್ಲಿ ಡಿ ನೋಟಿಫಿಕೇಷನ್ ಮಾಡಿದ ಪ್ರಕರಣ ನಿಮಗೆ ಕಳಂಕ ಅಲ್ಲವೆ? ಎಂದು ಪ್ರಶ್ನಿಸಿದ ಸಿ.ಟಿ.ರವಿ, ರೀಡೂ ಪಿತಾಮಹ ಯಾರು, ರೀಡೂ ವ್ಯಾಖ್ಯಾನ ಏನು ಎಂದು ಸಿದ್ದರಾಮಯ್ಯ ಅವರನ್ನು ಮರು ಪ್ರಶ್ನಿಸಿದರು.

ಅರ್ಕಾವತಿ ಬಡಾವಣೆ ಹಗರಣದಲ್ಲಿ ಅಕ್ರಮ ನಡೆದಿದೆ ಎಂದು ಕೆಂಪಣ್ಣ ಆಯೋಗ ವರದಿ ನೀಡಿದೆ. ಹಾಗಾದರೆ ನೀವು ಭ್ರಷ್ಟಾಚಾರಿ ಅಲ್ಲವೆ?, ನನ್ನ ತಪ್ಪಿಲ್ಲ ಎನ್ನುವುದಾದರೆ ಕ್ರಮಕ್ಕೆ ಏಕೆ ಮುಂದಾಗಿಲ್ಲ. ಕ್ರಮ ಕೈಗೊಂಡರೆ ನನ್ನ ಬುಡಕ್ಕೆ ಬರುತ್ತದೆ ಎಂದು ಮೌನವಾಗಿದ್ದೀರಾ ಎಂದು ಕೇಳಿದರು.

ಸಿದ್ದರಾಮಯ್ಯ ಅವರು ಭ್ರಷ್ಟಾಚಾರದ ಫಲಾನುಭವಿಯೂ ಹೌದು, ಪೋಷಕರು ಹೌದು. ಇಷ್ಟೆಲ್ಲಾ ವಾಸ್ತವಾಂಶ ಇದ್ದರೂ ಸತ್ಯ ಎದುರಿಸುವ ಧೈರ್ಯ ಇಲ್ಲದೆ ಸದನದಲ್ಲಿ ಉತ್ತರ ನೀಡಲಿಲ್ಲ. ಈ ಮೂಲಕ ಪಲಾಯನ ಮಾಡಿದ್ದಾರೆ ಎಂದು ಟೀಕಿಸಿದರು.

ಕರ್ನಾಟಕದ ಪ್ರತಿಯೊಂದು ಇಲಾಖೆಯಲ್ಲೂ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಸಬ್ ರಿಜಿಸ್ಟ್ರಾರ್ ಹುದ್ದೆಯನ್ನು ಹರಾಜಿಗಿಟ್ಟಿದ್ದಾರೆ, ಅಬಕಾರಿ ಇಲಾಖೆಯ ಒಂದೊಂದು ಹುದ್ದೆಗೂ ಇಂತಿಷ್ಟು ಹಣ ನಿಗದಿ ಮಾಡಿದ್ದಾರೆ. ಇದೆಲ್ಲಾ ನಿಮ್ಮ ಸರ್ಕಾರದ ಭ್ರಷ್ಟಾಚಾರವಲ್ಲವೆ? ಎಂದು ಸಿ.ಟಿ.ರವಿ ಪ್ರಶ್ನಿಸಿದರು. ಶಾಸಕರಾದ ಟಿ.ಎಸ್.ಶ್ರೀವತ್ಸ, ಸಿ.ಎನ್.ಮಂಜೇಗೌಡ, ಮಾಜಿ ಶಾಸಕ ಸಾ.ರಾ. ಮಹೇಶ್, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಸಿದ್ದರಾಮಯ್ಯ ಅವರದು ಶಿಕ್ಷಾರ್ಹ ಅಪರಾಧ

ಮುಡಾದಲ್ಲಿ ತಮ್ಮ ಪತ್ನಿ ಹೆಸರಿನಲ್ಲಿರುವ ಬದಲಿ ನಿವೇಶನದ ಬಗ್ಗೆ ಸಿದ್ದರಾಮಯ್ಯ ಚುನಾವಣಾ ಆಯೋಗಕ್ಕೆ ತಪ್ಪು ಮಾಹಿತಿ ನೀಡಿದ್ದು, ಇದು ಶಿಕ್ಷಾರ್ಹ ಅಪರಾಧವಾಗಿದೆ ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಆರೋಪಿಸಿದರು.

ವಿಜಯನಗರದಲ್ಲಿ ಪಡೆದಿರುವ ಬದಲಿ ನಿವೇಶನದ ಬೆಲೆ 8 ಕೋಟಿ ಎಂದು ಚುನಾವಣಾ ಆಯೋಗಕ್ಕೆ ಮಾಹಿತಿ ನೀಡಿದ್ದಾರೆ. ಆದರೆ ಈಗ ಅದರ ಬೆಲೆ 62 ಕೋಟಿ ರೂಪಾಯಿ ಆಗುತ್ತದೆ ಎಂದು ಅವರೇ ಹೇಳಿದ್ದಾರೆ.

ಈ ಮೂಲಕ ಚುನಾವಣಾ ಆಯೋಗಕ್ಕೆ ತಪ್ಪು ಮಾಹಿತಿ ನೀಡಿದ್ದು, ಕಾಯ್ದೆ 125 ಎ ಪ್ರಕಾರ ಶಿಕ್ಷಾರ್ಹ ಅಪರಾಧವಾಗಿದೆ. ಇದರ ಪ್ರಕಾರ ತಪ್ಪಿತಸ್ಥರಿಗೆ ಆರು ತಿಂಗಳು ಜೈಲು ವಾಸ, ಜೊತೆಗೆ ದಂಡ ಪಾವತಿಸಬೇಕಿದೆ ಎಂದರು.

ಈ ಮೂಲಕ ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆ. ಆದರೆ ಜನರಿಗೆ ತಪ್ಪು ಮಾಹಿತಿ ನೀಡುವುದರ ಜೊತೆಗೆ ಅರ್ಧ ಸತ್ಯವನ್ನು ಮಾತ್ರ ಹೇಳುತ್ತಿದ್ದಾರೆ ಎಂದು ಸಿ.ಟಿ.ರವಿ ಆಪಾದಿಸಿದರು.

ತಮ್ಮ ಮೇಲಿರುವ ಭ್ರಷ್ಟಾಚಾರ ಆರೋಪಗಳ ಬಗ್ಗೆ ಮೊದಲು ಸ್ಪಷ್ಟನೆ ನೀಡದೆ, ತಾವು ಬಚಾವಾಗಲು ಅನವಶ್ಯಕವಾಗಿ ಯಡಿಯೂರಪ್ಪ ವಿರುದ್ಧ ಆರೋಪ ಮಾಡುತ್ತಾರೆ. ತಮ್ಮ ವಿರುದ್ಧ ರಾಜ್ಯಪಾಲರಿಗೆ ದೂರು ನೀಡಿರುವ ಅಬ್ರಹಾಂ ಮೇಲಿನ ಹಳೆ ಕೇಸ್ ಗಳನ್ನು ಈಗ ಕೆದಕುತ್ತಿದ್ದಾರೆ ಎಂದು ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದರು. ರಾಜ್ಯದ ಜನತೆಗೆ ಸಿದ್ದರಾಮಯ್ಯ ಸರ್ಕಾರದ ಭ್ರಷ್ಟಾಚಾರವನ್ನು ತಿಳಿಸಿ ಹೇಳಲು ಪಾದಯಾತ್ರೆ ನಡೆಸುತ್ತಿದ್ದು, ನಮಗೆ ದೊರಕಿರುವ ಜನ ಬೆಂಬಲ ನೋಡಿ ಕಾಂಗ್ರೆಸ್ ಹೈಕಮಾಂಡ್ ಗಾಬರಿಯಾಗಿದೆ. ಇದರಿಂದ ಭಯಭೀತರಾಗಿ ಬೆದರಿಕೆ ತಂತ್ರ ಅನುಸರಿಸುತ್ತಿದ್ದಾರೆ ಎಂದು ಸಿ.ಟಿ.ರವಿ ಆರೋಪಿಸಿದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಬೇಕಾಗಿದ್ದಾರೆ
ಮೈಸೂರು ಹಾಗೂ ನಗುನಹಳ್ಳಿ ಸಿದ್ದಲಿಂಗಪುರ ಸುತ್ತಮುತ್ತಾ ಕಾರ್ಯ ನಿರ್ವಹಿಸಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
380/ಎ, 2ನೇ ಮಹಡಿ, ಕೃಷ್ಣವಿಲಾಸ ರಸ್ತೆ, ಮೈಸೂರು
9606023464

100% ಕೆಲಸ
ಮೈಸೂರಿನ ಎಲ್ಲಾ ಹೆಸರಾಂತ ಕಂಪನಿಗಳಿಗೆ 5th, 10th, PUC, ITI, Diploma, Any Degree, M.Com, MBA, ಆದವರಿಗೆ Parking, Helper, Q/C, Machine Operator, Tellicalling, Data entery, Receptionist, Cashier, Accounts, Billing, Admin, HR Assistant & Drivers ಬೇಕಾಗಿದ್ದಾರೆ. ESI+PF+OT ನೊಂದಿಗೆ ಸಂಬಳ : 18000/– ರಿಂದ 46000/–
9916641959,9741307322

ಸೈಟು/Apartment ಮಾರಾಟಕ್ಕಿದೆ
50x80 ನಿವೇಶನ ವಿಜಯನಗರ 4ನೇ, 2ನೇ ಫೇಸ್ ಕಲ್ಯಾಣನಗರದಲ್ಲಿ
Muda Documents Apartment
Trenz 3BHK ಬೋಗಾದಿ ರೋಡ್
WANTED SITE MUDA
ಸೈಟು ಮನೆ ಕ್ರಯಕ್ಕೆ ಕೊಡುವ ಮಾಲೀಕರು ಸಂಪರ್ಕಿಸಿ: (Brokers Excuse)
9448938989
7892035789

100% TEAK WOOD
FACTORY FINISH DOORS & FRAMES
@ FACTORY DEPOT RATES
10 YEARS WARRANTY*
9845426862
9901291267

ರಾಜ ಕಾಲುವೆ ಮೇಲೆ ನಿರ್ಮಿಸುತ್ತಿದ್ದ ಕಟ್ಟಡ ನೆಲಸಮ



ಮೈಸೂರು, ಆ. 7(ಆರ್‌ಕೆ)–ಮೈಸೂರಿನ ಕುರುಬಾರಹಳ್ಳಿ ಸರ್ವೆ ನಂ.4ರ ಕೆ.ಸಿ.ಬಡಾವಣೆಯಲ್ಲಿ ಹಾದು ಹೋಗಿರುವ ರಾಜ ಕಾಲುವೆ ಮೇಲೆ ಅಕ್ರಮವಾಗಿ ನಿರ್ಮಿಸುತ್ತಿರುವ ಕಟ್ಟಡವನ್ನು ಮಂಗಳವಾರ ತಹಸೀಲ್ದಾರ್ ಕೆ.ಎಂ. ಮಹೇಶ ಕಾರ್ಯಾಚರಣೆ ನಡೆಸಿ ನೆಲಸಮಗೊಳಿಸಿದ್ದಾರೆ.

ರಾಜಾ ಕಾಲುವೆ ಒತ್ತುವರಿ ಮಾಡಿ ಅದರ ಮೇಲೆ ಪಿಲ್ಲರ್‌ಗಳನ್ನು ಹಾಕಿ ವಾಣಿಜ್ಯ ಕಟ್ಟಡ ನಿರ್ಮಿಸುತ್ತಿದ್ದಾರೆ ಎಂದು ಆರ್‌ಟಿಐ ಕಾರ್ಯಕರ್ತ ಬಿ.ಎನ್. ನಾಗೇಂದ್ರ ನೀಡಿದ ಲಿಖಿತ ದೂರಿನ ಮೇರೆಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ ರಾಜಾ ಕಾಲುವೆ ಒತ್ತುವರಿ ಮಾಡಿ ಕಟ್ಟಡ ನಿರ್ಮಿಸುತ್ತಿರುವುದು ಕಂಡುಬಂದ ಹಿನ್ನೆಲೆಯಲ್ಲಿ ಮಂಗಳವಾರ ಬೆಳಗ್ಗೆ ತೆರವು ಕಾರ್ಯಾಚರಣೆ ನಡೆಸಿದರು.

ದಾಖಲೆಗಳನ್ನು ಪರಿಶೀಲಿಸಿದಾಗ ನಕಲಿ ದಾಖಲೆ ಸೃಷ್ಟಿಸಿಕೊಂಡು ಚಂದ್ರಶೇಖರ ಎಂಬುವರು ಅಕ್ರಮವಾಗಿ ಕಟ್ಟಡ ನಿರ್ಮಿಸುತ್ತಿದ್ದುದು ದೃಢಪಟ್ಟ ಕಾರಣ ತಹಸೀಲ್ದಾರ್ ಮಹೇಶ್ ಜೆಸಿಬಿ ಮೂಲಕ ಕಾರ್ಯಾಚರಣೆ ನಡೆಸಿ ಕಟ್ಟಡವನ್ನು ನೆಲಸಮಗೊಳಿಸಿದರು. ಜೆಸಿ ನಗರದ ನಿವೇಶನ ಸಂಖ್ಯೆ 309/1ರ ರೀತ್ಯಾ ಮೈಸೂರು ಮಹಾನಗರ ಪಾಲಿಕೆ ವಲಯ ಕಚೇರಿ–1ರಲ್ಲಿ ಕಂದಾಯ ಪಾವತಿಸಿ ನಕಲಿ ದಾಖಲೆ ಸೃಷ್ಟಿಸಿಕೊಂಡು ವಿದ್ಯುತ್ ಮತ್ತು ನೀರಿನ ಸಂಪರ್ಕವನ್ನು ಪಡೆದಿರುವುದು ಕಂಡುಬಂದಿದೆ. ನಜರ್‌ಬಾದ್ ಠಾಣೆ ಪೊಲೀಸರ ಭದ್ರತೆಯೊಂದಿಗೆ ರಾಜಾ ಕಾಲುವೆ ಮೇಲೆ ನಿರ್ಮಿಸುತ್ತಿದ್ದ ಕಟ್ಟಡವನ್ನು ತೆರವುಗೊಳಿಸಲಾಯಿತು. ಈ ವೇಳೆ ತೆರವು ಕಾರ್ಯಾಚರಣೆಯಲ್ಲಿ ಕಸಬಾ ಹೋಬಳಿ ರೆವಿನ್ಯೂ ಇನ್ಸ್‌ಪೆಕ್ಟರ್ ಹೇಮಂತಕುಮಾರ್, ಗ್ರಾಮ ಆಡಳಿತಾಧಿಕಾರಿ ನಾಗೇಶ, ಪಾಲಿಕೆ ವಲಯ ಕಚೇರಿ–1ರ ವಲಯಾಧಿಕಾರಿ ಮಂಜುನಾಥ ರೆಡ್ಡಿ, ಸಹಾಯಕ ಕಂದಾಯ ಅಧಿಕಾರಿ ನಂದೀಶ, ರೆವಿನ್ಯೂ ಇನ್ಸ್‌ಪೆಕ್ಟರ್ ಮುರುಗೇಶ್ ಹಾಗೂ ಚೆಸ್ಕಾಂ ಸಿಬ್ಬಂದಿ ಪಾಲ್ಗೊಂಡಿದ್ದರು.

ಮೈಮುಲ್ ನೂತನ ಅಧ್ಯಕ್ಷರಾದ **ಚೆಲುವರಾಜು** ಅವರಿಗೆ ಶುಭಾಶಯಗಳು. ಇವರಿಗೆ ತಾಯಿ ಚಾಮುಂಡೇಶ್ವರಿ ಇನ್ನೂ ಹೆಚ್ಚಿನ ಅಧಿಕಾರ, ಅಂತಸ್ತು ಕರುಣಿಸಲೆಂದು ಶುಭ ಕೋರುವ,
ಲಾರಿ ಚಂದ್ರು
ಮಂಚೇಗೌಡನಕೊಪ್ಪಲು–ಹೆಬ್ಬಾಳ್, ಮೈಸೂರು

ಸ್ನೇಹಜೀವಿ
ಶ್ರೀ ಮಹೇಶ್‌ಗೌಡರವರಿಗೆ ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು :
ನಂಜುಂಡಸ್ವಾಮಿ, ಅಧ್ಯಕ್ಷರು
ಸಿಂಹದಮರಿ ಸೇವಾ ಟ್ರಸ್ಟ್ (ರಿ.)
ಶಿವರಾಜ್‌ಕುಮಾರ್ ಮತ್ತು ಅಪ್ಪು ಅಭಿಮಾನಿಗಳ ಸಂಘ, ಶಿವರಾಂಪೇಟೆ, ಮೈಸೂರು

ವಿದೇಶ ಪ್ರಯಾಣ
ಶ್ರೀ ಶ್ರೀನಿವಾಸ ರಾವ್ ಮತ್ತು ಶ್ರೀಮತಿ ರೋಹಿಣಿ ಸಂಜೀವ್
ಅವರು ಆಸ್ಟ್ರೇಲಿಯಾದ ಸಿಡ್ನಿಗೆ ತಾ.9ರಂದು ಪ್ರಯಾಣ ಬೆಳಸಲಿದ್ದಾರೆ ಇವರ ಪ್ರಯಾಣ ಸುಖಕರವಾಗಿರಲೆಂದು
ಶುಭಕೋರುವವರು: ವಾಲ್ಮೀಕಿ ಸಂಜೀವ್, ಶೋಭಾ, ಸುಗ್ರೀವ ಮತ್ತು ವಿರಿಂಚಿ

WANTED
We want one
FIELD OFFICER & BUSINESS DEVELOPMENT EXECUTIVE
to mysore location
Call:9980911233

WE ARE HIRING
Open Position
• SITE ENGINEER
• SALES EXECUTIVE
Send your Resume to
hiremenow235@gmail.com

ಜಗತ್ತಿನಾದ್ಯಂತ ತಾಯಂದಿರ ವಿಶ್ವಾಸವನ್ನು ಹೊಂದಿರುವ.
ಈಗ medifacts ನಿಂದ ಅನುಮೋದಿಸಲ್ಪಟ್ಟಿದೆ.
170 ವರ್ಷಗಳಿಂದ
ಸಣ್ಣ ಮಕ್ಕಳು ಮತ್ತು ಶಿಶುಗಳ ಗ್ಯಾಸ್, ಅಸಿಡಿಟಿ ಮತ್ತು ಅಜೀರ್ಣದಿಂದ ಉಂಟಾಗುವ ಹಿಡಿತ ಮತ್ತು ಹೊಟ್ಟೆ ನೋವಿನಿಂದ ಅಳುತ್ತಿದ್ದರೆ ತಕ್ಷಣ ಉಪಶಮನ ನೀಡುತ್ತದೆ.
• ಹಲ್ಲುಬರುವಾಗ ಪ್ರಯೋಜನಕಾರಿ
• ಜೀರ್ಣಕ್ರಿಯೆಯನ್ನು ಉತ್ತೇಜಿಸುತ್ತದೆ
• ಆರೋಗ್ಯಕರ ಬೆಳವಣಿಗೆಯನ್ನು ಖಚಿತಪಡಿಸುತ್ತದೆ
WOODWARD'S CELEBRATED GRIPE WATER
GOODNESS OF AYURVEDA · ALCOHOL FREE · 3 TIMES DAILY · TRUSTED BY MOTHERS SINCE 1851 · SAFE FOR INFANTS
www.woodwards.in

SITE FOR SALE
40'×60' South -East Corner Site
at Doctors Layout, Vajamangala, Mysuru - Bannur Road, Mysuru.
Ready for registration and construction. Clear title deed.
MUDA APPROVED
Contact: 8217714653

2ನೇ ವರ್ಷದ ಸವಿನೆನಪು
ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ಸದಾ ನಿಮ್ಮ ಆಶೀರ್ವಾದ ಹಾಗೂ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಪತಿ: ಸಿ.ಮಹದೇವು (ರೈಲ್ವೆ ನಿವೃತ್ತ) ಮತ್ತು ಗಂಡುಮಕ್ಕಳು, ಸೊಸೆಯಂದಿರು, ಹೆಣ್ಣುಮಕ್ಕಳು ಹಾಗೂ ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು.
ವನಜಾಕ್ಷಿ
ಇಟ್ಟಿಗೆಗೂಡು

ಹಸಿರು ನಮ್ಮ ಉಸಿರು

MEGAVIN Vascular Care
ಈ ಸಮಸ್ಯೆಗಳಿಂದ ಬಳಲುತ್ತಿದ್ದೀರಾ..?
ಕಾಲುಗಳಲ್ಲಿ ನೋವು
ಸೆಳೆತ/ತುರಿಕೆ /ಊತ
ಚರ್ಮದ ಬಣ್ಣ ಕಪ್ಪಾಗುವುದು
ಕಾಲಿನ ಗಾಯಗಳು/ಹುಣ್ಣುಗಳು
ಶಸ್ತ್ರ ಚಿಕಿತ್ಸೆ ಇಲ್ಲದೆ ವ್ಯಾಸ್ಕ್ಯುಲಾರ್ ಥೆರಪಿ!! ಮೈಸೂರಿಲ್ಲಿ...
ಪ್ರತಿ ಶುಕ್ರವಾರ
10:00 AM to 2:00 PM
7314599869
ಡಾ. ವಿನಯ್ ನ್ಯಾಪತಿ
ಇಂಟರ್‌ವೆನ್ಷನಲ್ ರೇಡಿಯೋಲಜಿಸ್ಟ್ ಕ್ಲಿನಿಕಲ್ & ವ್ಯಾಸ್ಕುಲಾರ್
ರಾಮ ಕೃಷ್ಣ ಹಾಸ್ಪಿಟಲ್
ಲಕ್ಷ್ಮೀಬಾಯಿ ರಸ್ತೆ, ವಿದ್ಯಾರಣ್ಯಪುರಂ, ಮೈಸೂರು

ವೈಕುಂಠ ಸಮಾರಾಧನೆ
ಶ್ರೀ ರಂಗಶೆಟ್ಟಿ (ಚಿಕ್ಕೂಸು ಶೆಟ್ಟರು)
ಹಳೆಯ ತಲೆಮಾರಿನ ಕೊನೆಯ ಕುಡಿ ಅಜಾತ ಶತ್ರು, ಮುದ್ದು ಮೊಮ್ಮಕ್ಕಳು, ನೆಚ್ಚಿನ ತಾತ, ಹಿರಿಯ ಚೇತನ ಶ್ರೀ ರಂಗಶೆಟ್ಟಿ (ಚಿಕ್ಕೂಸು ಶೆಟ್ಟರು) ನಿಧನರಾಗಿದ್ದಾರೆ.
ಮರಣ ದಿನಾಂಕ: 31.07.2024,
ವೈಕುಂಠ ಸಮಾರಾಧನೆ: 10.08.2024
ದುಃಖತಪ್ತರು: ಮೃತರ ಧರ್ಮಪತ್ನಿ ಶ್ರೀಮತಿ ರಾಜಮ್ಮ ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು, ಚಂದಕವಾಡಿ
ಮೊ: 9880777828

3 BHK Luxury Villas for Sale @ Mysore
Vijaynagar 4th Stage
• Vaastu compliant
• Ready for registration
• With Unique, Sleek & Contemporary Design
• Price starts at Rs.1.85 Cr
For more details, call: 99722 75566

ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್, ಮೈಸೂರು
ದೂ: 0821-2424246
ಗುತ್ತಿಗೆದಾರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭದ ಆಹ್ವಾನ ಪತ್ರಿಕೆ
ದಿನಾಂಕ : 10.08.2024, ಶನಿವಾರ ಸಮಯ : ಸಂಜೆ 5–00 ಗಂಟೆ
ದಿವ್ಯ ಸಾನಿಧ್ಯ : ಶ್ರೀ ಶ್ರೀ ಶ್ರೀ ಸೋಮೇಶ್ವರನಾಥ ಸ್ವಾಮೀಜಿಯವರು
ಶ್ರೀಕ್ಷೇತ್ರ ಆದಿಚುಂಚನಗಿರಿ ಮಹಾಸಂಸ್ಥಾನ ಮಠ, ಮೈಸೂರು ಶಾಖೆಯ ಮುಖ್ಯಸ್ಥರು.
ಅಧ್ಯಕ್ಷತೆ : ಸನ್ಮಾನ್ಯ ಶ್ರೀ. ಮಹಾಲಿಂಗಂರವರು
ಅಧ್ಯಕ್ಷರು, ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ.. ಮೈಸೂರು.
ಮುಖ್ಯ ಅತಿಥಿಗಳು : ಸನ್ಮಾನ್ಯ ಶ್ರೀ. ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ರವರು
ಸಂಸದರು. ಮೈಸೂರು ಹಾಗೂ ಕೊಡಗು ಲೋಕಸಭಾ ಕ್ಷೇತ್ರ, ಮೈಸೂರು.
ಮುಖ್ಯ ಭಾಷಣಕಾರರು : ಸನ್ಮಾನ್ಯ ಶ್ರೀ. ಡಾ|| ಎನ್. ಎಸ್. ರಂಗರಾಜು ರವರು
ನಿವೃತ್ತ ಪ್ರಾಧ್ಯಾಪಕರು ಮತ್ತು ಛೇರ್ಮನ್‌ರವರು. ಮಾನಸ ಗಂಗೋತ್ರಿ, ಮೈಸೂರು. ಹಾಗೂ ಜಿಲ್ಲಾ ಪಾರಂಪರಿಕ ಸಂರಕ್ಷಣಾ ಸಮಿತಿ ಸದಸ್ಯರು.
ಸನ್ಮಾನ್ಯ ಶ್ರೀ. ವಿ. ಕುಮಾರ್ ರವರು
ಉಪಾಧ್ಯಕ್ಷರು, ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ.. ಮೈಸೂರು.
ಸ್ಥಳ : ರಿಯೋ ಮೆರಿಡಿಯನ್ ಸಭಾಂಗಣ, ಯೂನಿಟ್ ಆಫ್ ರಿಯೋ ಮೆರಿಡಿಯನ್ ಹೋಟೆಲ್ಸ್ ಪ್ರೈ. ಲಿ., ನ್ಯೂ ಸಯ್ಯಾಜಿರಾವ್ ರಸ್ತೆ, ಹೈವೇ ಸರ್ಕಲ್, ಮೈಸೂರು.
ತಮ್ಮೆಲ್ಲರಿಗೂ ಸ್ವಾಗತ ಕೋರುವ
ಆಡಳಿತ ಮಂಡಳಿ ಸದಸ್ಯರು
ಸೊಸೈಟಿಯ ಆಡಳಿತ ಮಂಡಳಿ :
ಶ್ರೀ. ಮಹಾಲಿಂಗಂ, ಅಧ್ಯಕ್ಷರು, ಶ್ರೀ. ವಿ. ಕುಮಾರ್, ಉಪಾಧ್ಯಕ್ಷರು,
ನಿರ್ದೇಶಕರುಗಳು :
ಶ್ರೀ. ಸಿ. ಡಿ. ಕೃಷ್ಣ, ಶ್ರೀ. ಕೆ. ರವಿ, ಶ್ರೀ. ಕೆ. ವಿ. ಚಿನ್ನಯ್ಯ, ಶ್ರೀ. ದೇವೇಂದ್ರ, ಶ್ರೀ. ಕೆ. ನಾಗರಾಜು, ಶ್ರೀ. ಕೆ. ದಶರಥ್, ಶ್ರೀ. ಹೆಚ್. ಎಂ. ಪರಶಿವಮೂರ್ತಿ, ಶ್ರೀ. ರಾಚೇಗೌಡ, ಶ್ರೀ. ಎಂ. ಎಸ್. ರೇವಣ್ಣ, ಶ್ರೀ. ಜಿ. ಅಶೋಕ್, ಶ್ರೀ. ಸಿ. ವೆಂಕಟಪ್ಪ, ಶ್ರೀ. ಎ. ಕುಮಾರ್, ಶ್ರೀಮತಿ. ಜಯಲಕ್ಷ್ಮಿ, ಶ್ರೀಮತಿ. ಟಿ. ಅನುಸೂಯ, ಶ್ರೀ. ರೇವನಾಯಕ
ವಿಶೇಷ ಸಲಹೆಗಾರರು :
ಶ್ರೀ. ಬಿ. ಪುಟ್ಟಸ್ವಾಮಿ, ಶ್ರೀ. ಎಸ್. ಗೋಪಾಲರಾಜು, ಶ್ರೀ. ಮಾದೇಗೌಡ

ಬೇಕಾಗಿದ್ದಾರೆ
ಮೈಸೂರಿನಲ್ಲಿ ನೂತನವಾಗಿ ಪ್ರಾರಂಭವಾಗುತ್ತಿರುವ ಪ್ರತಿಷ್ಠಿತ ಜ್ಯೂವೆಲ್ಲರಿ ಶೋರೂಂಗೆ
ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ಸ್ ಬೇಕಾಗಿದ್ದಾರೆ.
ಸಂಬಳ: ರೂ.24,000/– ಹಾಗೂ ವಸತಿ ಸೌಲಭ್ಯವಿದೆ.
ವಯೋಮಿತಿ: 20–35 ವರ್ಷ
ಸಂದರ್ಶನದ ದಿನಾಂಕ:
10–08–2024 । ಶನಿವಾರ
ಸಮಯ: ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 3.00 ರ ವರೆಗೆ
ಸ್ಥಳ: ಹೋಟೆಲ್ ಪ್ರೀತಿ ಇಂಟರ್‌ನ್ಯಾಷಿನಲ್ ಫೈವ್ ಲೈಟ್ ವೃತ್ತ, ಲಷ್ಕರ್ ಮೊಹಲ್ಲ, ಮೈಸೂರು
ಆಸಕ್ತಿಯುಳ್ಳ ಅಭ್ಯರ್ಥಿಗಳು ಸ್ವವಿವರದೊಂದಿಗೆ ಸಂಪರ್ಕಿಸಿ:
✆81119 68285

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ನಂಜನಗೂಡು ತಾಲ್ಲೂಕು, ಕಸಬಾ ಹೋಬಳಿ, ಸಿಂಧುವಳ್ಳಿ ಗ್ರಾಮದಲ್ಲಿ ವಾಸವಾಗಿರುವ ಲೇಟ್ ರಂಗಯ್ಯರವರ ಮಗನಾದ ಶ್ರೀ ನವೀನ್ ಕುಮಾರ್.ಆರ್. ರವರ ಇರಾದೆಯ ಮೇರೆಗೆ ಈ ಮೂಲಕ ಸಾರ್ವಜನಿಕವಾಗಿ ತಿಳಿಯಪಡಿಸುವುದೇನೆಂದರೆ, ಮೈಸೂರು ಸಿಟಿ, ಬೋಗಾದಿ ಮುಖ್ಯರಸ್ತೆ, ಗದ್ದಿಗೆ, ನಂ.453 ರಲ್ಲಿ ವಾಸವಾಗಿರುವ ಕುನ್ನಯ್ಯರವರ ಮಗನಾದ ಶ್ರೀ ಬಿ.ಕೆ. ರಾಜು ರವರಿಂದ ನಮ್ಮ ಕಕ್ಷಿದಾರರು ಖರೀದಿಸಲು ಇಚ್ಛಿಸಿರುವುದರಿಂದ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತಿನಲ್ಲಿ ಸಾರ್ವಜನಿಕರಾದ ತಮಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇದ್ದಲ್ಲಿ, ನಮ್ಮ ಕಕ್ಷಿದಾರರ ಪರವಾಗಿ ಈ ಕೆಳಗೆ ನಮೂದಿಸಿರುವ ವಕೀಲರಿಗೆ ನೋಟಿಸ್ ಪ್ರಕಟಗೊಂಡ 7 ದಿನಗಳ ಒಳಗೆ ತಮ್ಮ ಯಾವುದೇ ತಂಟೆ, ತಕರಾರು ಹಾಗೂ ಹಕ್ಕು ಹಿತಾಸಕ್ತಿ ಇದ್ದಲ್ಲಿ ಲಿಖಿತವಾಗಿ ಅಥವಾ ಇತರೆ ಯಾವುದೇ ಮಾಧ್ಯಮದಲ್ಲಿ ತಮ್ಮ ತಕರಾರನ್ನು ತಿಳಿಸಬೇಕೆಂದು ಹಾಗೂ ನಮ್ಮಿಂದ ಅಥವಾ ನಮ್ಮ ಕಕ್ಷಿದಾರರಿಂದ ಸ್ವೀಕೃತಿ ಪಡೆಯಬೇಕೆಂದು ಇಲ್ಲದೆ ಇದ್ದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಸ್ವತ್ತನ್ನು ಖರೀದಿಸುತ್ತಾರೆ, ಖರೀದಿಸಿದ ನಂತರದಲ್ಲಿ ನಮ್ಮ ಕಕ್ಷಿದಾರರಿಗೆ ಮುಂದೆ ಉಂಟಾಗುವ ತಂಟೆ ತಕರಾರಿಗೆ ನಮ್ಮ ಕಕ್ಷಿದಾರರು ಬಾಧ್ಯರಾಗಿರುವುದಿಲ್ಲವೆಂದು ಈ ಮೂಲಕ ಸಾರ್ವಜನಿಕವಾಗಿ ತಿಳಿಯಪಡಿಸಲಾಗಿದೆ.

ಷೆಡ್ಯೂಲ್: ಮೈಸೂರು ಜಿಲ್ಲೆ ಹೆಚ್.ಡಿ.ಕೋಟೆ ತಾಲ್ಲೂಕು, ಹಂಪಾಪುರ ಹೋಬಳಿ, ಚಿಕ್ಕಕೆರೆಯೂರು ಗ್ರಾಮಕ್ಕೆ ಸೇರಿದ ಸ.ನಂ.5 ರ ವಿಸ್ತೀರ್ಣ 2 ಎಕರೆ 13 ಗುಂಟೆ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ :ಚಿನ್ನಮ್ಮರವರ ಬಾಬ್ತು ಸ.ನಂ.6 ಮತ್ತು 7 ರ ಜಮೀನು, ಕುಸುಮ ಎನ್.ಜಿ.ರವರ ಬಾಬ್ತು ಸ.ನಂ.38/2 ರ ಜಮೀನು, ಪಶ್ಚಿಮಕ್ಕೆ : ಚಾನಲ್ ರಸ್ತೆ ಮತ್ತು ಮಹದೇವಪ್ಪರವರ ಬಾಬ್ತು ಸ.ನಂ.1 ರ ಜಮೀನು, ಉತ್ತರಕ್ಕೆ : ಸರ್ಕಾರಿ ರಸ್ತೆ, ದಕ್ಷಿಣಕ್ಕೆ : ಶಿವಪ್ಪರವರ ಬಾಬು ಸ.ನಂ.4/1 ರ ಜಮೀನು

Sd/- R .Sunil Kumar, B.A..L.L.B
Advocate. #5, 1st Floor, Manjunatha Complex, Opposite Police Quaters, Ramasetty Layout, Ooty Main Road Nanjanagudu. Mob: 9964889769, 8152815439. E-mail: sunilrdev7695@gmail.com
Date: 07/08/2024

ಕಾರ್ಯಕ್ರಮಗಳು ಹಾಗೂ ಸಭೆಗಳಿಗೆ
ವೈದ್ಯರ ಸಮುದಾಯ ಭವನ
ಅಲನಹಳ್ಳಿ, ಟಿ.ನರಸೀಪುರ ರಸ್ತೆ, ರಿಂಗ್ ರಸ್ತೆ ಜಂಕ್ಷನ್, ಮೈಸೂರು
ಸುಸಜ್ಜಿತ ಸಭಾಂಗಣ, ಡೈನಿಂಗ್ ಹಾಲ್, ಜನರೇಟರ್, ಪಾರ್ಕಿಂಗ್ ಸ್ಥಳ, ಇತ್ಯಾದಿ.
Call : 96111 72148, 94495 61722, 98451 29002
Office time 11 am to 6.00 pm on all days

IMKTA TEACHER TRAINING PROGRAMS INDIA MYSORE
IMKTA Since 2003
20 years of success in PreSchool Teacher Training and Placements
JOIN DIPLOMA MONTESSORI/ PRIMARY TEACHER TRAINING
DIPLOMA IN SPECIAL EDUCATION
• Learning Disability • Autism
• ADHD Syndrome • Slow Learners
GET PLACED IN INDIA, DUBAI, QATAR, UAE, SHARJAH, OMAN
• FOR SSLC, PUC OR ANY GRADUATES • REGULAR/ SATURDAY CLASS
• 20 years of Success • 30,000+ Alumni
• 800+ School Partnership • 25 Branches in India
Admission Open
Alpha International School
Manandavadi Road, Near Ring Road Signal Junction, Srirampura, Mysore
Online course available
7829937469
WWW.IMKTA.IN

ನಾಗರ ಪಂಚಮಿ ಹಾಗೂ ವರಮಹಾಲಕ್ಷ್ಮಿ ಹಬ್ಬದ ಶುಭಾಶಯಗಳು
ಮೈಸೂರಿನ ಹೃದಯ ಭಾಗವಾದ ಕೆ.ಟಿ.ಸ್ಟ್ರೀಟ್ ಮುಖ್ಯ ರಸ್ತೆಯಲ್ಲಿರುವ ಮಳಿಗೆಗಳು ಬಾಡಿಗೆಗೆ ದೊರೆಯುತ್ತವೆ.

ನಿವೇಶನದ ವಿವರ		
	ನೆಲ ಅಂತಸ್ತು	10'x11' ಅಳತೆಯ ಮಳಿಗೆಗಳು
	ಮೊದಲ ಮಹಡಿ	10'x23' ಅಳತೆಯ ಮಳಿಗೆಗಳು
	2ನೇ ಮಹಡಿ	1750 ಚದರ ಅಡಿ ಅಳತೆಯ ಹಾಲ್
	3ನೇ ಮಹಡಿ	1750 ಚದರ ಅಡಿ ಅಳತೆಯ ಹಾಲ್
	ಟೆರೇಸ್	1750 ಚದರ ಅಡಿ ಅಳತೆಯ ಖಾಲಿ ಜಾಗ

ಇವುಗಳು ಸ್ಟುಡಿಯೋ, ಸಾಫ್ಟ್‌ವೇರ್ ಕಂಪನಿ, ರೂಫ್ ಟಾಪ್ ರೆಸ್ಟೋರೆಂಟ್, ಆಫೀಸ್, ಶೋರೂಂ, ಚಾಟ್ ಸೆಂಟರ್, ಕೋಚಿಂಗ್ ಸೆಂಟರ್‌ಗಳಿಗಾಗಿ ಉಪಯುಕ್ತವಾಗಿವೆ. ಲಿಫ್ಟ್ ಮತ್ತು ಬೋರ್‌ವೆಲ್ ಸೌಲಭ್ಯವಿರುತ್ತದೆ.



ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
Mob: 98440 94100

ಗುರುಕುಲ ಪತ್ತಿನ ಸಹಕಾರ ಸಂಘ ನಿಯಮಿತ ಮೈಸೂರು

ಮುಖ್ಯ ಕಛೇರಿ : #22/2, ಮೊದಲನೆ ಮಹಡಿ, 1ನೇ ಕ್ರಾಸ್, ಬಸವೇಶ್ವರ ರಸ್ತೆ (ಪಾರ್ಕ್ ಎದುರು), ಗುರುಕುಲ ಬಡಾವಣೆ, ಜೆ.ಪಿ.ನಗರ ರಿಂಗ್ ರೋಡ್, ಕುಪ್ಪಲೂರು, ಮೈಸೂರು–570031
ನೋಂದಣಿ ಸಂಖ್ಯೆ : ಸಸಂನಿ/ಯುಬಿಸಿ–7/56/ಆರ್‌ಜಿಎನ್/53750/2019–2020

ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 11.08.2024 ಭಾನುವಾರ ಬೆಳಗ್ಗೆ 11:00 ಗಂಟೆಗೆ ಸಂಘದ ಅಧ್ಯಕ್ಷರಾದ ಡಾ. ಎಂ. ಎಸ್. ಮಹದೇವಸ್ವಾಮಿ ರವರ ಅಧ್ಯಕ್ಷತೆಯಲ್ಲಿ ಸಂಘದ ನಾಲ್ಕನೇ ವರ್ಷದ ವಾರ್ಷಿಕ ಸರ್ವಸದಸ್ಯರ ಮಹಾಸಭೆಯು ಸ್ಥಳ ಗುರುಕುಲ ಅಕಾಡೆಮಿ ಶಾಲೆಯ ಸಭಾಂಗಣ, #77, 4ನೇ ಕ್ರಾಸ್, ಸರ್.ಎಂ. ವಿಶ್ವೇಶ್ವರಯ್ಯ ಮಾರ್ಗ, ಜೆ.ಪಿ.ನಗರ ಔಟರ್ ರಿಂಗ್ ರೋಡ್ ಗುರುಕುಲ ಲೇಔಟ್ ಮೈಸೂರು–31. ಇಲ್ಲಿ ನಡೆಯಲಿದೆ. ಈ ಮೂಲಕ ಎಲ್ಲಾ ಅರ್ಹ ಸದಸ್ಯರು ಸಭೆಯಲ್ಲಿ ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ಮನವಿ.

ಸ್ಥಳ : ಮೈಸೂರು
ಸಹಿ /- ಸೌಮ್ಯ.ಎಂ, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಗುರುಕುಲ ಪತ್ತಿನ ಸಹಕಾರ ಸಂಘ, ಮೈಸೂರು

ಕರ್ನಾಟಕ ಸರ್ಕಾರ ಜಲಸಂಪನ್ಮೂಲ ಇಲಾಖೆ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ನಂ.1, ನೀರಾವರಿ ತನಿಖಾ ವಿಭಾಗ, ಕಾವೇರಿ ಭವನ ಸಂಕೀರ್ಣ, ಗೋಕುಲಂ, 4ನೇ ಹಂತ, ಮೈಸೂರು–570020.
ದೂರವಾಣಿ : 0821–2411420

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 03/2024–25 ದಿನಾಂಕ: 06.08.2024 (2ನೇ ಕರೆ)

ಕಾರ್ಯಪಾಲಕ ಇಂಜಿನಿಯರ್, ನಂ.1, ನೀರಾವರಿ ತನಿಖಾ ವಿಭಾಗ, ಮೈಸೂರು ಇವರು ರಾಜ್ಯಪಾಲರು, ಕರ್ನಾಟಕ ಸರ್ಕಾರ ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗಳಿಗೆ ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹಏಜೆನ್ಸಿದಾರರು/ ಅರ್ಹಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಶೇಕಡವಾರು (ಸೇವಾಶುಲ್ಕ ಬಾಬ್ತು) ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು.

ಕ್ರ ಸಂ	ಸೇವೆಯ ಹೆಸರು	ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ (ರೂ.ಗಳಲ್ಲಿ)	ಅವಧಿ	ಇಎಂಡಿ ಮೊತ್ತ ರೂ.	ಟೆಂಡರ್ ಪ್ರೊಸೆಸಿಂಗ್ ಶುಲ್ಕ(ರೂ.ಗಳಲ್ಲಿ)
1	Annual Maintenance work for Bannur and Lokapavani CMG for year 2024-25.	7,60,219.2	08 ತಿಂಗಳು	19,050/–	ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ಸೂಚಿಸಿರುವಂತೆ
2	Annual Maintenance work for Bavali Hanasoge Kushala nagara and Bidalli River Gauge for year 2024-25.	7,72,454.26	08 ತಿಂಗಳು	19,350/–	

ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ:06.08.2024 ರಂದು ಸಂಜೆ 5.00 ಗಂಟೆಯ ನಂತರ ಪಡೆಯಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ : 16.08.2024 ಸಂಜೆ 4.00 ಗಂಟೆ, ಬಿಡ್ ತೆರೆಯುವ ದಿನಾಂಕ: 17.08.2024 ಸಂಜೆ 4.30 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/–
ಕಾರ್ಯಪಾಲಕ ಇಂಜಿನಿಯರ್,
ನಂ.1, ನೀರಾವರಿ ತನಿಖಾ ವಿಭಾಗ, ಮೈಸೂರು.

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು